# ಶಿರಸಿ ನಗರಸಭೆ ವಿಶೇಷ ಸಭೆ ಪ್ರೊಸೀಡಿಂಗ್ಸ್ ನಂ. 20.

**ದಿನಾಂಕ: 15-12-2009 ಬೆಳಗ್ಗೆ 11:00 ಘಂಟೆಗೆ ನಗರಸಭಾ ಭವನದಲ್ಲಿ ಸಮಾವೇಶಗೊಂಡ ಸಾಮಾನ್ಯ ಸಭೆಯಲ್ಲಿ ಹಾಜರಿದ್ದ ಸದಸ್ಯರು 29/30-05/05**

ಶ್ರೀ ರಮೇಶ್ ಬಂಗಾರಿ ಆಚಾರಿ, ಅಧ್ಯಕ್ಷರು, ಶ್ರೀ ಅರುಣ್ ಬಿಕ್ಕು ಕೋಡ್ಕಣಿ, ಉಪಾಧ್ಯಕ್ಷರು, ಶ್ರೀ ಕೆರಿಯಾ ರಾಮಾ ಬೋರ್ಕರ್, ಚೇರ್‌ಮನ್ **ಸದಸ್ಯರಾದ ಸರ್ವಶ್ರೀ** ಸುಧಾಕರ ಶ್ರೀನಿವಾಸ ಶೆಟ್ಟಿ, ಶ್ರೀ ರಾಜಾನಂದ ಹನುಮಂತಪ್ಪ ದೇಶಳ್ಳಿ, ಶ್ರೀ ರಮೇಶ ರಾಮಾ ಭಟ್ಟ, ಶ್ರೀ ನಂದನ್ ಆನಂದರಾವ್ ಸಾಗರ್, ಶ್ರೀಮತಿ ಸಂಧ್ಯಾ ಕೃಷ್ಣ ಕುರ್ಡೇಕರ್, ಶ್ರೀ ರಾಚಪ್ಪ ಜೋಗಳೆಕರ್, ಶ್ರೀಮತಿ ಶಕುಂತಲಾ ಚನ್ನಪ್ಪ ಹಲಸಿ, ಶ್ರೀ ವೀಣಾ ವಿನಾಯಕ ಶೆಟ್ಟಿ, ಶ್ರೀ ಉದಯಕುಮಾರ್ ಮಂಜುನಾಥ ಕಳೂರ್, ಶ್ರೀಮತಿ ರುಕ್ಸಾನಾ ಹೀರೂರ್, ಶ್ರೀ ಚಂದ್ರಶೇಖರ ಚಂದಾವರ, ಶ್ರೀ ಜಗದೀಶ್ ಅಚ್ಯುತ್ ನಾಯ್ಕು, ಶ್ರೀ ಬಸವರಾಜ್ ಚನ್ನಬಸಪ್ಪ ಶಿವನಂಚಿ, ಶ್ರೀಮತಿ ಶೇಖ್ ಹಾಜಿರಾ ಬಶೀರ್, ಶ್ರೀ ಖಾನ್ ಅಮಾನುಲ್ಲಾ ಅಬ್ದುಲ್ ರೆಹಮಾನ್, ಶ್ರೀಮತಿ ಶಂಶಾದ ಅಬ್ದುಲ್ ಖಾದರ್ ಅನವಟ್ಟಿ, ಶ್ರೀಮತಿ ರಮ್ಯಾ ರವಿ ಚಂದಾವರ, ಶ್ರೀ ಗಣೇಶ ಸುರೇಶ ನಾಯ್ಕ್, ಶ್ರೀ ಪ್ರಕಾಶ ಮಹಾಬಲೇಶ್ವರ ಪ್ರಭು, ಶ್ರೀ ಮಹಾದೇವ ಗಂಗಾ ಚಲುವಾದಿ, ಶ್ರೀ ಗಣಪತಿ ಲಕ್ಷ್ಮಣ ನಾಯ್ಕ್, ಶ್ರೀ ನಂದಾ ಮಾಧವ್ ನಾಯ್ಕ್, ಶ್ರೀಮತಿ ಮೋಹಿನಿ ಮೋಹನ್ ಬೈಲೂರ್, ಶ್ರೀಮತಿ ಸುಮಾ ವಿನಾಯಕ ನಾಯ್ಕ್, ಶ್ರೀ ನರೋನ್ಹಾ ಫ್ರಾನ್ಸಿಸ್ ಪೆದ್ರು, ಶ್ರೀ ಶ್ರೀಕಾಂತ ಸುರೇಶ ತಾರಿಬಾಗಿಲ್.

**ಸರ್ಕಾರವು ನಾಮ ನಿರ್ದೇಶನ ಮಾಡಿದ ಸದಸ್ಯರು::**

(1) ಶ್ರೀಮತಿ ಸುಶೀಲಾ ಶಂಕರ ನಾರಾಯಣ ಹೆಗಡೆ (2) ಶ್ರೀ ಸದಾನಂದ ಗಣಪತಿ ಬನವಾಸಿ (3) ಶ್ರೀ ಹರಿಶ ಅಚುತ್ ಪಾಲೇಕರ್ (4) ಶ್ರೀ ಕೇಶವ ಪಿ. ಶೆಟ್ಟಿ (5) ಶ್ರೀ ಗೋಪಾಲಕೃಷ್ಣ ದತ್ತಾತ್ರೆಯ ನಾಯ್ಕ್.

ಶ್ರೀ ಜಿ. ಜಗದೀಶ, ಸಹಾಯಕ ಕಮೀಷನರ್, ಶಿರಸಿ ಉಪ-ವಿಭಾಗ, ಶಿರಸಿ ಹಾಗೂ ಪ್ರಭಾರ ಪೌರಾಯುಕ್ತರು, ನಗರಸಭೆ, ಶಿರಸಿ ಇವರು ಸಭೆಗೆ ಆಗಮಿಸಿದ ಅಧ್ಯಕ್ಷರು, ಉಪಾಧ್ಯಕ್ಷರು, ಚೇರಮನ್ನರು ಹಾಗೂ ಸದಸ್ಯರು ಮತ್ತು ಸಿಬ್ಬಂದಿಗಳು ಹಾಗೂ ಪತ್ರಿಕಾ ವರದಿಗಾರರನ್ನು ಸಭೆಗೆ ಸ್ವಾಗತ ಮಾಡಿದರು. ಸಭೆಯ ಪ್ರಿಸೈಡಿಂಗ್ ಮಾಡಲು ಅಧ್ಯಕ್ಷರನ್ನು ವಿನಂತಿ ಮಾಡಿದರು. ಸಭೆಯ ಕಾರ್ಯಕಲಾಪ ಪ್ರಾರಂಭಗೊಂಡಿತು.

**ವಿಷಯ ನಂ 1:**

ದಿನಾಂಕ: 05-10-2009ರ ಸಾಮಾನ್ಯ ಸಭೆಯ ಠರಾವು ಮತ್ತು ದಿನಾಂಕ: 20-10-2009 ಹಾಗೂ ದಿನಾಂಕ: 21-11-2009ರ ವಿಶೇಷ ಸಭೆಯ ನಡಾವಳಿಕೆಗಳ ಠರಾವುಗಳನ್ನು ಓದಿ ದೃಢೀಕರಿಸುವುದು.

**ಠರಾವು ನಂ. 288**
**15-12-2009**

ದಿನಾಂಕ: 05-10-2009ರ ಸಾಮಾನ್ಯ ಸಭೆಯ ಠರಾವು ಮತ್ತು ದಿನಾಂಕ: 20-10-2009 ಹಾಗೂ ದಿನಾಂಕ: 21-11-2009ರ ವಿಶೇಷ ಸಭೆಯ ನಡಾವಳಿಕೆಗಳ ಠರಾವುಗಳನ್ನು ಓದಿ ಹೇಳಲಾಯಿತು. ಸರ್ವಾನುಮತದಿಂದ ಅಂಗೀಕರಿಸಿ ಠರಾಯಿಸಿತು.

**ವಿಷಯ ನಂ 2:**

ದಿನಾಂಕ: 30-10-2009ರ ಸ್ಥಾಯಿ ಸಮಿತಿಯ ನಡಾವಳಿಕೆ ಠರಾವುಗಳನ್ನು ಓದಿ ದೃಢೀಕರಿಸುವುದು.

**ಠರಾವು ನಂ. 289**
**15-12-2009**

ದಿನಾಂಕ: 30-10-2009ರ ಸ್ಥಾಯಿ ಸಮಿತಿಯ ನಡಾವಳಿಕೆ ಠರಾವುಗಳನ್ನು ಠರಾವುಗಳನ್ನು ಓದಿ ಹೇಳಲಾಯಿತು. ಸರ್ವಾನುಮತದಿಂದ ಅಂಗೀಕರಿಸಿ ಠರಾಯಿಸಿತು.

**ವಿಷಯ ನಂ 3:**

ಶಿರಸಿ ನಗರಸಭೆ ಸೆಪ್ಟಂಬರ್–2009, ಅಕ್ಟೋಬರ್–2009ರ ಜಮಾ ಖರ್ಚು ಓದಿ ದೃಢೀಕರಿಸುವುದು.

**ಠರಾವು ನಂ. 290**
**15–12–2009**

ಶಿರಸಿ ನಗರಸಭೆ ಸೆಪ್ಟಂಬರ್–2009, ಅಕ್ಟೋಬರ್–2009ರ ಜಮಾ ಖರ್ಚು ಓದಿ ಹೇಳಲಾಯಿತು. ಸರ್ವಾನುಮತದಿಂದ ಮಂಜೂರಿ ನೀಡಿ ಠರಾಯಿಸಿತು.

**ವಿಷಯ ನಂ 4:**

ಖಾಸಗಿ ಕಟ್ಟಡಗಳ ಹಕ್ಕು ಬದಲಾವಣೆ ಅರ್ಜಿಗಳನ್ನು ಪರಿಶೀಲಿಸಿ ಮಂಜೂರಿ ನೀಡುವುದು.

**ಠರಾವು ನಂ. 291**
**15–12–2009**

ಖಾಸಗಿ ಕಟ್ಟಡಗಳ ಹಕ್ಕು ಬದಲಾವಣೆ ಅರ್ಜಿಗಳನ್ನು ಪರಿಶೀಲಿಸಿ ವಾರಸಾ, ಭಕ್ಷಿಸ, ದಾನಪತ್ರ, ಖರೀದಿ, ಮರಣ ಶಾಸನ ಆಧಾರದಂತೆ ಖಾತೆಯಲ್ಲಿ ಹಕ್ಕು ದಾಖಲಾತಿ ಮಾಡಲು ಅನಮೋದಿಸಿ ಸರ್ವಾನುಮತದಿಂದ ಠರಾಯಿಸಿತು.

| ಅ.ನಂ. | ಮೂಲ ಖಾತಾದಾರರ ಹೆಸರು | ವಾರ್ಡ ನಂ./ಮನೆ ನಂ. | ಬದಲಾವಣೆ ಮಾಡುವವರ ಹೆಸರು | ಶರಾ |
|---|---|---|---|---|
| 1 | ಶ್ರೀ ಅಬ್ದುಲ್ ಅಜೀಮ್ ಪೀರಖಾನ್, ಮುಸ್ಲಿಂಗಲ್ಲಿ | IVA 208 | (1) ಅಬ್ದುಲ್ ಅಜೀಮ್ ಪೀರಖಾನ್<br>(2) ರಿಯಾಜ್ ಅಹ್ಮದ ಪೀರಖಾನ್ | ಭಕ್ಷಿಸ |
| 2 | ಶ್ರೀ ಕೀರಾ ಗುತ್ಯಾ ಜೋಗಳೆಕರ್, ನೆಹೂರನಗರ | IIIA 199, 199A | ಸುಧಾಕರ ಕೀರಾ ಜೋಗಳೆಕರ್ | ವಾರಸಾ |
| 3 | ಮೆ: ಅಶೋಕ ಎಂಡ್ ಕಂಪನಿ, ಮ್ಯಾನೇಜಿಂಗ್ ಪಾರ್ಟನರ್, ಅಶೋಕ ಪುಂಡಲೀಕ್ ನಾಯ್ಕ್, ಟಿ.ಎಸ್.ಎಸ್. ರಸ್ತೆ | IV 118/9 | ಸುಮಾ ತಂದೆ ಜಗನ್ನಾಥ ಜೋಶಿ ಯಾನೆ ಸುಮಾ ಕೋಂ ಜೈ ಕೃಷ್ಣನ್ | ಖರೀದಿ |
| 4 | ಆಲ್ಮೆಡಾ ಪಿದಾದ ಫರ್ನಾಂಡಿಸ್, ಗಾಂಧಿನಗರ | V 1613 | ಓಫಿಲಿಯಾ ಎಂಟನಿ ಡಿ'ಸೋಜಾ | ದಾನ ಪತ್ರ |
| 5 | ರಾಮದಾಸ ನಾರಾಯಣ ಕಾಮತ, ವೀರಭದ್ರಗಲ್ಲಿ | II 373/1,2,374/ 1 to 6 | (1) ಸುಧಾ ಕೋಂ ರಾಮದಾಸ ಕಾಮತ್<br>(2) ದಯಾನಂದ ರಾಮದಾಸ ಕಾಮತ್<br>(3) ವಿಜಯಲಕ್ಷ್ಮೀ ಗಣೇಶ ಹೆಗಡೆ<br>(4) ವಿನಯ ಗಿರೀಶ ಕೇಕರೆ<br>(5) ಕೀರ್ತಿ ಗಜಾನನ ಶಾನಭಾಗ | |
| 6 | ಸುಶೀಲಾ ಶಾಂತಾರಾವ ಗಣೇಶಕರ, ಮಾರಿಗುಡಿ | III A 22/1+2 | ಮಂಜುನಾಥ ವಾಸುದೇವ ಶೇಟ್ | ಖರೀದಿ |
| 7 | ಗೋಪಾಲ ಸದಾಶಿವ ಪ್ರಭು | VB 992/3 | ಮುಕುಂದ ವಿಠೋಬ ಜನ್ನು | ಖರೀದಿ |
| 8 | (1) ಸಂತೋಷ ಸುಬ್ರಾಯ್ | VA New | ಹೇರಬ ಬಾಬಯ್ಯ | ಖರೀದಿ |

| ಅ.ನಂ. | ಮೂಲ ಖಾತಾದಾರರ ಹೆಸರು | ವಾರ್ಡ ನಂ./ಮನೆ ನಂ. | ಬದಲಾವಣೆ ಮಾಡುವವರ ಹೆಸರು | ಶರಾ |
|---|---|---|---|---|
| | ದೈವಜ್ಞ (2) ಗಜಾನನ ಸುಬ್ರಾಯ ದೈವಜ್ಞ, ದೇವಿಕೆರೆ | | ಮೇಸ್ತ | |
| 9 | ಶಿವಲಿಂಗಪ್ಪ ಗಂಗಪ್ಪ ಹೊಂಕಣ, ಹೊಸಪೇಟೆ ರಸ್ತೆ | VA 216/1,2,3,4 | ಗೌರವ್ವ ಕೋಂ ಚೆಲ್ಲಾಳಪ್ಪ ಕರ್ನಲ್ಲಿ | ಖರೀದಿ |
| 10 | (1) ಬಂಗಾರಪ್ಪ (2) ಸೋಮಶೇಖರ ಗಿರಿಮಲ್ಲಪ್ಪ ಜಮಖಂಡಿ (ಐದು ರಸ್ತೆ) (3) ಚಂದ್ರಶೇಖರ | II 36 | (1) ಬಂಗಾರಪ್ಪ ಗಿರಿಮಲ್ಲಪ್ಪ ಜಮಖಂಡಿ (2) ಸೋಮಶೇಖರ್ | ಮರಣ ಶಾಸನ |
| 11 | ಗಣಪ ಅಣ್ಣಪ್ಪ ಕಲಭಾಗ, ಗಾಂಧಿನಗರ | I 987 | ಸುಶೀಲಾ ವೆಂಕಟೇಶ ಭಂಡಾರಿ | ಖರೀದಿ |
| 12 | ನಾಗರಾಜ್ ಗೋವಿಂದ ಶೇಟ್, ನಾಡಿಗಗಲ್ಲಿ | VB 993/C | ಶಶಿಕಲಾ ಮುಕುಂದ ಜನ್ನು | ದಾನಪತ್ರ |
| 13 | ಪದ್ಮನಾಭ ಬಾಬ ಬಾಳಿಗಾ, ವೀರಭದ್ರಗಲ್ಲಿ | II 180 | (1) ಪ್ರೇಮಾ (2) ಪ್ರಕಾಶ ವಿಠ್ಠಲ ಬಾಳಿಗಾ (3) ಚಂದ್ರಮುಖಿ | ವಾರಸಾ |
| 14 | ವನಿತಾ ವಿನಾಯಕ ಹಳದಿಪುರ, ಗಾಂಧಿನಗರ | I 1497,1498,1499 | ಕಿರಣ ವಿನಾಯಕ ಹಳದಿಪುರ | ವಾರಸಾ |
| 15 | ಜಗದೀಶಚಂದ್ರ ಗಣಪತಿ ಹರ್ಡೀಕರ್, ಸಿ.ಪಿ. ಬಝಾರ್ | VI 45 | (1) ಬಾಲಕೃಷ್ಣ ದೇವರು ಹೆಗಡೆ (2) ರಾಮಮೋಹನ್ ದೇವರು ಹೆಗಡೆ (3) ಅನುಗ್ರಹ ಕನ್ಸ್ಟ್ರಕ್ಷನ್ ಸರ್ವಿಸ್ | ಖರೀದಿ |
| 16 | (1) ಗಣಪತಿ ವೆಂಕಟೇಶ ಶಾನಭಾಗ (2) ಪಾಂಡುರಂಗ ವೆಂಕಟೇಶ ಶಾನಭಾಗ, ವೀರಭದ್ರಗಲ್ಲಿ | II 367/1<br>II 367/2 | ವೆಂಕಟೇಶ ಪಾಂಡುರಂಗ ಶಾನಭಾಗ | ವಾರಸಾ |
| 17 | ಶ್ರೀಧರ ಗಣಪತಿ ಭಟ್ಟ, ಲಯನ್ಸ್ ನಗರ, ಶಿರಸಿ | VA 1092/297A, 1098/297B | ವಿನಾಯಕ ಸುಬ್ರಾಯ್ ಹೆಗಡೆ | ಖರೀದಿ |
| 18 | ಲಕ್ಷ್ಮೀ ನಾರಾಯಣ ಎನ್. ಹೆಗಡೆ, ವಿವೇಕಾನಂದನಗರ | IIIB 1201/1007 | ಸತ್ಯಬೋದ ಕೃಷ್ಣಚಾರ್ಯ ಸುಳ್ಳಡ | ಖರೀದಿ |
| 19 | ಈರಪ್ಪ ಗದಿಗೆಪ್ಪ ಶೆಟ್ಟರ, ಸಹ್ಯಾದ್ರಿ ಕಾಲೋನಿ | VB 62/1,2,3,4,5,6 | ದತ್ತಾತ್ರೇಯ ಗಣಪತಿ ಹೆಗಡೆ | ಖರೀದಿ |
| 20 | ನಿಲಮ್ಮಾ ಈರಪ್ಪ ಕೆರೊಡಿ, ನಟರಾಜ್ ರಸ್ತೆ | VB 1029/9-10 | (1) ಬಸವರಾಜ ರಾಚಪ್ಪ ಕೆರೊಡಿ (2) ರವೀಂದ್ರ ಬಸವರಾಜ ಕೆರೊಡಿ (3) ರುದ್ರಪ್ಪ ಬಸವರಾಜ ಕೆರೊಡಿ | ವಾರಸಾ |
| 21 | ಪುರಷೋತ್ತಮ ಕೆ. ನೇತ್ರೆಕರ್, ಬಾಪೂಜಿನಗರ | IV B | ರಾಜೇಶ ಪುರಷೋತ್ತಮ ನೇತ್ರೆಕರ | ವಾರಸಾ |
| 22 | ಗಂಗಪ್ಪ ಚನ್ನಪ್ಪ ಸಜ್ಜನ, ಸಿಂಪಿಗಲ್ಲಿ | VI 207/1 | ಪಾಲನೇತ್ರ ಗಂಗಪ್ಪ ಸಜ್ಜನ | ವಾರಸಾ |

| | | | | |
|---|---|---|---|---|
| 23 | ಕಾಶಿನಾಥ ಗುಡ್ಡಪ್ಪ ಮೂಡಿ, ಸಿಂಪಿಗಲ್ಲಿ | VI 200/1+2 | ಮಲ್ಲಿಕಾರ್ಜುನ ನಾಗಪ್ಪ ಭೂಮಾ | ಖರೀದಿ |
| 24 | ಮೀರಾ ಶಿವಾನಂದ ನಾಯ್ಕ್, ವಿವೇಕಾನಂದನಗರ | III B 166 | ಭವಾನಿ ಕೇಶವ ಭಟ್ಟ | ಖರೀದಿ |
| 25 | ಹೆಚ್.ಎಸ್. ಮಂಜುನಾಥ, ವಿವೇಕಾನಂದ ನಗರ, ಶಿರಸಿ | III 1183 | ಕೆ. ಸರೋಜಾ ಮಂಜುನಾಥ ರಾವ್ | ವಾರಸಾ |
| 26 | ಹೆಚ್.ಎಮ್. ಸತ್ಯನಾರಾಯಣ, ದುಂಡಶಿನಗರ, ಶಿರಸಿ | V New | ರಂಜನಾ ನಾಗೇಶ ರಾಯ್ಕರ ಯಾನೆ ಸುಜಾತಾ ಕೋಂ ಸತ್ಯನಾರಾಯಣ ರೇವಣಕರ್ | ವಾರಸಾ |
| 27 | ಅಬ್ದುಲ್ ರೆಹಮಾನ್ ಅಬ್ದುಲ್ ಖಾದರ್ ತಮಟಗಾರ್, ಮುಸ್ಲಿಂಗಲ್ಲಿ, ಶಿರಸಿ | IV A 105/112 | ಅಬ್ದುಲ್ ಭಾಕಿ ಅಬ್ದುಲ್ ಕರೀಂ ಸೌದಾಗರ್, | ಭಕ್ಷಿಸ್ |
| 28 | ವಿನೋದಾ ಪರಶುರಾಮ ತಿರುಮಲೆ, ಸಿಂಪಿಗಲ್ಲಿ, ಶಿರಸಿ | VI/224/1-2 | (1) ಮಂಜುನಾಥ ವಿನೋದಾ ತಿರುಮಲೆ<br>(2) ವಿಜಯ್ ವಿನೋದಾ ತಿರುಮಲೆ | ವಾರಸಾ |
| 29 | ಶ್ರೀ ಸುಬ್ರಾಯ್ ಗಣಪತಿ ಗಂಗೊಳ್ಳಿ, ಉಣ್ಣೆಮಠಗಲ್ಲಿ, ಶಿರಸಿ | V/1040/1,2,3 | ಕೃಷ್ಣ ಗಂಗಾಧರ ಭಟ್ಟ | ಖರೀದಿ |
| 30 | ಲುವಿಸ್ ಫ್ರಾನ್ಸಿಸ್ ಫರ್ನಾಂಡಿಸ್, ಅಗಸೆಬಾಗಿಲ್, ಶಿರಸಿ | III/914,915,916 | (1) ಮೇರಿ ಲುವಿಸ್ ಫರ್ನಾಂಡಿಸ್<br>(2) ಆಂದ್ರೇಜ್ '' ''<br>(3) ಡೊರಿನ್ '' ''<br>(4) ಜೊನ್ '' ''<br>(5) ಇನಾಸ್ '' ''<br>(6) ಫ್ರಾನ್ಸಿಸ್ '' ''<br>(7) ಕೊಸ್ತಾ '' '' | ವಾರಸಾ |

**<u>ವಿಷಯ ನಂ 5:</u>**

ಮಾನ್ಯ ಮುಖ್ಯಮಂತ್ರಿಗಳ ಯೋಜನೆಯಲ್ಲಿ ಕಾಮಗಾರಿ ಟೆಂಡರು ಪರಿಶೀಲಿಸಿ ಮಂಜೂರಿ ನೀಡುವುದು.

**<u>ದಾಖಲೆಗಳು:-</u>**

1. ಸಹಾಯಕ ಕಮೀಷನರ್, ಶಿರಸಿ ಉಪ-ವಿಭಾಗ, ಶಿರಸಿರವರ ಕಚೇರಿಯಲ್ಲಿ ಯೋಜನೆಯ ಅಧ್ಯಕ್ಷರ ಸಭೆ ದಿನಾಂಕ: 20-07-2009ರ ನಡಾವಳಿಗಳು.
2. ಕರ್ನಾಟಕ ಸರ್ಕಾರದ ಆದೇಶ ಸಂ. ನಅಇ/95/ಸ.ಮಸ./209/ಬೆಂಗಳೂರು, ದಿನಾಂಕ: 25-09-2009.
3. ಮಾನ್ಯ ಜಿಲ್ಲಾಧಿಕಾರಿಗಳು, ಉ.ಕ., ಕಾರವಾರ ರವರ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ಆದೇಶ ಸಂ. ಪುರಸಭೆ-1/ವಿವ-124/2009-10, ದಿ: 13-10-2009.
4. ಪೌರಾಯುಕ್ತರು, ನಗರಸಭೆ, ಶಿರಸಿ ರವರು ಮಾನ್ಯ ಜಿಲ್ಲಾಧಿಕಾರಿಗಳು, ಉ.ಕ., ಕಾರವಾರ ರವರಿಗೆ ಸಲ್ಲಿಸಿದ ಪ್ರಸ್ತಾವ ಸಂ. ನಸಶಿ/ಕಾ.ವಿ./ಸಿ.ಎಮ್.ಎಸ್.ಟಿ.ಡಿ.ಪಿ./ಕ್ರಿ.ಯೋ./ವಿವ-50/09-10, ದಿ: 15-10-2009.
5. ನಗರಸಭೆ, ಶಿರಸಿ ಟೆಂಡರು ಪ್ರಕಟಣೆ ದಿನಾಂಕ: 21-10-2009.
6. ನಗರಸಭೆ, ಶಿರಸಿ ತಿದ್ದುಪಡಿ ಟೆಂಡರು ಪ್ರಕಟಣೆ ದಿನಾಂಕ: 27-11-2009.
7. ಲೋಕಧ್ವನಿ ದಿನಪತ್ರಿಕೆಯಲ್ಲಿ ದಿನಾಂಕ: 25-10-2009ರಂದು ಪ್ರಕಟಪಡಿಸಿದ ಪ್ರತಿ.

8. ಉತ್ತರ ಕನ್ನಡ ಜಿಲ್ಲಾ ಟೆಂಡರು ಬುಲೆಟಿನ್ ಸಂ. 25/2009–10 ರಂದು ಪ್ರಕಟಪಡಿಸಿದ ಪ್ರತಿ.
9. ಉಲ್ಲೇಖಿತ ಕ್ರಿಯಾ ಯೋಜನೆಯಂತೆ 31 ಪ್ಯಾಕೇಜುಗಳಿಗೆ ಸ್ವೀಕರಿಸಿದ ಟೆಂಡರು ದಿನಾಂಕ: 30–11–2009 ಹಾಗೂ ತುಲನಾತ್ಮಕ ಯಾದಿ.
10. ಶಿರಸಿ ನಗರಸಭೆ ಕಚೇರಿಯಲ್ಲಿ ನಡೆದ ಸಂಧಾನ ಸಭೆ ದಿನಾಂಕ: 03–12–2009.

**ಠರಾವು ನಂ. 292**
**15–12–2009**

ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು ಸ್ಮಾಲ ಎಂಡ್ ಮೀಡಿಯಂ ಟೌನ್ ಡೆವಲಪಮೆಂಟ್ ಪ್ರೋಗ್ರಾಂ ಅಡಿಯಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿ ಮಾಡಲು ಶಿರಸಿ ನಗರಸಭೆಗೆ ರೂ. 5.00 ಕೋಟಿ ಅನುದಾನ ಮಂಜೂರಿ ಮಾಡಿದ್ದು ಮಂಜೂರಾದ ಅನುದಾನದಲ್ಲಿ ಕ್ರಿಯಾ ಯೋಜನೆಯನ್ನು ತಯಾರಿಸಿ ಘನ ಸರ್ಕಾರದ ನಡಾವಳಿಕೆ ಪ್ರಕಾರ ರೂ. 495.00 ಲಕ್ಷಕ್ಕೆ 65 ಕಾಮಗಾರಿಗಳಿಗೆ ಕ್ರಿಯಾ ಯೋಜನೆ ಮಂಜೂರಿ ಪಡೆದು ಕಾಮಗಾರಿ ಅನುಷ್ಠಾನ ಮಾಡಲು ಅ.ನಂ. (1) ರಿಂದ (31) ಪ್ಯಾಕೇಜುಗಳಲ್ಲಿ ಕಾಮಗಾರಿ ಅಂದಾಜು ಪತ್ರಿಕೆಯಂತೆ ಟೆಂಡರು ಪ್ರಕ್ರಿಯೆ ಮಾಡಲಾಗಿರುತ್ತದೆ. ಸ್ವೀಕರಿಸಿದ ಟೆಂಡರು ದರಗಳನ್ನು ಪರಿಶೀಲಿಸಲಾಗಿ ಒಟ್ಟೂ 33 ಜನ ಗುತ್ತಿಗೆದಾರರು ಭಾಗವಹಿಸಿರುತ್ತಾರೆ. ಸ್ವೀಕರಿಸಿದ ಟೆಂಡರು ದರಗಳ ತುಲನಾತ್ಮಕ ಯಾದಿ ಪರಿಶೀಲಿಸಲಾಗಿ ಎಲ್ಲಾ ಕಾಮಗಾರಿಗಳಿಗೂ ಅಂದಾಜು ಪತ್ರಿಕೆಯ ದರಕ್ಕಿಂತ ಶೇಕಡಾವಾರು 3.05% ರಿಂದ 16.63% ಹೆಚ್ಚಿನ ದರ ನಮೂದು ಮಾಡಿದ್ದು ಇರುತ್ತದೆ. ದಿನಾಂಕ: 03–12–2009 ರಂದು ನಡೆದ ಗುತ್ತಿಗೆದಾರರ ಜೊತೆಗೆ ನಡೆಸಿದ ಸಂಧಾನ ಸಭೆಯಲ್ಲಿ ನೀಡಿದ ವಿವರಣೆಯನ್ನು ಪರಿಶೀಲಿಸಲಾಗಿ ಸಾಮಾನ್ಯವಾಗಿ ಕಾಮಗಾರಿಗಳ ಅಂದಾಜು ಪತ್ರಿಕೆ 2009–10ನೇ ಸಾಲಿನ ಎಸ್.ಆರ್. ದರಪಟ್ಟಿಯಂತೆ ಇರುತ್ತದೆ. ಮೇಲ್ಮಟ್ಟದ ಜಲ ಸಂಗ್ರಹಾಲಯ ಕಾಮಗಾರಿಯ ಅಂದಾಜು ಪತ್ರಿಕೆ 2008–09ನೇ ಸಾಲಿನ ಎಸ್.ಆರ್. ದರದಂತೆ ಇರುತ್ತದೆ. ಇವುಗಳನ್ನು ತುಲನೆ ಮಾಡಲಾಗಿ ಡಾಂಬರು ದರಗಳು ಮಾರುಕಟ್ಟೆಯಲ್ಲಿ ಹೆಚ್ಚಿನ ದರ ಇರುವುದರಿಂದ 2009–10ನೇ ಸಾಲಿನ ಎಸ್.ಆರ್. ದರಕ್ಕೆ ಹೋಲಿಸಲಾಗಿ ಶೇ. 7.85% ರಿಂದ 15% ವರೆಗೆ ಹೆಚ್ಚಿಗೆ ಆಗುತ್ತದೆ. ಟೆಂಡರಿನಲ್ಲಿ ನಮೂದು ಮಾಡಿದ ದರವು 2009–10ನೇ ಸಾಲಿನ ಎಸ್.ಆರ್. ದರಕ್ಕೆ ಶೇ. 3% ಕಡಿಮೆ ಆಗುತ್ತದೆ ಎಂದು ಅಭಿಪ್ರಾಯ ಬಂದಿರುತ್ತದೆ. ಇವುಗಳನ್ನು ಪರಿಶೀಲಿಸಲಾಗಿ ನೀರಿನ ಸಂಗ್ರಹಾಲಯ ಕಾಮಗಾರಿ ಪೈಪಲೈನ್ ಕಾಮಗಾರಿ ಮತ್ತು ಡಾಂಬರಿಕರಣ ಕಾಮಗಾರಿ ಇವುಗಳಿಗೆ ಟೆಂಡರು ಅಂದಾಜು ಪಟ್ಟಿ ದರಕ್ಕಿಂತ ಶೇ. 3% ಹೆಚ್ಚಿಗೆ ಕೊಡಲು ತೀರ್ಮಾನಿಸಿತು ಮತ್ತು ಉಳಿದ ಕಾಂಕ್ರೀಟ್ ರಸ್ತೆ ಕಾಮಗಾರಿ ಮತ್ತು ಕಾಂಕ್ರೀಟ್ ಚರಂಡಿ ಕಾಮಗಾರಿಗೆ ಟೆಂಡರಿನಲ್ಲಿ ನಮೂದಿಸಿದ ದರ ಪಟ್ಟಿಯ (ಎಸ್.ಆರ್.) ದರಕ್ಕೆ ನಿಗದಿಪಡಿಸಿತು. ಅದರಂತೆ ಕಾಮಗಾರಿಗಳನ್ನು ಅನುಷ್ಠಾನ ಮಾಡಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು. ಮತ್ತು ಶೇ. 3% ಹೆಚ್ಚಿನ ದರವನ್ನು ನೀಡಿವುದರಿಂದ ಬರಬಹುದಾದ ವೆಚ್ಚದ ವ್ಯತ್ಯಾಸದ ಹಣವನ್ನು ಸರ್ಕಾರದಿಂದ ಬಿಡುಗಡೆಯಾಗಬಹುದಾದ ಅನುದಾನ ಅಥವಾ ನಗರಸಭೆಯ ನಿಧಿಯಿಂದ ಹೊಂದಾಣಿಕೆ ಮಾಡಿಕೊಂಡು ವೆಚ್ಚ ಭರಿಸಲು ಸಭೆಯು ಮಂಜೂರಿ ನೀಡಿತು. ಪ್ಯಾಕೇಜ್ ಸಂ. (1),(2) ಮತ್ತು (3)ನೇದವುಗಳು ರೂ. 30.00 ಲಕ್ಷಕ್ಕಿಂತ ಹೆಚ್ಚಿಗೆ ಇರುವುದರಿಂದ ಟೆಂಡರು ಮಂಜೂರಾತಿ ಅಧಿಕಾರ ಜಿಲ್ಲಾಧಿಕಾರಿಗಳಿಗೆ ಇರುತ್ತದೆ. ಮಾನ್ಯ ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ, ಕಾರವಾರರವರಿಂದ ಟೆಂಡರು ಪ್ರಕ್ರಿಯೆಗೆ ಅನುಮೋದನೆ ಪಡೆದು ಕಾಮಗಾರಿ ಅನುಷ್ಠಾನ ಮಾಡಲು ಸರ್ವಾನುಮತದಿಂದ ನಿರ್ಣಯಿಸಿ ಠರಾಯಿಸಿತು.

| ಕ್ರ.ಸಂ. | ಕಾಮಗಾರಿ ಹೆಸರು | ಗುತ್ತಿಗೆದಾರರ ಹೆಸರು ಮತ್ತು ನಮೂದಿಸಿದ ದರ | ಗುತ್ತಿಗೆದಾರರ ಹೆಸರು ಮತ್ತು ನಮೂದಿಸಿದ ದರ | ಯಶಸ್ವಿ ಗುತ್ತಿಗೆದಾರರ ಹೆಸರು ಮತ್ತು ನಮೂದಿಸಿದ ದರ | ಸಂಧಾನದಿಂದ ಒಪ್ಪಿತ ಮಾಡಿಸಿದ ದರ |
|---|---|---|---|---|---|
| 1 | **ಪ್ಯಾಕೇಜ್ ಸಂ. (1): ಕೆಂಗ್ರೆ ಜಾಕ್‌ವೆಲ್‌ನಿಂದ ನೀರು ಸರಬರಾಜು ಮುಖ್ಯ ಕೊಳಾಯಿ ಅಳವಡಿಸುವುದು. ರೂ.49.00 ಲಕ್ಷ** | ಎಮ್.ಬಿ. ಬೈಂದೂರ್ 3.05% ಹೆಚ್ಚು | ಜಿ.ಕೆ. ನಾಯ್ಕ್ 12.79% ಹೆಚ್ಚು | ಎಮ್.ಬಿ. ಬೈಂದೂರ್ 3.05% ಹೆಚ್ಚು | **ಶೇ. 3% ಹೆಚ್ಚಿಗೆ** |
| 2 | **ಪ್ಯಾಕೇಜ್ ಸಂ. (2): ಮೇಲ್ಮಟ್ಟದ ಜಲಸಂಗ್ರಹಾಗಾರ ನಿರ್ಮಿಸುವುದು. ರೂ.41.00 ಲಕ್ಷ** | ಆರ್.ಎನ್. ದುಬಾಶಿ 7.85% ಹೆಚ್ಚು | ಜಿ.ಕೆ. ನಾಯ್ಕ್ 9.92% ಹೆಚ್ಚು | ಆರ್.ಎನ್. ದುಬಾಶಿ 7.85% ಹೆಚ್ಚು | **ಶೇ. 3% ಹೆಚ್ಚಿಗೆ** |

| | | | | | |
|---|---|---|---|---|---|
| 3 | **ಪ್ಯಾಕೇಜ್ ಸಂ. (3): ಮಳೆ ನೀರು ಚರಂಡಿ ನಿರ್ಮಿಸುವುದು.<br>ರೂ.35.00 ಲಕ್ಷ** | ಎಸ್.ಕೆ. ಶೆಟ್ಟಿ 16.08% ಹೆಚ್ಚಿಗೆ | ಎಸ್.ಆರ್ ರಾಮಕುಮಾರ್ 31.02% ಹೆಚ್ಚಿಗೆ | ರಮೇಶ್ ದುಬಾಶಿ 8.29% ಹೆಚ್ಚು | **ಎಸ್.ಆರ್. ದರ** |
| | | ರಮೇಶ್ ದುಬಾಶಿ 8.29% ಹೆಚ್ಚು | ಆರ್.ಎ. ಸಯ್ಯದ್ 17.24% ಹೆಚ್ಚಿಗೆ | – | |
| 4 | **ಪ್ಯಾಕೇಜ್ ಸಂ. (4): ಮಳೆ ನೀರು ಚರಂಡಿ ನಿರ್ಮಿಸುವುದು.<br>ರೂ.25.00 ಲಕ್ಷ** | ಜಿ.ಹೆಚ್. ದಾವಣಗೇರೆ 5.88% ಹೆಚ್ಚಿಗೆ | ಎಸ್.ಕೆ. ಶೆಟ್ಟಿ 10.29% ಹೆಚ್ಚಿಗೆ | ಜಿ.ಹೆಚ್. ದಾವಣಗೇರೆ 5.88% ಹೆಚ್ಚಿಗೆ | **ಎಸ್.ಆರ್. ದರ** |
| | | ತಬರೇಜ್ ಶೇಖ್ 9.05% ಹೆಚ್ಚು | – | | |
| 5 | **ಪ್ಯಾಕೇಜ್ ಸಂ. (5): ಮಳೆ ನೀರು ಚರಂಡಿ ನಿರ್ಮಿಸುವುದು.<br>ರೂ. 23.00 ಲಕ್ಷ** | ಎಮ್.ಬಿ. ಬೈಂದೂರ್ 6.72% ಹೆಚ್ಚು | ಆರ್.ಎ. ಸಯ್ಯದ್ 15.21% ಹೆಚ್ಚು | ಎಮ್.ಬಿ. ಬೈಂದೂರ್ 6.72% ಹೆಚ್ಚು | **ಎಸ್.ಆರ್. ದರ** |
| 6 | **ಪ್ಯಾಕೇಜ್ ಸಂ. (6): ಮಳೆ ನೀರು ಚರಂಡಿ ನಿರ್ಮಿಸುವುದು.<br>ರೂ. 12.00 ಲಕ್ಷ** | ಎಸ್.ಎಲ್. ನಾಯ್ಕ್ 4.61% ಹೆಚ್ಚು | ಜಿ.ಹೆಚ್. ದಾವಣಗೇರೆ 6.63% ಹೆಚ್ಚು | ಎಸ್.ಎಲ್. ನಾಯ್ಕ್ 4.61% ಹೆಚ್ಚು | **ಎಸ್.ಆರ್. ದರ** |
| 7 | **ಪ್ಯಾಕೇಜ್ ಸಂ. (7): ರಸ್ತೆ ಹಾಗೂ ಚರಂಡಿ ನಿರ್ಮಾಣ.<br>ರೂ. 30.00 ಲಕ್ಷ** | ಎಸ್.ಕೆ. ಶೆಟ್ಟಿ 10.81% | ಜಿ.ಹೆಚ್. ದಾವಣಗೇರೆ 11.04% ಹೆಚ್ಚು | ಎಸ್.ಕೆ. ಶೆಟ್ಟಿ 10.81% | **ಶೇ. 3% ಹೆಚ್ಚಿಗೆ (ಡಾಂಬರಿಕರಣ ಕಾಮಗಾರಿ ಭಾಗಕ್ಕೆ ಮಾತ್ರ)** |
| 8 | **ಪ್ಯಾಕೇಜ್ ಸಂ. (8): ಕಾಂಕ್ರೀಟ್ ರಸ್ತೆ ನಿರ್ಮಾಣ.<br>ರೂ. 9.00 ಲಕ್ಷ** | ತರುಣ ಗುಪ್ತ 7.94% ಹೆಚ್ಚು | ಎಮ್. ಲಕ್ಷ್ಮಣ ಶೇ. 4.94% | ಎಮ್. ಲಕ್ಷ್ಮಣ ಶೇ. 4.94% | **ಎಸ್.ಆರ್. ದರ** |
| 9 | **ಪ್ಯಾಕೇಜ್ ಸಂ. (9): ಕಾಂಕ್ರೀಟ್ ರಸ್ತೆ ನಿರ್ಮಾಣ..<br>ರೂ. 9.00 ಲಕ್ಷ** | ಆರ್.ಎಮ್. ಜವಳಿ ಶೇ. 20.79% ಹೆಚ್ಚು | ಎನ್.ಎಮ್. ಗಾಜೀಪುರ ಶೇ. 17.89% ಹೆಚ್ಚು | ಎನ್.ಎಮ್. ಗಾಜೀಪುರ ಶೇ. 17.89% ಹೆಚ್ಚು | **ಎಸ್.ಆರ್. ದರ** |
| 10 | **ಪ್ಯಾಕೇಜ್ ಸಂ. (10): ಕಾಂಕ್ರೀಟ್ ರಸ್ತೆ ನಿರ್ಮಾಣ.<br>ರೂ. 15.00 ಲಕ್ಷ** | ರಮೇಶ ದುಬಾಶಿ ಶೇ. 9.75% ಹೆಚ್ಚು | ಆರ್.ಎಸ್. ಹುಲ್ಲಕ್ಕನವರ್ ಶೇ. 4.9% ಹೆಚ್ಚು | ಆರ್.ಎಸ್. ಹುಲ್ಲಕ್ಕನವರ್ ಶೇ. 4.9% ಹೆಚ್ಚು | **ಎಸ್.ಆರ್. ದರ** |
| 11 | **ಪ್ಯಾಕೇಜ್ ಸಂ. (11): ರಸ್ತೆ ಹಾಗೂ ಚರಂಡಿ ನಿರ್ಮಾಣ.<br>ರೂ. 14.00 ಲಕ್ಷ** | ವಿ.ಡಿ. ವಿಠ್ಠಲಕರ್ ಶೇ. 9.96% ಹೆಚ್ಚು | ಯೋಗೇಶ ಗಿರಿ ಶೇ. 7.96% ಹೆಚ್ಚು | ಯೋಗೇಶ ಗಿರಿ ಶೇ. 7.96% ಹೆಚ್ಚು | **ಎಸ್.ಆರ್. ದರ** |
| 12 | **ಪ್ಯಾಕೇಜ್ ಸಂ. (12): ಆರ್.ಸಿ.ಸಿ. ಚರಂಡಿ ನಿರ್ಮಾಣ.<br>ರೂ. 10.00 ಲಕ್ಷ** | ಎಮ್. ಲಕ್ಷ್ಮಣ ಶೇ. 3.96% ಹೆಚ್ಚು | ತರುಣ ಗುಪ್ತ ಶೇ. 6.87% ಹೆಚ್ಚು | ಎಮ್. ಲಕ್ಷ್ಮಣ ಶೇ. 3.96% ಹೆಚ್ಚು | **ಎಸ್.ಆರ್. ದರ** |
| 13 | **ಪ್ಯಾಕೇಜ್ ಸಂ. (13): ಆರ್.ಸಿ.ಸಿ. ಚರಂಡಿ ನಿರ್ಮಾಣ.<br>ರೂ. 10.00 ಲಕ್ಷ** | ಪರಮೇಶ್ವರ ರಾಜು ಶೇ. 4.06% ಹೆಚ್ಚು | ಡಿ.ಆರ್. ದೊಂಬೆ ಶೇ. 15.23% ಹೆಚ್ಚು | ಪರಮೇಶ್ವರ ರಾಜು ಶೇ. 4.06% ಹೆಚ್ಚು | **ಎಸ್.ಆರ್. ದರ** |
| 14 | **ಪ್ಯಾಕೇಜ್ ಸಂ. (14): ಆರ್.ಸಿ.ಸಿ. ಚರಂಡಿ ನಿರ್ಮಾಣ.<br>ರೂ. 14.00 ಲಕ್ಷ** | ಎಸ್.ಕೆ. ಶೆಟ್ಟಿ ಶೇ. 8.71% ಹೆಚ್ಚು | ಎಸ್.ಎಲ್. ನಾಯ್ಕ್ ಶೇ. 12.56% ಹೆಚ್ಚು | ಎಸ್.ಕೆ. ಶೆಟ್ಟಿ ಶೇ. 8.71% ಹೆಚ್ಚು | **ಎಸ್.ಆರ್. ದರ** |

| | | | | | |
|---|---|---|---|---|---|
| 15 | **ಪ್ಯಾಕೇಜ್ ಸಂ. (15): ರಸ್ತೆ ಹಾಗೂ ಚರಂಡಿ ನಿರ್ಮಾಣ. ರೂ.15.00 ಲಕ್ಷ** | ವಿ.ಡಿ. ವಿಠ್ಠಲಕರ್ ಶೇ. 9.96% ಹೆಚ್ಚು | ಯೋಗೇಶ ಗಿರಿ ಶೇ. 7.96% ಹೆಚ್ಚು | ಯೋಗೇಶ ಗಿರಿ ಶೇ. 7.96% ಹೆಚ್ಚು | **ಎಸ್.ಆರ್. ದರ** |
| 16 | **ಪ್ಯಾಕೇಜ್ ಸಂ. (16): ರಸ್ತೆ ಹಾಗೂ ಚರಂಡಿ ನಿರ್ಮಾಣ. ರೂ. 11.00 ಲಕ್ಷ** | ಬಿ.ಕೆ. ಭೋವಿವಡ್ಡರ್ ಶೇ. 10% ಹೆಚ್ಚು | ಎಸ್.ಕೆ. ಶೆಟ್ಟಿ ಶೇ. 12% ಹೆಚ್ಚು | ಎಸ್.ಕೆ. ಶೆಟ್ಟಿ ಶೇ. 12% ಹೆಚ್ಚು | **ಶೇ. 3% ಹೆಚ್ಚಿಗೆ (ಡಾಂಬರಿಕರಣ ಕಾಮಗಾರಿ ಭಾಗಕ್ಕೆ ಮಾತ್ರ)** |
| 17 | **ಪ್ಯಾಕೇಜ್ ಸಂ. (17): ರಸ್ತೆ ಹಾಗೂ ಚರಂಡಿ ನಿರ್ಮಾಣ. ರೂ. 14.00 ಲಕ್ಷ** | ಎಸ್.ಕೆ. ಶೆಟ್ಟಿ ಶೇ. 18.75% ಹೆಚ್ಚು | ತಬರೇಜ್ ಶೇಖ್ 15.75% ಹೆಚ್ಚು | ತಬರೇಜ್ ಶೇಖ್ 15.75% ಹೆಚ್ಚು | **ಶೇ. 3% ಹೆಚ್ಚಿಗೆ (ಡಾಂಬರಿಕರಣ ಕಾಮಗಾರಿ ಭಾಗಕ್ಕೆ ಮಾತ್ರ)** |
| 18 | **ಪ್ಯಾಕೇಜ್ ಸಂ. (18): ರಸ್ತೆ ಹಾಗೂ ಚರಂಡಿ ನಿರ್ಮಾಣ. ರೂ. 10.00 ಲಕ್ಷ** | ತರುಣ ಗುಪ್ತ ಶೇ. 12% ಹೆಚ್ಚು | ಬಿ.ಕೆ. ಭೋವಿ ಶೇ. 10% ಹೆಚ್ಚು | ಬಿ.ಕೆ. ಭೋವಿ ಶೇ. 10% ಹೆಚ್ಚು | **ಶೇ. 3% ಹೆಚ್ಚಿಗೆ (ಡಾಂಬರಿಕರಣ ಕಾಮಗಾರಿ ಭಾಗಕ್ಕೆ ಮಾತ್ರ)** |
| 19 | **ಪ್ಯಾಕೇಜ್ ಸಂ. (19): ರಸ್ತೆ ನಿರ್ಮಾಣ. ರೂ. 11.00 ಲಕ್ಷ** | ಆರ್.ಎನ್. ದುಬಾಶಿ ಶೇ. 9.99% ಹೆಚ್ಚು | ಎಸ್.ಕೆ. ಶೆಟ್ಟಿ 30.33% ಹೆಚ್ಚು | ಆರ್.ಎನ್. ದುಬಾಶಿ ಶೇ. 9.99% ಹೆಚ್ಚು | **ಶೇ. 3% ಹೆಚ್ಚಿಗೆ (ಡಾಂಬರಿಕರಣ ಕಾಮಗಾರಿ ಭಾಗಕ್ಕೆ ಮಾತ್ರ)** |
| 20 | **ಪ್ಯಾಕೇಜ್ ಸಂ. (20): ರಸ್ತೆ ನಿರ್ಮಾಣ. ರೂ. 11.00 ಲಕ್ಷ** | ಹೆಚ್.ವಿ. ಶೇಟ್ 16.63% ಹೆಚ್ಚು | ಆರ್.ಎನ್. ದುಬಾಶಿ ಶೇ. 21.84% ಹೆಚ್ಚು | ಹೆಚ್.ವಿ. ಶೇಟ್16.63% ಹೆಚ್ಚು | **ಶೇ. 3% ಹೆಚ್ಚಿಗೆ (ಡಾಂಬರಿಕರಣ ಕಾಮಗಾರಿ ಭಾಗಕ್ಕೆ ಮಾತ್ರ)** |
| 21 | **ಪ್ಯಾಕೇಜ್ ಸಂ. (21): ರಸ್ತೆ ನಿರ್ಮಾಣ. ರೂ. 12.00 ಲಕ್ಷ** | ಎಸ್.ಕೆ. ಶೆಟ್ಟಿ ಶೇ. 13.9% ಹೆಚ್ಚು | ಎಸ್.ಎಲ್. ನಾಯ್ಕ್ ಶೇ. 17.76% ಹೆಚ್ಚು | ಎಸ್.ಕೆ. ಶೆಟ್ಟಿ ಶೇ. 13.9% ಹೆಚ್ಚು | **ಶೇ. 3% ಹೆಚ್ಚಿಗೆ (ಡಾಂಬರಿಕರಣ ಕಾಮಗಾರಿ ಭಾಗಕ್ಕೆ ಮಾತ್ರ)** |
| 22 | **ಪ್ಯಾಕೇಜ್ ಸಂ. (22): ರಸ್ತೆ ನಿರ್ಮಾಣ. ರೂ. 11.00 ಲಕ್ಷ** | ಚಂದ್ರು ದೇವಾಡಿಗ ಶೇ. 7.76% ಹೆಚ್ಚು | ಎಮ್.ಬಿ. ಬೈಂದೂರ್ ಶೇ. 9.98% ಹೆಚ್ಚು | ಚಂದ್ರು ದೇವಾಡಿಗ ಶೇ. 7.76% ಹೆಚ್ಚು | **ಶೇ. 3% ಹೆಚ್ಚಿಗೆ (ಡಾಂಬರಿಕರಣ ಕಾಮಗಾರಿ ಭಾಗಕ್ಕೆ ಮಾತ್ರ)** |
| 23 | **ಪ್ಯಾಕೇಜ್ ಸಂ. (23): ರಸ್ತೆ ನಿರ್ಮಾಣ. ರೂ. 10.00 ಲಕ್ಷ** | ಸಿ.ವಿ. ಉಪ್ಪಿನ್ ಶೇ. 8.62% ಹೆಚ್ಚು | ಎಮ್.ಬಿ. ಬೈಂದೂರ್ 59.23% ಹೆಚ್ಚು | ಸಿ.ವಿ. ಉಪ್ಪಿನ್ ಶೇ. 8.62% ಹೆಚ್ಚು | **ಶೇ. 3% ಹೆಚ್ಚಿಗೆ (ಡಾಂಬರಿಕರಣ ಕಾಮಗಾರಿ ಭಾಗಕ್ಕೆ ಮಾತ್ರ)** |
| 24 | **ಪ್ಯಾಕೇಜ್ ಸಂ. (24): ರಸ್ತೆ ನಿರ್ಮಾಣ. ರೂ. 11.00 ಲಕ್ಷ** | ಎಸ್.ಎಲ್. ನಾಯ್ಕ್ ಶೇ. 7.18% ಹೆಚ್ಚು | ತಬರೇಜ್ ಶೇಖ್ ಶೇ. 15.24% ಹೆಚ್ಚು | ಎಸ್.ಎಲ್. ನಾಯ್ಕ್ ಶೇ. 7.18% ಹೆಚ್ಚು | **ಶೇ. 3% ಹೆಚ್ಚಿಗೆ (ಡಾಂಬರಿಕರಣ ಕಾಮಗಾರಿ ಭಾಗಕ್ಕೆ ಮಾತ್ರ)** |
| 25 | **ಪ್ಯಾಕೇಜ್ ಸಂ. (25): ರಸ್ತೆ ನಿರ್ಮಾಣ. ರೂ. 11.00 ಲಕ್ಷ** | ಎಮ್.ಎಮ್. ದೇವಾಡಿಗ ಶೇ. 10.25% ಹೆಚ್ಚು | ಎಸ್.ಎಲ್. ನಾಯ್ಕ್ ಶೇ. 16.67% ಹೆಚ್ಚು | ಎಮ್.ಎಮ್. ದೇವಾಡಿಗ ಶೇ. 10.25% ಹೆಚ್ಚು | **ಶೇ. 3% ಹೆಚ್ಚಿಗೆ (ಡಾಂಬರಿಕರಣ ಕಾಮಗಾರಿ ಭಾಗಕ್ಕೆ ಮಾತ್ರ)** |
| 26 | **ಪ್ಯಾಕೇಜ್ ಸಂ. (26): ರಸ್ತೆ ನಿರ್ಮಾಣ. ರೂ. 13.00 ಲಕ್ಷ** | ಬಿ.ಕೆ. ಭೋವಿವಡ್ಡರ್ ಶೇ. 44% ಹೆಚ್ಚು | ಬಿ.ಎಮ್. ಮೇಸ್ತ ಶೇ. 18.64% ಹೆಚ್ಚು | ಬಿ.ಎಮ್. ಮೇಸ್ತ ಶೇ. 18.64% ಹೆಚ್ಚು | **ಶೇ. 3% ಹೆಚ್ಚಿಗೆ (ಡಾಂಬರಿಕರಣ ಕಾಮಗಾರಿ ಭಾಗಕ್ಕೆ ಮಾತ್ರ)** |

| | | | | | |
|---|---|---|---|---|---|
| 27 | **ಪ್ಯಾಕೇಜ್ ಸಂ. (27): ಒಳಾಂಗಣ ಕ್ರೀಡಾಂಗಣ ನಿರ್ಮಾಣ. ರೂ. 14.00 ಲಕ್ಷ** | ಆರ್.ಎ. ಸಯ್ಯದ್ ಶೇ. 8.5% ಹೆಚ್ಚು | ಎಮ್.ಬಿ. ಬೈಂದೂರ್ ಶೇ. 7.28% ಹೆಚ್ಚು | ಎಮ್.ಬಿ. ಬೈಂದೂರ್ ಶೇ. 7.28% ಹೆಚ್ಚು | **ಎಸ್.ಆರ್. ದರ** |
| 28 | **ಪ್ಯಾಕೇಜ್ ಸಂ. (28): ಉದ್ಯಾನವನ ಅಭಿವೃದ್ಧಿ ಹಾಗೂ ಆಚರಣ ಗೋಡೆ ನಿರ್ಮಾಣ. ರೂ. 11.00 ಲಕ್ಷ** | ಎಸ್.ಕೆ. ಶೆಟ್ಟಿ ಶೇ. 19.66% ಹೆಚ್ಚು | ಜಿ.ಎಸ್. ಹಿರೇಮಠ ಶೇ. 11.02% ಹೆಚ್ಚು | ಆರ್.ಎಮ್. ಜವಳಿ ಶೇ. 7.18% ಹೆಚ್ಚು | **ಎಸ್.ಆರ್. ದರ** |
| | | ಆರ್.ಎಮ್. ಜವಳಿ ಶೇ. 7.18% ಹೆಚ್ಚು | ಎಲ್.ಎಸ್. ಫರ್ನಾಂಡಿಸ್ ಶೇ. 12.19% ಹೆಚ್ಚು | – | |
| 29 | **ಪ್ಯಾಕೇಜ್ ಸಂ. (29): ಹೈ ಮಾಸ್ಟ್ ದೀಪಗಳನ್ನು ಅಳವಡಿಸುವುದು. ರೂ. .20.00 ಲಕ್ಷ** | ಶ್ರೀಕಾಂತ್ ಇಲೆಕ್ಟ್ರಿಕಲ್ಸ್ 3.46% ಹೆಚ್ಚು | ಧರಣಿ ಇಲೆಕ್ಟ್ರಿಕಲ್ಸ್ ಶೇ. 9.6% ಹೆಚ್ಚು | ಶ್ರೀಕಾಂತ್ ಇಲೆಕ್ಟ್ರಿಕಲ್ಸ್ 3.46% ಹೆಚ್ಚು | **ಎಸ್.ಆರ್. ದರ** |
| 30 | **ಪ್ಯಾಕೇಜ್ ಸಂ. (30): ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸುವುದು. ರೂ. 6.00 ಲಕ್ಷ** | ಮಾರಿಕಾಂಬಾ ಇಲೆಕ್ಟ್ರಿಕಲ್ಸ್ ಶೇ. 6.87% ಹೆಚ್ಚು | ಶ್ರೀಕಾಂತ್ ಇಲೆಕ್ಟ್ರಿಕಲ್ಸ್ ಶೇ. 7.22% ಹೆಚ್ಚು | ಮಾರಿಕಾಂಬಾ ಇಲೆಕ್ಟ್ರಿಕಲ್ಸ್ ಶೇ. 6.87% ಹೆಚ್ಚು | **ಎಸ್.ಆರ್. ದರ** |
| 31 | **ಪ್ಯಾಕೇಜ್ ಸಂ. (31): ವಿದ್ಯುತ್ ಕಂಬ, ವಿದ್ಯುತ್ ದೀಪ ಹಾಗೂ ರಸ್ತೆ ವಿಭಾಜಕ ನಿರ್ಮಿಸುವುದು. ರೂ. 9.00 ಲಕ್ಷ** | ಅನುಗ್ರಹ ಇಲೆಕ್ಟ್ರಿಕಲ್ಸ್ ಶೇ. 7.89% ಹೆಚ್ಚು | ಈಶ್ವರ ಇಲೆಕ್ಟ್ರಿಕಲ್ಸ್ ಶೇ. 9.64% ಹೆಚ್ಚು | ಅನುಗ್ರಹ ಇಲೆಕ್ಟ್ರಿಕಲ್ಸ್ ಶೇ. 7.89% ಹೆಚ್ಚು | **ಎಸ್.ಆರ್. ದರ** |

**ವಿಷಯ ನಂ 5 (1)**

ನಗರಸಭೆ ನಿಧಿಯಿಂದ 21 ಕಾಮಗಾರಿಗಳಿಗಾಗಿ ಸ್ವೀಕರಿಸಿದ ಟೆಂಡರ್ ದರಗಳ ತುಲನಾತ್ಮಕ ಯಾದಿಯನ್ನು ಪರಿಶೀಲಿಸಿ ಮಂಜೂರಿ ನೀಡುವುದು.

**ದಾಖಲೆಗಳು:–**

1. ಸಾಮಾನ್ಯ ಸಭೆಯ ಠರಾವು ಸಂಖ್ಯೆ : 249 ದಿನಾಂಕ : 02.09.2009.
2. ಟೆಂಡರ್ ಪ್ರಕಟಣೆ ಸಂಖ್ಯೆ : ನಸಶಿ/ ಕಾವಿ/ ಟೆಂಡರು/ ನಗರಸಭೆ ನಿಧಿ/ ವಿವ/ 2009–10/ ದಿನಾಂಕ : 21.10.2009.
3. ಹುಬ್ಬಳ್ಳಿ ಶಾಖೆ, ಕನ್ನಡಪ್ರಭ ದಿನಪತ್ರಿಕೆಯಲ್ಲಿ ದಿನಾಂಕ : 25.10.2009ರಂದು ಪ್ರಕಟಪಡಿಸಿದ ಪ್ರತಿ. ಮತ್ತು ಕರಾವಳಿ ಮುಂಜಾವು ದಿನಪತ್ರಿಕೆಯಲ್ಲಿ ದಿನಾಂಕ : 25.10.2009 ರಂದು ಪ್ರಕಟಪಡಿಸಿದ ಪ್ರತಿ. ಹಾಗೂ ಜನಮಾಧ್ಯಮ ದಿನಪತ್ರಿಕೆಯಲ್ಲಿ ದಿನಾಂಕ : 22.10.2009 ರಂದು ತಿದ್ದುಪಡಿ ಪ್ರಕಟಣೆ ಪ್ರಕಟಪಡಿಸಿದ ಪ್ರತಿ. ಹಾಗೂ ಜನಮಾಧ್ಯಮ ದಿನಪತ್ರಿಕೆಯಲ್ಲಿ ದಿನಾಂಕ : 27.11.2009 ರಂದು ತಿದ್ದುಪಡಿ ಪ್ರಕಟಣೆ ಪ್ರಕಟಪಡಿಸಿದ ಪ್ರತಿ
4. ದಿನಾಂಕ : 30.11.2009 ರಂದು ಸ್ವೀಕರಿಸಿದ ಟೆಂಡರ್ ದರಗಳ ತುಲನಾತ್ಮಕ ಯಾದಿ.
5. ಗುತ್ತಿಗೆದಾರರ ಜೊತೆ ನಡೆಸಿದ ಸಂಧಾನ ಸಭೆ ದಿನಾಂಕ : 03.12.2009.

**ಠರಾವು ನಂ. 295 (1)**
**15-12-2009**

ಶಿರಸಿ ನಗರಸಭೆಯು ವಿವಿಧ ವಾರ್ಡಗಳಲ್ಲಿ ಕಾಮಗಾರಿ ಮಾಡಲು ಕ್ರಿಯಾಯೋಜನೆಯನ್ನು ತಯಾರಿಸಿದ್ದು 1 ರಿಂದ 21 ಕಾಮಗಾರಿಗಳಿಗೆ ಟೆಂಡರು ಪ್ರಕ್ರಿಯೆಯನ್ನು ಮಾಡಲಾಗಿತ್ತು. ದಿನಾಂಕ : 30.11.2009 ರಂದು ಸ್ವೀಕರಿಸಿದ ಟೆಂಡರು ದರಗಳ ತುಲನಾತ್ಮಕ ಯಾದಿ ಮತ್ತು ದಿನಾಂಕ : 03.12.2009 ರಂದು ಗುತ್ತಿಗೆದಾರರೊಂದಿಗೆ ನಡೆಸಿದ ಸಂಧಾನ ಸಭೆ ಸಭೆಯು ಕೂಲಂಕಷವಾಗಿ ಚರ್ಚಿಸಿತು. ಸ್ವೀಕರಿಸಿದ ಟೆಂಡರ್ ದರಗಳಲ್ಲಿ ಕಾಮಗಾರಿ ಅಂದಾಜು ಪತ್ರಿಕೆ ದರಕ್ಕಿಂತ ಶೇ. 4 ರಿಂದ ಶೇ. 8 ರವರೆಗೆ ಹೆಚ್ಚಿಗೆ ದರವನ್ನು ನಮೂದಿಸಿದ್ದು ಇದರಲ್ಲಿ

ಡಾಂಬರೀಕರಣದ ಕಾಮಗಾರಿ ಇರುತ್ತದೆ. ಮಾರುಕಟ್ಟೆಯಲ್ಲಿ ಡಾಂಬರ ದರ ಶೇ.20 ಹೆಚ್ಚಿಗೆ ಇರುವುದನ್ನು ಪರಿಗಣಿಸಿ ಸಂಧಾನ ಸಭೆಯಲ್ಲಿ ಒಪ್ಪಿಸಿಕೊಂಡ ದರ ಡಾಂಬರೀಕರಣ ಕಾಮಗಾರಿಗೆ ಶೇ.3 ಹೆಚ್ಚಿಗೆ ನೀಡಲು ಹಾಗೂ ಇನ್ನುಳಿದ ಕಾಮಗಾರಿಗಳಿಗೆ ಎಸ್.ಆರ್. ದರದಲ್ಲಿ ಕಾಮಗಾರಿ ನಿರ್ವಹಿಸಲು ಗುತ್ತಿಗೆದಾರರು ಒಪ್ಪಿಕೊಂಡಿರುತ್ತಾರೆ. ಇವುಗಳನ್ನು ಅನುಸರಿಸಿ ಅಂದಾಜು ಪತ್ರಿಕೆಯ ದರಕ್ಕಿಂತ ಹೆಚ್ಚಿಗೆ ನಮೂದು ಮಾಡಿರುವ ದರಗಳನ್ನು ಎಸ್.ಆರ್. ದರಕ್ಕೆ ಮತ್ತು ಡಾಂಬರ ಕಾಮಗಾರಿಯನ್ನು ಶೇ. 3 ದರಗಳಿಗೆ ನಿಗಧಿಪಡಿಸಿ ಸರ್ವಾನುಮತದಿಂದ ಅನುಮೋದಿಸಿ ಮಂಜೂರಿ ನೀಡಿ ಠರಾಯಿಸಿತು.

## ಟೆಂಡರ್ ದರಗಳ ತುಲನಾತ್ಮಕ ಯಾದಿ ದಿನಾಂಕ : 30.11.2009

| ಅ. ನಂ | ಕಾಮಗಾರಿಯ ವಿವರ ಮತ್ತು ಅಂದಾಜು ಮೊತ್ತ | ಗುತ್ತಿಗೆದಾರರ ಹೆಸರು ಮತ್ತು ನಮೂದಿಸಿದ ಟೆಂಡರು ದರ | | |
|---|---|---|---|---|
| 1 | 2 | 3 | 4 | 5 |
| 1. | ಮಾರಿಕಾಂಬಾ ಜಿಲ್ಲಾ ಕ್ರೀಡಾಂಗಣದಲ್ಲಿ ಶೌಚಾಲಯ ನಿರ್ಮಾಣ 4.25 ಲಕ್ಷ | ಎಮ್.ಬಿ.ಬೈಂದೂರ ಶೇ. 4 ಹೆಚ್ಚು ಎಲ್–1 | ಈರಪ್ಪ ಈರಪ್ಪ ಹಾವೇರಿ ಶೇ. 12 ಹೆಚ್ಚು ಎಲ್–2 | |
| 2. | ಇಂದಿರಾ ನಗರದಲ್ಲಿ ಅಂಗನವಾಡಿ ಕಟ್ಟಡ ನಿರ್ಮಿಸುವುದು 3.25 ಲಕ್ಷ | ಎಮ್.ಬಿ.ಬೈಂದೂರ ಶೇ. 6 ಹೆಚ್ಚು ಎಲ್–2 | ಎಸ್.ಎಲ್. ನಾಯ್ಕ ಶೇ.5 ಹೆಚ್ಚು ಎಲ್–1 | |
| 3. | ನಗರಸಭೆ ಸರ್ವೆ ನಂ.73ರ ಜಲಸಮಗ್ರಹಾಲಯ ಹತ್ತಿರದ ಜಾಗೆಯಲ್ಲಿ ಮಳಿಗೆ ನಿರ್ಮಿಸುವುದು. 9.80 ಲಕ್ಷ | ಎಮ್.ಬಿ.ಬೈಂದೂರ ಶೇ. 9 ಹೆಚ್ಚು ಎಲ್–2 | ಜಿ.ಎಸ್.ಹೀರೆಮಠ ಶೇ.8 ಹೆಚ್ಚು ಎಲ್–1 | |
| 4. | ಶಿರಸಿ ನಗರಸಭೆ ಸ.ನಂ.73 ರ ಜಲಸಮಗ್ರಹಾಲಯ ಹತ್ತಿರದ ಜಾಗೆಯಲ್ಲಿ ಕ್ಯಾಂಟಿನ್ ನಿರ್ಮಿಸುವುದು ರೂ.1.20 ಲಕ್ಷಗಳು. | ಎಮ್.ಬಿ.ಬೈಂದೂರ ಶೇ. 9 ಹೆಚ್ಚು ಎಲ್–2 | ಜಿ.ಎಸ್.ಹೀರೆಮಠ ಶೇ.7.8 ಹೆಚ್ಚು ಎಲ್–1 | ಜಿ.ಎಚ್. ದಾವಣಗೇರಿ ಶೇ.10 ಹೆಚ್ಚು ಎಲ್–3 |
| 5. | ವಾ.ನಂ.3 ವಿಜಯಾ ಗ್ಯಾರೇಜ್ ಪಕ್ಕದ ರಸ್ತೆಗೆ ಡಾಂಬರೀಕರಣ ಹಾಗೂ ಲಮಾಣಿಗಲ್ಲಿ ರಸ್ತೆ ಬದಿಗೆ ಚರಂಡಿ ನಿರ್ಮಾಣ 3.00 ಲಕ್ಷ | ಎಸ್.ಎಲ್. ನಾಯ್ಕ ಶೇ. 12 ಹೆಚ್ಚು ಎಲ್–2 | ಸಂಜೀವ ಕೆ. ಶೆಟ್ಟಿ ಶೇ. 8 ಹೆಚ್ಚು ಎಲ್–1 | |
| 6. | ವಾ.ನಂ.4 ರಂಗ್ಲೊ ಎಂಟರ್‌ಪ್ರೈಸಸ್‌ದಿಂದ, ಬೆಳ್ಳಕ್ಕಿ ಕೆರೆಯ ತನಕ ಡಾಂಬರೀಕರಣ 1.50 ಲಕ್ಷ | ಎಂ.ಲಕ್ಷ್ಮಣ ಶೆಟ್ಟಿ ಶೇ. 10 ಹೆಚ್ಚು ಎಲ್–2 | ಸಿ.ವಿ.ಉಪ್ಪಿನ ಶೇ. 6 ಹೆಚ್ಚು ಎಲ್–1 | |
| 7. | ವಾ.ನಂ.5 ಅನಂತ ಪೂಜಾರಿ ಮನೆಯ ಹತ್ತಿರ ರಸ್ತೆಗೆ ಪಿಚ್ಚಿಂಗ್ ನಿರ್ಮಿಸುವದು. 2.00 ಲಕ್ಷ | ಎಮ್.ಬಿ.ಬೈಂದೂರ ಶೇ. 8 ಹೆಚ್ಚು ಎಲ್–2 | ಈರಪ್ಪ ಈರಪ್ಪ ಹಾವೇರಿ ಶೇ. 4 ಹೆಚ್ಚು ಎಲ್–1 | |
| 8. | ವಾ.ನಂ.6 ಗಣಪತಿ ನಾಯ್ಕ ಮನೆಯಿಂದ ಎಡ್ವಿನ್ ಮನೆಯವರೆಗೆ ಡಾಂಬರೀಕರಣ 1.50 ಲಕ್ಷ | ಎಮ್.ಬಿ.ಬೈಂದೂರ ಶೇ. 5 ಹೆಚ್ಚು ಎಲ್–2 | ಎಸ್.ಎಲ್. ನಾಯ್ಕ ಶೇ.4 ಹೆಚ್ಚು ಎಲ್–1 | |
| 9. | ವಾ.ನಂ.7 ಮಂಜುನಾಥ ಹೆಗಡೆ ಮನೆಯಿಂದ ಗೌತಮ ನಗರಕರ ಮನೆಯವರೆಗೆ ರಸ್ತೆಯ ಎರಡು ಬದಿಗೆ ಚರಂಡಿ 2.00 ಲಕ್ಷ | ಎಮ್.ಬಿ.ಬೈಂದೂರ ಶೇ. 8 ಹೆಚ್ಚು ಎಲ್–2 | ಎಂ. ಲಕ್ಷ್ಮಣ ಶೆಟ್ಟಿ ಶೇ. 5 ಹೆಚ್ಚು ಎಲ್–1 | |
| 10. | ವಾ.ನಂ.8 ವಿವೇಕಾಂದ ನಗರ, ವಿ.ಕೆ. ಹೆಗಡೆ ಮನೆಯ ಎದುರಿನ ರಸ್ತೆಗೆ ಡಾಂಬರೀಕರಣ. 3.10 ಲಕ್ಷ | ಎಮ್.ಬಿ.ಬೈಂದೂರ ಶೇ. 12 ಹೆಚ್ಚು ಎಲ್–2 | ಎಮ್.ಎಮ್. ದೇವಡಿಗ ಶೇ. 7 ಹೆಚ್ಚು ಎಲ್–1 | |
| 11. | ವಾ.ನಂ.8 ವಿವೇಕಾನಂದ ನಗರದ, ನರಸಿಂಹ ಭಟ್ಟ ಮನೆಯಿಂದ ಕೆ.ಎಸ್. ಹೆಗಡೆ ಮನೆಯವರೆಗೆ ಡಾಂಬರೀಕರಣ 4.00 ಲಕ್ಷ | ಎಂ. ಲಕ್ಷ್ಮಣ ಶೆಟ್ಟಿ ಶೇ. 10 ಹೆಚ್ಚು ಎಲ್–2 | ಸಿ.ವಿ.ಉಪ್ಪಿನ ಶೇ. 7 ಹೆಚ್ಚು ಎಲ್–1 | |
| 12. | ವಾ.ನಂ.9 ಮುರ್ಡೇಶ್ವರ ಮಾಸ್ತರ ಮನೆಯ ಪಕ್ಕದ ಓಣಿ ರಸ್ತೆಗೆ ಕಾಂಕ್ರಿಟ್ ಅಳವಡಿಸುವುದು ಹಾಗೂ ಬಾವಿ ದುರಸ್ಥಿ 1.8. ಲಕ್ಷ | ಎಮ್.ಬಿ.ಬೈಂದೂರ ಶೇ. 8 ಹೆಚ್ಚು ಎಲ್–2 | ಈರಪ್ಪ ಈರಪ್ಪ ಹಾವೇರಿ ಶೇ. 4 ಹೆಚ್ಚು ಎಲ್–1 | |

| | | | | |
|---|---|---|---|---|
| 13. | ವಾ.ನಂ.10 ವಿನಾಯಕ ಕಾಲೋನಿ ಶಾಮಕಳಿ ಹೊಳೆ ಮನೆಯಿಂದ ಶ್ರೀ ದೇವಪ್ರಸಾದ ನಿಲಯದವರೆಗೆ ಚರಂಡಿ ಹಾಗೂ ಡಾಂಬರೀಕರಣ 2.30 ಲಕ್ಷ | ಎಮ್.ಬಿ.ಬೈಂದೂರ ಶೇ. 10 ಹೆಚ್ಚು ಎಲ್–2 | ಚಂದ್ರ ಆರ್. ದೇವಡಿಗ ಶೇ. 8 ಹೆಚ್ಚು ಎಲ್–1 | |
| 14. | ವಾ.ನಂ.13 ಕರ್ಜಗಿ ಮನೆಯಿಂದ ಯಶಸ್ವಿನಿ ನಿಲಯದವರೆಗೆ ಖಡೀಕರಣ ಹಾಗೂ ಸಿ.ಡಿ. ನಿರ್ಮಾಣ 2.20 ಲಕ್ಷ | ಪರಮೇಶ್ವರ ರಾಜು ಶೇ. 7 ಹೆಚ್ಚು ಎಲ್–2 | ಬಿ.ಕೆ. ಬೋವಿವಡ್ಡರ ಶೇ. 4.99 ಹೆಚ್ಚು ಎಲ್–1 | |
| 15. | ವಾ.ನಂ13 ಅಯ್ಯಪ್ಪ ನಗರದ ರಸ್ತೆಗೆ ಖಡೀಕರಣ ಮಾಡುವುದು. 0.75 ಸಾವಿರ. | ಎಮ್.ಬಿ.ಬೈಂದೂರ ಶೇ. 7 ಹೆಚ್ಚು ಎಲ್–2 | ಪರಮೇಶ್ವರ ಬೋವಿ ಶೇ. 5 ಹೆಚ್ಚು ಎಲ್–1 | |
| 16. | ವಾ.ನಂ.24 ವಾರ್ನೇಕರ ಮನೆಯಿಂದ ತಾರೀಮನೆ ಮನೆಯವರೆಗೆ ಚರಂಡಿ ನಿರ್ಮಾಣ 1.50 ಲಕ್ಷ | ಎಮ್.ಬಿ.ಬೈಂದೂರ ಶೇ. 8 ಹೆಚ್ಚು ಎಲ್–2 | ಪರಮೇಶ್ವರ ರಾಜು ಶೇ. 3 ಹೆಚ್ಚು ಎಲ್–1 | |
| 17. | ವಾ.ನಂ.25 ರೊಡ್ರಿಗ್ಸ್ ಮನೆಯಿಂದ ಮಳೆ ನೀರು ಚರಂಡಿಯವರೆಗೆ ರಸ್ತೆಗೆ ಡಾಂಬರೀಕರಣ 2.00 ಲಕ್ಷ | ಸಂಜೀವ ಕೆ.ಶೆಟ್ಟಿ ಶೇ. 8 ಹೆಚ್ಚು ಎಲ್–1 | ಎಸ್.ಎಲ್. ನಾಯ್ಕ ಶೇ. 11 ಹೆಚ್ಚು ಎಲ್–2 | |
| 18. | ವಾ.ನಂ. 26 ಶ್ರೀನಿಧಿಯಿಂದ ರಾಜು ಜೋಗಳೇಕರ ಮನೆಯವರೆಗೆ ಖಡೀಕರಣ 1.70 ಲಕ್ಷ | ಎಮ್.ಬಿ.ಬೈಂದೂರ ಶೇ. 8 ಹೆಚ್ಚು ಎಲ್–2 | ಈರಪ್ಪ ಈರಪ್ಪ ಹಾವೇರಿ ಶೇ. 3 ಹೆಚ್ಚು ಎಲ್–1 | |
| 19. | ವಾ.ನಂ.28 ಅಂಬಾಗಿರಿಯ ಗ್ಯಾಸ್ ಗೋಡೌನದಿಂದ ರಾಮ ನಾಯ್ಕ ಮನೆಯವರೆಗೆ ಹೋಗುವ ರಸ್ತೆ ಡಾಂಬರೀಕರಣ 3.70 ಲಕ್ಷ | ಎಮ್.ಬಿ.ಬೈಂದೂರ ಶೇ. 7 ಹೆಚ್ಚು ಎಲ್–1 | ಜಿ.ಎಸ್.ಹೀರೆಮಠ ಶೇ. 8 ಹೆಚ್ಚು ಎಲ್–2 | |
| 20. | ವಾ.ನಂ.30 ಸತೀಶ ಶೆಟ್ಟಿ ಮನೆಯಿಂದ ಜಾಕೀರ ಮನೆಯವರೆಗೆ ಹಾಗೂ ಮಡಗಾಂವಕರ ಮನೆಯ ರಸ್ತೆಗೆ ಖಡೀಕರಣ 0.70 ಸಾ. | ಎಮ್.ಬಿ.ಬೈಂದೂರ ಶೇ. 8 ಹೆಚ್ಚು ಎಲ್–2 | ನಾಗಭೂಷಣ ಪೂಜಾರ ಶೇ. 4 ಹೆಚ್ಚು ಎಲ್–1 | |
| 21. | ವಾ.ನಂ31 ರಾಮನಬೈಲ ಬಸಪ್ಪ ದೇವರ ಕ್ರಾಸದಿಂದ, ಫಕೀರಸಾಬ ಮನೆಯವರೆಗೆ ರಸ್ತೆಯ ಒಂದು ಬದಿಗೆ ಚರಂಡಿ 2.25 ಲಕ್ಷ | ಎಮ್.ಬಿ.ಬೈಂದೂರ ಶೇ. 8 ಹೆಚ್ಚು ಎಲ್–2 | ಎನ್.ಎಮ್. ಗಾಜೀಪುರ ಶೇ. 5 ಹೆಚ್ಚು ಎಲ್–1 | |

**ವಿಷಯ ನಂ : 6**

ಶಿರಸಿ ನಗರ ಸಾರ್ವಜನಿಕ ಅಭಿವೃದ್ಧಿ ಕಾಮಗಾರಿಗಳನ್ನು ಅಂದಾಜು ಪತ್ರಿಕೆಗಿಂತ ಹೆಚ್ಚಿನ ಕಾಮಗಾರಿ ಮಾಡಿದ್ದನ್ನು ಮಂಜೂರಿ ನಿರೀಕ್ಷಣೇಯ ಮೇರೆಗೆ ಮಂಜೂರಿ ಮಾಡಿರುವುದನ್ನು ಅನುಮೋದಿಸಿ ಮಂಜೂರಿ ಮಾಡುವುದು ಮತ್ತು ಹೆಚ್ಚಿನ ಕಾಮಗಾರಿ ಬಿಲ್ ಪರಿಶೀಲಿಸಿ ಮಂಜೂರಿ ನೀಡುವುದು.

**ಠರಾವು ನಂ. 293**
**15-12-2009**

ಶಿರಸಿ ನಗರಸಭೆಯು ಎಸ್.ಎಫ್.ಸಿ. ಯೋಜನೆಯಡಿ ಮಂಜೂರಾದ ಅನುದಾನದಲ್ಲಿ ಕಾಮಗಾರಿಗಳನ್ನು ನಿರ್ವಹಣೆ ಮಾಡಲು ಕ್ರಿಯಾಯೋಜನೆ ತಯಾರಿಸಿ ಮಂಜೂರಿ ಪಡೆದು ಟೆಂಡರ ಪ್ರಕ್ರಿಯೆ ಮಾಡಿ ಕಾಮಗಾರಿ ಅನುಷ್ಠಾನ ಮಾಡಲು ಕಾರ್ಯಾದೇಶ ಮಾಡಲಾದ ಕಾಮಗಾರಿ ಅನುಷ್ಠಾನ ಮಾಡವ ಕಾಲಕ್ಕೆ ಅಂದಾಜು ಪತ್ರಿಕೆಗಿಂತ ಹೆಚ್ಚಿನ ಕಾಮಗಾರಿಯನ್ನು ಮಾಡಲು ಸಾರ್ವಜನಿಕರ ಬೇಡಿಕೆ ಮತ್ತು ಸ್ಥಳೀಯ ಅನುಕೂಲತೆಗನುಗುಣವಾಗಿ ಕಾಮಗಾರಿಯನ್ನು ಅಂದಾಜು ಪತ್ರಿಕೆಗಿಂತ ಶೇ. 25 ಕ್ಕೂ ಮೀರದಂತೆ ಕಾಮಗಾರಿಯನ್ನು ಮಾಡಿದ್ದು, ಸಭೆಯ ಮಂಜೂರಿ ನಿರೀಕ್ಷಣೆಯ ಮೇರೆಗೆ ಮಂಜೂರು ಮಾಡಿರುವುದನ್ನು ಮತ್ತು ಸಭೆಯ ಮಂಜೂರಿಗಾಗಿ ಸಾದರಪಡಿಸಿದ ಕಾಮಗಾರಿಗಳನ್ನು ಸಭೆಗೆ ಓದಿ ಹೇಳಲಾಯಿತು. ಸಭೆಯು ಒಪ್ಪಿ ಅನುಮೋದಿಸಿ ಮಂಜೂರಿ ನೀಡಿ ಸರ್ವಾನುಮತದಿಂದ ಅನುಮೋದಿಸಿ ಠರಾಯಿಸಿತು.

**ಎಸ್.ಎಫ್.ಸಿ. ಯೋಜನೆಯಡಿ ಮಂಜೂರಾದ ಅನುದಾನದಲ್ಲಿ ಕಾಮಗಾರಿಗಳನ್ನು ಹೆಚ್ಚಿಗೆ ನಿರ್ವಹಣೆ ಮಾಡಲು ತಯಾರಿಸಿದ ಪರಿಷ್ಕೃತ ಅಂದಾಜು ಪತ್ರಿಕೆಗಳಿಗೆ ಮಂಜೂರಾತಿ ನೀಡುವುದು**

| ಅ. ನಂ. | ಕಾಮಗಾರಿ ವಿವರ | ಕಾಮಗಾರಿ ಅಂದಾಜು ಪತ್ರಿಕೆ ಮೊತ್ತ | ಹೆಚ್ಚುವರಿಯಾಗಿ ಪಾವತಿಸಬೇಕಾದ ಕಾಮಗಾರಿ ಮೊತ್ತ | ಷರಾ |
|---|---|---|---|---|
| 1. | 2008-09 ನೇ ಸಾಲಿನ ಎಸ್.ಎಫ್.ಸಿ. ವಿಶೇಷ ಅನುದಾನ ರೂ.25.00 ಲಕ್ಷಗಳ ಪ್ಯಾಕೇಜ್ ನಂ. 3 ವಾರ್ಡ ನಂ.19 ರಲ್ಲಿ ನೆಹರು ನಗರ ರೀಟಾ ಮನೆಯ ಎದುರು ರಸ್ತೆ ಕಾಂಕ್ರೀಟ್ ಫೇವಿಂಗ್ ಮಾಡುವ ಕಾಮಗಾರಿಯ ಉದ್ದಗಲಕ್ಕೆ ಹೆಚ್ಚಿಗೆ ಆಗಿದ್ದು, ಶೇಕಡಾ 25 ಕ್ಕೆ ಮೀರದಂತೆ ಹೆಚ್ಚಿನ ಕಾಮಗಾರಿ ಮಾಡಿದ ಮೊತ್ತವನ್ನು ಮಂಜೂರಿಯ ನಿರೀಕ್ಷಣೆ ಮೇರೆಗೆ ಮಂಜೂರು ಮಾಡಿರುವುದು. | 1,50,000-00 | 1,89,000-00 | ಗುತ್ತಿಗೆದಾರರು : ಶ್ರೀ ಬಿ.ಕೆ. ಭೋವಿವಡ್ಡರ. |
| 2. | 2007-08 ನೇ ಸಾಲಿನ ಎಸ್.ಎಫ್.ಸಿ. ಅನುದಾನದಲ್ಲಿ ಕೈಗೊಂಡ ಕಾಮಗಾರಿ. ರಾಯಪ್ಪ ಹುಲೇಕಲ್ ಶಾಲೆಯ ಮಹಡಿ ನಿರ್ಮಾಣ. | 2,00,000-00 | 2,49,230-00 | ಗುತ್ತಿಗೆದಾರರು : ಶ್ರೀ.ಎಮ್. ಎಮ್. ದೇವಾಡಿಗ. |
| 3. | ಪ್ಯಾಕೇಜ ಸಂಖ್ಯೆ 2 ವಾ.ಸಂಖ್ಯೆ 3 ಹಾಗೂ 25 ರಲ್ಲಿ ರಸ್ತೆಗೆ ಡಾಂಬರೀಕರಣ ಕಾಮಗಾರಿ ಮತ್ತು ಇತರೇ ಕಾಮಗಾರಿ. (ಯೋಗ ಮಂದಿರ ರಸ್ತೆ ಡಾಂಬರೀಕರಣ ಕಾಮಗಾರಿ ಅಂದಾಜು ಮೊತ್ತ ರೂ.3,00,000-00 ಪರಿಷ್ಕೃತ ಆಗಿ ರೂ.4,52,000-00 ಆಗಿರುತ್ತದೆ. | 9,90,000-00 | 11,52,000-00 | ಗುತ್ತಿಗೆದಾರರ : ಶ್ರೀ. ಎಮ್.ಬಿ. ಬೈಂದೂರ |

**ವಿಷಯ ನಂ 7:**

ಸಹಾಯವಾಣಿ ಟೆಂಡರ್ ಪ್ರಕ್ರಿಯೆ ಮಾಡಿದ್ದು ಯಾವುದೇ ಟೆಂಡರು ಬಾರದೇ ಇರುವುದರಿಂದ 1 ವರ್ಷದ ಅವಧಿಗೆ ಪ್ರೇರಣಾ ಎನ್.ಜಿ.ಓ. ಇವರಿಗೆ ಅವಧಿ ವಿಡಾಯಿಸಿ ಕೊಡುವ ಕುರಿತು ವಿಚಾರ.

**ದಾಖಲೆಗಳು:-**

1. ಸಾಮಾನ್ಯ ಸಭೆಯ ಠರಾವು ಸಂಖ್ಯೆ : 236 ದಿನಾಂಕ : 11.08.2009.
2. ಟೆಂಡರ್ ಪ್ರಕಟಣೆ ಸಂಖ್ಯೆ : CMC/ SAS/ 486/2009-10 ದಿನಾಂಕ : 09.09.2009.
3. ಕರಾವಳಿ ಮುಂಜಾವು ದಿನಪತ್ರಿಕೆಯಲ್ಲಿ ದಿನಾಂಕ : 17.09.2009 ರಂದು ಪ್ರಕಟಪಡಿಸಿದ ಪ್ರತಿ.
4. ಶ್ರೀ. ಆರ್.ಎಲ್. ಶಿರಾಲಿ, ಅಧ್ಯಕ್ಷರು, ಪ್ರೇರಣಾ, ರಜಿಸ್ಟರ್ಡ್ ಎನ್.ಜಿ.ಓ. ಬನವಾಸಿ ರಸ್ತೆ, ಶಿರಸಿ ಇವರ ಅರ್ಜಿ ದಿನಾಂಕ : 05.10.2009.
5. ಶಿರಸಿ ನಗರಸಭೆಯ ಸಹಾಯವಾಣಿ ನಿರ್ವಹಣೆಯ ಕಾರ್ಯಾದೇಶ ದಿನಾಂಕ : 31.08.2009.

**ಠರಾವು ನಂ. 294**
**15-12-2009**

ಶಿರಸಿ ನಗರಸಭೆಯ ಸಾರ್ವಜನಿಕ ಕುಂದುಕೊರತೆಗಳ ದಾಖಲಾತಿ ಮತ್ತು ನಿರ್ವಹಣೆ ಮಾಡುವಂತಹ ಸಹಾಯವಾಣಿ ಘಟಕ ನಿರ್ವಹಣೆ ಮಾಡಲು 2009-10 ನೇ ಸಾಲಿಗಾಗಿ ಟೆಂಡರ್ ಪ್ರಕ್ರಿಯೆಯನ್ನು ಮಾಡಲಾಗಿತ್ತು. ಟೆಂಡರ್ ಹಾಕಲು ದಿನಾಂಕ : 30.09.2009 ಕೊನೆಯ ದಿನವಾಗಿತ್ತು. ಸದರಿ ದಿನದಂದು ಯಾವುದೇ ಟೆಂಡರ್ ಸ್ವೀಕೃತವಾಗಿರುವುದಿಲ್ಲ. 2008-09ನೇ ಸಾಲಿನಲ್ಲಿ ಟೆಂಡರ್ ವಿಜೇತರಾದ ಪ್ರೇರಣಾ ಎನ್.ಜಿ.ಓ. ಶಿರಸಿ ಇದರ ಅಧ್ಯಕ್ಷರು, ರಾಮಕೃಷ್ಣ ಶಿರಾಲಿ ಇವರು ಟೆಂಡರ್ ಅವಧಿ ಮುಗಿದ ನಂತರ 2009-10ನೇ ಸಾಲಿನ ಟೆಂಡರ್ ಪ್ರಕ್ರಿಯೆ ಮುಗಿಸಿ ಕಾರ್ಯಾದೇಶ ನೀಡುವವರೆಗೆ ಕಾರ್ಯನಿರ್ವಹಿಸಲು ದಿನಾಂಕ : 31.08.2009 ರಂದು ಕಾರ್ಯಾದೇಶ ನೀಡಲಾಗಿತ್ತು. ಸದರಿಯವರು ದಿನಾಂಕ : 05.10.2009 ರಂದು ಅರ್ಜಿಯನ್ನು ಸಲ್ಲಿಸಿ ಮುಂದಿನ ಒಂದು ವರ್ಷದ ಅವಧಿಗಾಗಿ ಕಾರ್ಯನಿರ್ವಹಣೆ ಮಾಡಲು ಇಚ್ಛಿಸಿದ್ದು ಸಭೆಯು ಕೂಲಂಕಷವಾಗಿ ಪರಿಶೀಲಿಸಿತು. ಟೆಂಡರ್ ಪ್ರಕ್ರಿಯೆ ಮಾಡಿದಾಗ ಯಾವುದೇ ಟೆಂಡರ್ ಬಾರದೇ ಇರುವದರಿಂದ ಮತ್ತು ಕಳೆದ ವರ್ಷದಲ್ಲಿ ಟೆಂಡರ್ ವಿಜೇತರಾದ ಪ್ರೇರಣಾ ಎನ್.ಜಿ.ಓ. ರವರು ಕಾರ್ಯನಿರ್ವಹಿಸಲು ಒಪ್ಪಿರುವುದರಿಂದ ಅವರಿಗೆ ಮುಂದಿನ ಒಂದು ವರ್ಷದವರೆಗೆ ಅಂದರೆ 31.08.2010 ರವರೆಗೆ ಅವಧಿಯನ್ನು ವಿಸ್ತರಿಸಿ ಕಾರ್ಯಾದೇಶಮಾಡಲು ಸಭೆಯು ಸರ್ವಾನುಮತದಿಂದ ಅನುಮೋದಿಸಿ ಠರಾಯಿಸಿತು.

**<u>ವಿಷಯ ನಂ 8</u>**

ಶಿರಸಿ ಸಿ.ಟಿ. ಸರ್ವೇ ಸಂ.1007 ನಿವೇಶನ ವಿಸ್ತೀರ್ಣ 556 ಚೌ.ಯಾ. ಮತ್ತು ಸಿ.ಟಿ.ಎಸ್. ಸಂ. 1008 ವಿಸ್ತೀರ್ಣ 62 ಚೌ.ಯಾ. ಡಿಸ್ಟ್ರಿಕ್ಟ್ ಲೋಕಲ್ ಬೋರ್ಡ ಪ್ರೆಸಿಡೆಂಟ್ ಕಾನಡಾ, ಉರ್ದು ಹೆಣ್ಣು ಹುಡುಗಿಯರ ಶಾಲೆಯ ಬಗ್ಗೆ ಎಂದು ಖಾತೆ ಇದ್ದು ಸದರಿ ನಿವಶನವದ ಬದಲಾಗಿ ಉರ್ದು ಹೆಣ್ಣು ಮಕ್ಕಳ ಶಾಲೆಗೆ ಈ ಹಿಂದೆ ನಿವೇಶನವನ್ನು ನೀಡಿದ್ದು ಸದರಿ ನಿವೇಶನವನ್ನು ನಗರಸಭೆಗೆ ಬಿಟ್ಟುಕೊಟ್ಟಿದ್ದು ನಗರಸಭೆ ವಹಿವಾಟಿಯಲ್ಲಿದ್ದುದ್ದನ್ನು ಖಾತೆ ಹಕ್ಕು ದಾಖಲಾತಿ ಸಲುವಾಗಿ ಜಿಲ್ಲಾಧಿಕಾರಿಗಳಿಗೆ ವಿನಂತಿಸುವ ಕುರಿತು ವಿಚಾರ.

**ಠರಾವು ನಂ. 295:**
**15-12-2009**

ಶಿರಸಿ ಸಿ.ಟಿ. ಸರ್ವೇ ಸಂ.1007 ನಿವೇಶನ ವಿಸ್ತೀರ್ಣ 556 ಚೌ.ಯಾ. ಮತ್ತು ಸಿ.ಟಿ.ಎಸ್. ಸಂ. 1008 ವಿಸ್ತೀರ್ಣ 62 ಚೌ.ಯಾ. ಡಿಸ್ಟ್ರಿಕ್ಟ್ ಲೋಕಲ್ ಬೋರ್ಡ ಪ್ರೆಸಿಡೆಂಟ್ ಕಾನಡಾ ಉರ್ದು ಹೆಣ್ಣು ಹುಡುಗಿಯರ ಶಾಲೆಯ ಬಗ್ಗೆ ಎಂದು ಖಾತೆ ಇದ್ದು ಸದರಿ ನಿವೇಶನದ ಬದಲಾಗಿ ಈ ಹಿಂದೆ ಸಿ.ಟಿ. ಸರ್ವೇ ನಂ. ನೇದರಲ್ಲಿ ಉರ್ದು ಹೆಣ್ಣು ಮಕ್ಕಳ ಶಾಲೆಗಾಗಿ ನಗರಸಭೆ ಮಾಲಿಕತ್ವದ ನಿವೇಶನವನ್ನು ನೀಡಲಾಗಿದೆ. ಈ ಸಂದರ್ಭದಲ್ಲಿ ಸಿ.ಟಿ. ಸರ್ವೇ ನಂ. 1007 ರಲ್ಲಿ ಇರುವ ಗೀಳಾದ ಎರಡು ಕೋಣೆಯ ಕಟ್ಟಡವನ್ನು ಶಿರಸಿ ನಗರಸಭೆಗೆ ಬಿಟ್ಟುಕೊಟ್ಟಿರುತ್ತಾರೆ. ಅಂದಿನಿಂದ ಇಲ್ಲಿಯವರೆಗೆ ಸದರಿ ನಿವೇಶನ ನಗರಸಭೆಯ ತಾಬೆಯಲ್ಲಿದ್ದು ಸಾರ್ವಜನಿಕ ವಹಿವಾಟಿಯಲ್ಲಿರುತ್ತದೆ. ಮತ್ತು ಗೀಳಾದ ಕಟ್ಟಡವನ್ನು ತೆಗೆದು ಖುಲ್ಲಾಪಡಿಸಲಾಗಿರುತ್ತದೆ. ವಹಿವಾಟಿಯಲ್ಲಿರುವಂತಹ ನಿವೇಶನ ಅತಿ ಚಿಕ್ಕದಾಗಿರುವುದರಿಂದ ಮತ್ತು ವ್ಯಾಪಾರಿ ಕೇಂದ್ರದ ಮಧ್ಯವರ್ತಿಯ ಸ್ಥಳದಲ್ಲಿರುವುದರಿಂದ ಅಕ್ಕಪಕ್ಕ ವಿವಿಧ ರೀತಿಯ ವ್ಯಾಪಾರ ಉದ್ಯೋಗ ನಡೆಯುತ್ತಿದ್ದು ಸದರಿ ಸ್ಥಳದಲ್ಲಿ ಸಾರ್ವಜನಿಕ ವಹಿವಾಟಿ ನಡೆಯುತ್ತಿದೆ. ಸಿ.ಟಿ. ಸರ್ವೇ ದಾಖಲೆಯಲ್ಲಿ ಡಿಸ್ಟ್ರಿಕ್ಟ್ ಲೋಕಲ್ ಬೋರ್ಡ ಪ್ರೆಸಿಡೆಂಟ್ ಕಾನಡಾ ಉರ್ದು ಹೆಣ್ಣು ಹುಡುಗಿಯರ ಶಾಲೆ ಎಂಬ ಪದವನ್ನು ಕಡಿಮೆ ಮಾಡಿ, ಪೌರಾಯುಕ್ತರು ನಗರಸಭೆ ಶಿರಸಿ ಎಂದು ಖಾತೆದಾರ ಕಾಲಂ ನಲ್ಲಿ ದಾಖಲುಪಡಿಸಲು ಸಭೆಯು ಕೂಲಂಕಷವಾಗಿ ಚರ್ಚಿಸಿ ನಿರ್ಣಯಿಸಿತು. ಈ ಮಧ್ಯೆ ಸದಸ್ಯರಾದ ಶ್ರೀ ಖಾನ್ ಅಮಾನುಲ್ಲಾ ಅಬ್ದುಲ್ ರೆಹಮಾನ್ ಆಕ್ಷೇಪ ಮಾಡಿದರು. ಅದಕ್ಕೆ ಬೆಂಬಲವಾಗಿ ಸದಸ್ಯರಾದ ಶ್ರೀಮತಿ ಶಂಶಾದ್ ಅನವಟ್ಟಿ, ಶ್ರೀಮತಿ ರುಕ್ಸಾನ ಹೆರೂರ, ಶ್ರೀಮತಿ ಶೇಖ್ ಹಾಜೀರಾ ಅಬ್ದುಲ್ ಬಶೀರ್ ಇವರು ಅನುಮೋದಿಸಿದರು. ಮತ್ತು ದಾಖಲೆಯಲ್ಲಿ ಜಿಲ್ಲಾಧಿಕಾರಿಗಳ ಹೆಸರು ಕಡಿಮೆ ಮಾಡಿ ನಗರಸಭೆಯ ದಾಖಲೆ ಆಗುವವರೆಗೆ ಸದರಿ ಸ್ಥಳದಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡಬಾರದಾಗಿ ಸೂಚನೆಯನ್ನು ಮಾಡಿದರು. ಸಿ.ಟಿ. ಸರ್ವೇ ನಂ. 1007 ಮತ್ತು ಸಿ.ಟಿ.ಸರ್ವೇ ನಂ. 1008 ಕ್ಕೆ ಪೌರಾಯುಕ್ತರು ನಗರಸಭೆ ಶಿರಸಿ ಇವರ ಖಾತೆಯನ್ನು ದಾಖಲು ಮಾಡುವಂತೆ ತಹಶೀಲ್ದಾರ್ ಶಿರಸಿ ಮತ್ತು ಸಿ.ಟಿ. ಸರ್ವೇ ಆಫೀಸರ್ ಶಿರಸಿ ಇವರಿಗೆ ಅರ್ಜಿಯನ್ನು ಸಲ್ಲಿಸಲು ಸಭೆಯು ಬಹುಮತದಿಂದ ನಿರ್ಣಯಿಸಿ ಠರಾಯಿಸಿತು.

**ವಿಷಯ ನಂ 9:**

ಶಿರಸಿ ಸಿ.ಟಿ. ಸರ್ವೇ ಸಂ. 1322 ಬಿ ನಿವೇಶನ ಕ್ಷೇತ್ರ 23 ಚೌರಸ್ ಯಾರ್ಡ ಬಿ.ಎಸ್.ಎನ್.ಎಲ್. ಆಫೀಸ್ ಎದುರುಗಡೆ ಇದ್ದು ಸದರಿ ನಿವೇಶನ ಸಾರ್ವಜನಿಕರ ಉಪಯೋಗಕ್ಕಾಗಿ ರಿಕ್ಷಾ ನಿಲ್ದಾಣ ನಿರ್ಮಿಸಲು ಬೇಕಾಗಿರುವುದರಿಂದ ಅಲ್ಲಿದ್ದವರಿಗೆ ಪಕ್ಕದಲ್ಲಿ ಜಾಗೆಯನ್ನು ಕೊಟ್ಟು ಸದರಿ ಜಾಗೆಯನ್ನು ಪಡೆಯುವ ಕುರಿತು ವಿಚಾರ.

ದಾಖಲೆಗಳು:-

6. ದಿನಾಂಕ: 09-12-2009ರಂದು ಸಾಯಂಕಾಲ 5:00 ಘಂಟೆಗೆ ನಗರಸಭೆಯ ಸಭಾ ಭವನದಲ್ಲಿ ನಡೆದ ಸಂಧಾನ ಸಭೆಯ ನಡಾವಳಿಕೆ.
7. ಸಿ.ಟಿ.ಎಸ್. ಸಂ. 1322/ಬಿ ಕ್ಷೇತ್ರ 23 $^{3}/_{9}$ ನಕಾಶೆ ಮತ್ತು ನಕಲು.
8. ಶ್ರೀನಿವಾಸ ಸುಬ್ರಾಯ್ ಪಾಲೇಕರ್ ಮತ್ತು ವಿಶ್ವನಾಥ ಸುಬ್ರಾಯ್ ಪಾಲೇಕರ್ ಇವರ ಅರ್ಜಿ ದಿನಾಂಕ: 23-11-2007ರಂದು ಮಾನ್ಯ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ ಅರ್ಜಿ.

**ಠರಾವು ನಂ. 296**
**15-12-2009**

ಶಿರಸಿ ನಗರಸಭೆಯು ಸಾರ್ವಜನಿಕ ಉದ್ದೇಶಕ್ಕಾಗಿ ರೀಕ್ಷಾ ನಿಲ್ದಾಣವನ್ನು ನಿರ್ಮಿಸಲು ತೀರ್ಮಾನಿಸಿದ್ದು. ರಸ್ತೆ ಬದಿಯಲ್ಲಿ ಅನಧಿಕೃತವಾಗಿರತಕ್ಕಂತಹ ಗೂಡಂಗಡಿಗಳನ್ನು ತೆರವುಗೊಳಿಸಲಾಗಿದ್ದು. ಶ್ರೀನಿವಾಸ್ ಪಾಲೇಕರ್ ಮತ್ತು ಸುಬ್ರಾಯ್ ಪಾಲೇಕರ್ ಇವರು ತಮ್ಮ ತಂದೆಯವರ ಹೆಸರಿನಲ್ಲಿ ಲೀಜ್ ಪಡೆದ ನಿವೇಶವನ್ನು ವಹಿವಾಟು ಮಾಡಿಕೊಂಡು ಬರುತ್ತಿದ್ದು ಅಂಗಡಿ ಖುಲ್ಲಾ ನಿವೇಶನ ಪಡಿಸಿರುವುದರಿಂದ ನಮಗೆ ಅನ್ಯಾಯವಾಗಿದೆಯೆಂದು ಮಾನ್ಯ ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಜಿಯನ್ನು ಸಲ್ಲಿಸಿರುವ ಮಾಗಣಿಯನ್ನು ದಿನಾಂಕ: 09-12-2009ರಂದು ಸಂಧಾನ ಸಭೆ ನಡೆಸಿ ಶ್ರೀ ವಿಶ್ವನಾಥ ಸುಬ್ರಾಯ ಪಾಲೇಕರ ಮತ್ತು ಶ್ರೀನಿವಾಸ್ ಸುಬ್ರಾಯ ಪಾಲೇಕರ್ ಇವರು ಅನಧಿಕೃತವಾಗಿ ಕಟ್ಟಿಕೊಂಡಿರುವಂತಹ ಅಂಗಡಿಯನ್ನು ಖುಲ್ಲಾಪಡಿಸಿಕೊಡುವುದಾಗಿ ಮತ್ತು ಸದರಿಯವರಿಗೆ ಈ ಅಂಗಡಿಯ ಬದಲಾಗಿ ಬಿ.ಎಸ್.ಎನ್.ಎಲ್. ಕಚೇರಿಯ ಆವರಣ ಗೋಡೆಗೆ ತಾಗಿ ಇದೇ ಸರ್ವೇ ನಂಬರ್‌ದ ಉತ್ತರ ಭಾಗದಲ್ಲಿ ನಗರಸಭೆಯಿಂದ ಅಂಗಡಿಯನ್ನು ಕಟ್ಟಿಕೊಡುವುದು ಅಂಗಡಿಯನ್ನು ಕಟ್ಟಿ ಕೊಟ್ಟ ನಂತರ ಸದರ ಅಂಗಡಿಗೆ ವಿಶ್ವನಾಥ ಪಾಲೇಕರ್ ಮತ್ತು ಶ್ರೀನಿವಾಸ ಪಾಲೇಕರ್ ಇವರು ನಡೆಸುತ್ತಿರುವ ಅಂಗಡಿಯನ್ನು ಬಿಟ್ಟುಕೊಟ್ಟು ನಗರಸಭೆಯವರು ಕಟ್ಟಿಸಿದ ಅಂಗಡಿಯಲ್ಲಿ ಉದ್ಯೋಗವನ್ನು ಮಾಡಲು ಅವಕಾಶ ಮಾಡಿಕೊಡುವುದಾಗಿ ಸಂಧಾನ ಸಭೆಯ ತೀರ್ಮಾನವಾಗಿರುತ್ತದೆ. ಅದರಂತೆ ನಗರಸಭೆಯಿಂದ ಪರಿಶಿಷ್ಟ ಜಾತಿ ಪರಿಶಿಷ್ಟ ಜನಾಂಗದ ಹಿತವನ್ನು ಅನುಸರಿಸಿ ನಗರಸಭೆಯಿಂದ ಅಂಗಡಿ ಮಳಿಗೆ ಕಟ್ಟಲು ಮಂಜೂರಿ ನೀಡುವಂತೆ ವಿಷಯವನ್ನು ಪ್ರಸ್ತಾಪಿಸಲಾಯಿತು. ಕೂಲಂಕಷವಾಗಿ ಪರಿಶೀಲಿಸಿದ ಸಭೆಯು ಶ್ರೀನಿವಾಸ್ ಪಾಲೇಕರ್ ಮತ್ತು ಸುಬ್ರಾಯ್ ಪಾಲೇಕರ್ ಇವರಿಗೆ ಸಂಧಾನದ ನಿರ್ಣಯದಂತೆ ಅಂಗಡಿ ಮಳಿಗೆ ಕಟ್ಟಿಕೊಡಲು ತೀರ್ಮಾನಿಸಿತು. ಇದಕ್ಕೆ ಬರುವ ಖರ್ಚು-ವೆಚ್ಚವನ್ನು ನಗರಸಭೆ ನಿಧಿಯಿಂದ ಭರಿಸಲು ಮಂಜೂರಿ ನೀಡಿತು. ಸದರಿ ಅಂಗಡಿಯನ್ನು ಕಟ್ಟಿಸಿಕೊಟ್ಟು ಅಂಗಡಿಯನ್ನು ಸ್ಥಳಾಂತರ ಮಾಡಿದ ನಂತರ ಸರ್ವೇ ಸಂ. 1322/ಬಿ ನೇದರಲ್ಲಿ ಇರುವಂತಹ ಕಟ್ಟಡವನ್ನು ತೆಗೆದು ರೀಕ್ಷಾ ನಿಲ್ದಾಣವನ್ನು ಅಭಿವೃದ್ಧಿಪಡಿಸಲು ಮತ್ತು ಸದರಿ ಲೀಜ್‌ಗೆ ನೀಡಿದಂತಹ ನಿವೇಶವನ್ನು ರದ್ದುಪಡಿಸಿ ನಗರಸಭೆಯ ಸಾರ್ವಜನಿಕರಿಗೆ ಉಪಯೋಗ ಮಾಡುವಂತೆ ಸಿ.ಟಿ. ಸರ್ವೇ ದಾಖಲೆಗಳಲ್ಲಿ ಸೂಕ್ತ ಬದಲಾವಣೆ ಮಾಡಲು ಮಾನ್ಯ ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ, ಕಾರವಾರ ಇವರಿಗೆ ಪತ್ರ ಬರೆಯಲು ತೀರ್ಮಾನಿಸಿತು. ಸಭೆಯು ಸರ್ವಾನುಮತದಿಂದ ಅನುಮೋದಿಸಿ ಠರಾಯಿಸಿತು.

**ವಿಷಯ ನಂ 10**

ಶಿರಸಿ ನಗರಸಭೆಯಲ್ಲಿ ಕೊಂಡವಾಡೆ ಹೊಂದಿದ್ದು ಅದನ್ನು ತೆಗೆದು ವಾಣಿಜ್ಯ ಸಂಕೀರ್ಣ ಮಾಡಿರುವುದರಿಂದ ಹೊಸದಾಗಿ ಕೊಂಡವಾಡೆ ನಿರ್ಮಿಸುವ ಕುರಿತು ವಿಚಾರ.

**ಠರಾವು ನಂ. 297**
**15-12-2009**

ಶಿರಸಿ ನಗರಸಭೆಯ ವ್ಯಾಪ್ತಿಯಲ್ಲಿ ದನಕರುಗಳು, ಜಾನುವಾರುಗಳು ಹೆಚ್ಚಿನ ಸಂಖ್ಯೆಯಲ್ಲಿ ಇದ್ದು ಅವುಗಳ ಸಂರಕ್ಷಣೆದಾರರು ಬಿಡಾಡಿಯಿಂದ ಹೊರಗಡೆ ಬಿಡುತ್ತಿದ್ದು ಅವುಗಳ ನಿಯಂತ್ರಣಕ್ಕಾಗಿ ಕೊಂಡವಾಡೆ ಅವಶ್ಯವಿರುತ್ತದೆ. ಶಿರಸಿ ನಗರಸಭೆ ಈ ಹಿಂದೆ ಹೊಂದಿದಂತಹ ಕೊಂಡವಾಡೆಯು ಸಾರ್ವಜನಿಕರ ಜನದಟ್ಟಣೆಯ ಪ್ರದೇಶದಲ್ಲಿರುವುದರಿಂದ ಅದನ್ನು ತೆಗೆದು ಆ ಸ್ಥಳದಲ್ಲಿ ವಾಣಿಜ್ಯ ಸಂಕೀರ್ಣವನ್ನು ನಿರ್ಮಿಸಲಾಗಿರುತ್ತದೆ. ಶಿರಸಿ ನಗರಕ್ಕೆ ಕೊಂಡವಾಡೆಯ ಅವಶ್ಯಕತೆಯನ್ನು ಅನುಸರಿಸಿ ಕೊಂಡವಾಡೆಯನ್ನು ಅತೀ ಅವಶ್ಯವಾಗಿ ನಿರ್ಮಾಣ ಮಾಡಲು ಸಭೆಯು ತೀರ್ಮಾನಿಸಿತು. ಸೂಕ್ತವಾದ ಸ್ಥಳವನ್ನು ಗುರುತಿಸಿ ಕೊಂಡವಾಡೆ ಕಟ್ಟುವುದು ತೀರ್ಮಾನಿಸಲಾಯಿತು. ಚರ್ಚ ರಸ್ತೆಯಲ್ಲಿ ನಗರಸಭೆ ಮಾಲಿಕತ್ವದ ಸಿಟಿ ಸರ್ವೇ ನಂ.          ಇದ್ದು, ಅದರಲ್ಲಿ 2-3 ಕುಟುಂಬಗಳು ಅತಿಕ್ರಮಣ ಮಾಡಿ ವಾಸವಾಗಿದ್ದಾರೆ. ಅಲ್ಲಿ ಇನ್ನೂ ಹೆಚ್ಚಿನ ಸ್ಥಳ ಖುಲ್ಲಾ ಇದ್ದು ಖುಲ್ಲಾ ಇರುವ ಸ್ಥಳವನ್ನು ಗುರುತಿಸಿ ಕೊಂಡವಾಡೆಯನ್ನು ನಿರ್ಮಾಣ ಮಾಡಲು ಸಭೆಯು ತೀರ್ಮಾನಿಸಿತು. ಸದರಿ ಕಾಮಗಾರಿಗೆ ಬೇಕಾದ ಹಣವನ್ನು ನಗರಸಭೆ ನಿಧಿಯಿಂದ ಭರಿಸಿ ಕಾಮಗಾರಿ ಅನುಷ್ಟಾನ ಮಾಡಲು ಸರ್ವಾನುಮತದಿಂದ ಮಂಜೂರಿ ನೀಡಿ ಠರಾಯಿಸಿತು.

**ವಿಷಯ ನಂ 11**

ಶಿರಸಿ ನಗರಸಭೆ ಮಾಲಿಕತ್ವದ (ಮುಸುಕಿನ ಬಾವಿ) ರಾಜರಾಜೇಶ್ವರಿ ಉದ್ಯಾನವನದಲ್ಲಿ ಇರುವ ಕೋಣೆಯನ್ನು ಅಂಗನವಾಡಿಗಾಗಿ ಹಸ್ತಾಂತರಿಸುವ ಕುರಿತು ವಿಚಾರ.

**ಠರಾವು ನಂ. 298**
**15-12-2009**

ಶಿರಸಿ ನಗರಸಭೆಯ ಮಾಲಿಕತ್ವದ (ಮುಸುಕಿನ ಬಾವಿ) ರಾಜರಾಜೇಶ್ವರಿ ಉದ್ಯಾನವನದಲ್ಲಿ ಇರುವ ಕೋಣೆಯನ್ನು ಅಂಗನವಾಡಿಗಾಗಿ ಹಸ್ತಾಂತರಿಸುವ ಕುರಿತು ಶ್ರೀಮತಿ ಸುಲೋಚನಾ ಕೆ. ಗೌಡ ಇವರು ದಿನಾಂಕ : 29.10.2009 ರಂದು ಸಲ್ಲಿಸಿದ ಅರ್ಜಿಯನ್ನು ಓದಿ ಹೇಳಲಾಯಿತು. ನಾಡಿಗಗಲ್ಲಿ ಮತ್ತು ಸಿ.ಪಿ.ಬಝಾರ ಒಳಗೊಂಡ ಪ್ರದೇಶದಲ್ಲಿ ಅಂಗನವಾಡಿ ಮಕ್ಕಳಿಗಾಗಿ ಸರಕಾರ ಹೊಸದಾಗಿ ಅಂಗನವಾಡಿಯನ್ನು ಮಂಜೂರಿ ಮಾಡಿದ್ದು ಅಂಗನವಾಡಿಗಾಗಿ ಕಟ್ಟಡದ ಅವಶ್ಯಕತೆ ಇರುವುದು. ರಾಜರಾಜೇಶ್ವರಿ ಉದ್ಯಾನವನದಲ್ಲಿ ಇರುವ ಕಟ್ಟಡ ಅಂಗನವಾಡಿ ಮಕ್ಕಳಿಗಾಗಿ ಬಿಟ್ಟುಕೊಡಲು ವಿನಂತಿ ಮಾಡಿರುತ್ತಾರೆ. ವಿಷಯವನ್ನು ಸಭೆಯು ಕೂಲಂಕಷವಾಗಿ ಪರಿಶಿಲಿಸಿ ಅಂಗನವಾಡಿಗಾಗಿ ಕಟ್ಟಡವನ್ನು ತಾತ್ಕಾಲಿಕವಾಗಿ ಹಸ್ತಾಂತರ ಮಾಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿ ಠರಾಯಿಸಿತು.

**ವಿಷಯ ನಂ 12**

ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಜನಾಂಗದ ಅಭಿವೃದ್ಧಿ ಕುರಿತು ಕಾದಿಟ್ಟ ಹಣ ರೂ. 12.46 ಲಕ್ಷಗಳಲ್ಲಿ ಜಿಲ್ಲಾಧಿಕಾರಿಗಳು, ಕಾರವಾರ ರವರು ರೂ. 10.06 ಲಕ್ಷಗಳಿಗೆ ಕ್ರಿಯಾ ಯೋಜನೆ ಮಂಜೂರಿ ನೀಡಿದ್ದಾರೆ ರೂ. 2.40 ಲಕ್ಷಗಳಿಗೆ ಆರ್ಥಿಕಾಭಿವೃದ್ಧಿಯಲ್ಲಿ ಬದಲಾವಣೆಯೊಂದಿಗೆ ಕ್ರಿಯಾ ಯೋಜನೆ ತಯಾರಿಸಿ ಪ್ರಸ್ತಾವನೆ ಸಲ್ಲಿಸಲು ಸೂಚನೆ ಮಾಡಿರುವಂತೆ ಕ್ರಿಯಾ ಯೋಜನೆ ತಯಾರಿಸುವ ಕುರಿತು ವಿಚಾರ.

**ದಾಖಲೆಗಳು:-**

1. ಮಾನ್ಯ ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ, ಕಾರವಾರರವರ ಆದೇಶ ಸಂ. ಪುರಸಭೆ-1/ವಿವ-144/2009-10, ದಿನಾಂಕ: 04-11-2009.
2. ನಗರಸಭೆಯ ಠರಾವು ಸಂ. 265/05-10-2009.

**ಠರಾವು ನಂ. 299**
**15-12-2009**

ಶಿರಸಿ ನಗರಸಭೆಯ ಸಾಮಾನ್ಯ ಸಭೆಯ ಠರಾವು ಸಂ. 265/05-10-2009ರಂತೆ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಫಲಾನುಭವಿಗಳ ಅಭಿವೃದ್ಧಿಗಾಗಿ ರೂ. 12.46 ಲಕ್ಷಗಳ ಮೊತ್ತಕ್ಕೆ ಕ್ರಿಯಾ ಯೋಜನೆಯನ್ನು ತಯಾರಿಸಿ ಮಾನ್ಯ ಜಿಲ್ಲಾಧಿಕಾರಿಗಳ ಮಂಜೂರಾತಿಗಾಗಿ ಸಲ್ಲಿಸಲಾಗಿತ್ತು. ಮಾನ್ಯ ಜಿಲ್ಲಾಧಿಕಾರಿಗಳು ತಮ್ಮ ಆದೇಶದಂತೆ ರೂ. 10.06 ಲಕ್ಷಗಳಿಗೆ ಮಂಜೂರಾತಿ ನೀಡಿ ಉಳಿದ ರಕಂ ರೂ. 2.40 ಲಕ್ಷಗಳಿಗೆ ಪ್ರತ್ಯೇಕ ಕ್ರಿಯಾ ಯೋಜನೆಯನ್ನು ಠರಾವು ಮಾಡಿ ಕಳುಹಿಸಲು ಸೂಚನೆ ಮಾಡಿರುತ್ತಾರೆ. ಆರ್ಥಿಕಾಭಿವೃದ್ಧಿ ಕಾರ್ಯಕ್ರಮದಲ್ಲಿ ಶೇ. 40% ಹಣ ಕಾದಿಟ್ಟಿದ್ದು ಅದರಲ್ಲಿ ಪ.ಜಾ.:ಪ.ಪಂ. ವರ್ಗದ ಫಲಾನುಭವಿಗಳಿಗೆ ಸ್ವಂತ ಉದ್ಯೋಗ ಮಾಡಲು ಗೂಡಂಗಡಿ ಖರೀದಿಸಿ ಪೂರೈಸಲು ರೂ. 1.00 ಲಕ್ಷಗಳು ಮತ್ತು ಸಂಘ ಸಂಸ್ಥೆಗಳಿಗೆ ಖುರ್ಚಿ ಖರೀದಿಸಿ ಪೂರೈಸಲು ರೂ. 1.40 ಲಕ್ಷಗಳು. ಕಾದಿಟ್ಟು ಒಟ್ಟೂ ರೂ. 2.40 ಲಕ್ಷಗಳಿಗೆ ಪರ್ಯಾಯ ಕ್ರಿಯಾ ಯೋಜನೆಯನ್ನು ತಯಾರಿಸಿ ಮಂಜೂರಾತಿಗಾಗಿ ಸಲ್ಲಿಸಲು ಸೂಚನೆ ಮಾಡಿರುತ್ತಾರೆ. ತತ್ ಪ್ರಯುಕ್ತ ವಿಷಯವನ್ನು ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಲಾಯಿತು. ರೂ. 2.40 ಲಕ್ಷಗಳಲ್ಲಿ ಪ.ಜಾ.:ಪ.ಪಂ. ವರ್ಗದವರಿಗಾಗಿ ಉದ್ಯೋಗದ ಸಾಧನ ಸಲಕರಣೆಗಳು ಮತ್ತು ಕಚ್ಚಾ ಸಾಮಗ್ರಿಗಳನ್ನು ಖರೀದಿಸಿ ಪೂರೈಸಲು ಸಭೆಯು ತೀರ್ಮಾನಿಸಿತು. ಪರಿಶಿಷ್ಟ ಜನಾಂಗದವರು ಬ್ಯಾಂಡ್ ಸೆಟ್ ವಾದನವನ್ನು ನುಡಿಸುವ ಉದ್ಯೋಗವನ್ನು ಮಾಡುತ್ತಿದ್ದು ಅವರಿಗೆ ಬ್ಯಾಂಡ್ ಸೆಟ್ ಸಲಕರಣೆಗಳು ಹಾಗೂ ಚರ್ಮದ ಪಾದರಕ್ಷೆಗಳನ್ನು ತಯಾರಿಸುವವರಿಗೆ ವಸ್ತು ತಯಾರಿಸುವ ಸಾಧನ ಸಲಕರಣೆ ಹಾಗೂ ಚರ್ಮದ ಕಚ್ಚಾ ವಸ್ತುಗಳನ್ನು ಮತ್ತು ಮೌಲ್ಡೆಡ್ ಪಾದರಕ್ಷೆಗಳ ಸೋಲ್‌ಗಳನ್ನು ಖರೀದಿಸಿ ಪೂರೈಸಲು ಕ್ರಿಯಾ ಯೋಜನೆಯನ್ನು ತಯಾರಿಸಿ ಮಂಜೂರಿಗಾಗಿ ಪ್ರಸ್ತಾವನೆಯನ್ನು ಮಾನ್ಯ ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ, ಕಾರವರರವರಿಗೆ ಸಲ್ಲಿಸಲು ಸರ್ವಾನುಮತದಿಂದ ಠರಾಯಿಸಿತು.

**ವಿಷಯ ನಂ 13**

12 ನೇ ಹಣಕಾಸು ಯೋಜನೆ ಹಾಗೂ ಎಸ್.ಎಫ್.ಸಿ. ಯೋಜನೆಯಡಿಯಲ್ಲಿ ಮಂಜೂರಾದ ಕ್ರಿಯಾ ಯೋಜನೆಯಲ್ಲಿ ಸ್ಥಳ ಬದಲಾವಣೆ ಮಾಡಿ ಕಾಮಗಾರಿ ಅನುಷ್ಠಾನ ಮಾಡಲು ಮಂಜೂರಿ ನೀಡುವುದು.

**ಠರಾವು ನಂ. 300**
**15-12-2009**

12 ನೇ ಹಣಕಾಸು ಯೋಜನೆಯಲ್ಲಿ ಸರಕಾರದಿಂದ ಬಿಡುಗಡೆಯಾದಂತಹ ರೂ.16.00 ಲಕ್ಷದ ಕ್ರಿಯಾ ಯೋಜನೆಯಡಿಯಲ್ಲಿ ಮಾನ್ಯ ಜಿಲ್ಲಾಧಿಕಾರಿಗಳ ಆದೇಶ ಸಂಖ್ಯೆ: ಪುರಸಭೆ/ ವಿವ/ 182/ 2008-09 ದಿನಾಂಕ : 21.02.2009 ರಂತೆ 1 ರಿಂದ 12 ಕಾಮಗಾರಿ ಮಂಜೂರಿಯಾಗಿದ್ದು, ಟೆಂಡರ್ ಪ್ರಕ್ರಿಯೆ ಮಾಡಿ ಕಾಮಗಾರಿ ಅನುಷ್ಠಾನ ಮಾಡುವ ಸಂದರ್ಭದಲ್ಲಿ ಸಾರ್ವಜನಿಕರ ಬೇಡಿಕೆಯಂತೆ ಮತ್ತು ವಾರ್ಡ ಸದಸ್ಯರ ಅನುಮತಿಯಂತೆ ಕಾಮಗಾರಿಯನ್ನು ಸ್ಥಳ ಬದಲಾವಣೆ ಮಾಡಿ ಕಾಮಗಾರಿ ಅನುಷ್ಠಾನ ಮಾಡಲು ಮಂಜೂರಿ ಮಾಡಲು ಸಭೆಯ ಮುಂದೆ ಪ್ರಸ್ಥಾವನೆಯನ್ನು ಸಲ್ಲಿಸಿದ್ದು ಸಭೆಯು ಕೂಲಂಕಷವಾಗಿ ಪರಿಶೀಲಿಸಿತು. ಮತ್ತು ನಗರಸಭೆಯ ನಿಧಿಯಿಂದ ಕಾಮಗಾರಿ ಅನುಷ್ಠಾನ ಮಾಡಲು ಟೆಂಡರ್ ಪ್ರಕ್ರಿಯೆ ಮಾಡಿದ್ದು, ಸದರಿ ಕಾಮಗಾರಿಯನ್ನು

ಅವಶ್ಯಕತೆಗನುಗುಣವಾಗಿ ಸ್ಥಳ ಬದಲಾವಣೆ ಮಾಡಲು ಸಾರ್ವಜನಿಕರ ಬೇಡಿಕೆ ಮತ್ತು ಸದಸ್ಯರ ಅನುಮೋದನೆ ಮೇರೆಗೆ ಮತ್ತು ತಾಂತ್ರಿಕ ವರದಿಯನ್ನು ಪರಿಶೀಲಿಸಲಾಯಿತು. ಈ ಎರಡು ವಿಷಯಗಳನ್ನು ಪರಿಶೀಲಿಸಿ ಸಭೆಯು ಸರ್ವಾನುಮತದಿಂದ ಮಂಜೂರಿ ನೀಡಿ ಠರಾಯಿಸಿತು.

**ಸ್ಥಳ ಬದಲಾವಣೆ ಮಾಡಿ ಕಾಮಗಾರಿ ಮಾಡಲು ಮಂಜೂರಿ**

| ಅ. ನಂ. | ಮಂಜೂರಾದ ಕಾಮಗಾರಿ ವಿವರ | ಕಾಮಗಾರಿ ಅಂದಾಜು ಪತ್ರಿಕೆ ಮೊತ್ತ | ಸ್ಥಳ ಬದಲಾವಣೆ ಮಾಡಿದ ವಿವರ | ಷರಾ |
|---|---|---|---|---|
| 1. | ಕಾಮಗಾರಿ ಅ.ನಂ. (10) ವಾ.ನಂ.(24) ಮಾರಿಗುಡಿ ಎದುರಿನ ರಸ್ತೆ ಸಾರ್ವೇಕರ ಮನೆಯಿಂದ ತಾರೀಮನೆಯವರೆಗೆ ಚರಂಡಿ ನಿರ್ಮಿಸುವುದು. | 150000 | ಕಾಮಗಾರಿ ಅ.ನಂ.(12) ವಾ.ನಂ.(23) ಶಿವಾಜಿ ಚೌಕದಲ್ಲಿ ಸುಭಾಸಶ್ಚಂದ್ರ ಭೋಸ್ ಕಾಂಪ್ಲೇಕ್ಸ್ ಪಕ್ಕದ ರಸ್ತೆ ಚರಂಡಿ ಹಾಗೂ ಸಿ.ಡಿ. ನಿರ್ಮಾಣ ಮಾಡುವ ಕಾಮಗಾರಿ ಅಂದಾಜು ಪತ್ರಿಕೆ ರೂ.2.0 ಲಕ್ಷಗಳು. ಮುಂದುವರೆದ ಕಾಮಗಾರಿಗೆ (ಮಾರುತಿ ದೇವಸ್ಥಾನದವರೆಗೆ) ಕಡಿಮೆ ಬೀಳುವ ಮೊತ್ತ ರೂ.1,50,000-00ಹೊಂದಾಣಿಕೆ ಮಾಡಲಾಗಿದೆ. | ಶ್ರೀ ಎಮ್.ಬಿ. ಬೈಂದೂರ, ಗುತ್ತಿಗೆದಾರರು ಎರಡು ಕಾಮಗಾರಿಗೆ ಟೆಂಡರ್ ವಿಜೇತರಾಗಿ ರುತ್ತಾರೆ. |
| 2. | ಕಾಮಗಾರಿ ಅ.ನಂ.(22), ವಾ.ನಂ.(23) ಶಿವಾಜಿ ಸರ್ಕಲ್ ರಸ್ತೆಯ ಚರಂಡಿ ದುರಸ್ಥಿ ಹಾಗೂ ಸಿ.ಡಿ. ನಿರ್ಮಾಣ. | 100000 | ವಾ.ನಂ.(23) ಶಿವಾಜಿ ಚೌಕದಲ್ಲಿ ರುವ ಸಾರ್ವಜನಿಕ ಬಾವಿ ದುರಸ್ಥಿ ಮಾಡುವುದು ಹಾಗೂ ಸ್ಲಾಬ್ ಅಳವಡಿಸುವುದು. | ಶ್ರೀ. ಪರಮೇಶ್ವರ ಬಿ. ಭೋವಿ ಗುತ್ತಿಗೆದಾರರು. |

ಅಜೆಂಡಾ ವಿಷಯ ಸಂ. 13ರ ನಿರ್ಣಯ ಮುಗಿದ ನಂತರ ಅಧ್ಯಕ್ಷರು ಸಭೆಯನ್ನು ಮುಂದೂಡಿದರು. ಮುಂದೂಡಿದ ಸಭೆಯನ್ನು ದಿನಾಂಕ: 16-12-2009ರ ಬೆಳಗ್ಗೆ 11:00 ಘಂಟೆಗೆ ಸಮಾವೇಶಗೊಳ್ಳುವುದಾಗಿ ಘೋಷಣೆ ಮಾಡಿದರು.

ಸಹಿ ಇದೆ/-
ಅಧ್ಯಕ್ಷರು,
ನಗರಸಭೆ, ಶಿರಸಿ.

--ನಕಲು--

ಪೌರಾಯುಕ್ತರು,
ನಗರಸಭೆ, ಶಿರಸಿ.

***

# <u>ಶಿರಸಿ ನಗರಸಭೆ ವಿಶೇಷ ಸಭೆ ಪ್ರೊಸೀಡಿಂಗ್ಸ್ ನಂ. 20.</u>

**<u>ದಿನಾಂಕ: 15-12-2009ರಂದು ಮುಂದೂಡಿದ ಸಭೆ ದಿನಾಂಕ: 16-12-2009 ಬೆಳಿಗ್ಗೆ 11:00 ಘಂಟೆಗೆ ನಗರಸಭಾ ಭವನದಲ್ಲಿ ಪುನಃ ಸಮಾವೇಶಗೊಂಡ ಸಾಮಾನ್ಯ ಸಭೆಯಲ್ಲಿ ಹಾಜರಿದ್ದ ಸದಸ್ಯರು 29/30-05/05</u>**

ಶ್ರೀ ರಮೇಶ್ ಬಂಗಾರಿ ಆಚಾರಿ, ಅಧ್ಯಕ್ಷರು, ಶ್ರೀ ಅರುಣ್ ಬಿಕ್ಕು ಕೋಡ್ಕಣಿ, ಉಪಾಧ್ಯಕ್ಷರು, ಶ್ರೀ ಕೆರಿಯಾ ರಾಮಾ ಬೋರ್ಕರ್, ಚೇರ್‌ಮನ್ **<u>ಸದಸ್ಯರಾದ ಸರ್ವಶ್ರೀ</u>** ಶ್ರೀ ನಂದನ್ ಆನಂದರಾವ್ ಸಾಗರ್, ಶ್ರೀಮತಿ ಸಂಧ್ಯಾ ಕೃಷ್ಣ ಕುರ್ಡೇಕರ್, ಶ್ರೀ ರಾಚಪ್ಪ ಜೋಗಳೆಕರ್, ಶ್ರೀಮತಿ ಶಕುಂತಲಾ ಚನ್ನಪ್ಪ ಹಲಸಿ, ಶ್ರೀ ಉದಯಕುಮಾರ್ ಮಂಜುನಾಥ ಕಳೂರ್, ಶ್ರೀಮತಿ ರುಕ್ಸಾನಾ ಹೀರೂರ್, ಶ್ರೀಮತಿ ಲತಾ ಪ್ರಭುದೇವ, ಶ್ರೀ ಜಗದೀಶ್ ಅಚ್ಯುತ್ ನಾಯ್ಕ, ಶ್ರೀ ಬಸವರಾಜ್ ಚನ್ನಬಸಪ್ಪ ಶಿವನಂಚೆ, ಶ್ರೀಮತಿ ಶೇಖ್ ಹಾಜಿರಾ ಬಶೀರ್, ಶ್ರೀ ಖಾನ್ ಅಮಾನುಲ್ಲಾ ಅಬ್ದುಲ್ ರೆಹಮಾನ್, ಶ್ರೀಮತಿ ಶಂಶಾದ ಅಬ್ದುಲ್ ಖಾದರ್ ಅನವಟ್ಟಿ, ಶ್ರೀಮತಿ ರಮ್ಯಾ ರವಿ ಚಂದಾವರ, ಶ್ರೀ ಗಣೇಶ ಸುರೇಶ ನಾಯ್ಕ್, ಶ್ರೀ ಪ್ರಕಾಶ ಮಹಾಬಲೇಶ್ವರ ಪ್ರಭು, ಶ್ರೀ ಮಹಾದೇವ ಗಂಗಾ ಚಲುವಾದಿ, ಶ್ರೀ ಗಣಪತಿ ಲಕ್ಷ್ಮಣ ನಾಯ್ಕ್, ಶ್ರೀ ನಂದಾ ಮಾಧವ್ ನಾಯ್ಕ್, ಶ್ರೀಮತಿ ಮೋಹಿನಿ ಮೋಹನ್ ಬೈಲೂರ್, ಶ್ರೀಮತಿ ಸುಮಾ ವಿನಾಯಕ ನಾಯ್ಕ್, ಶ್ರೀ ನರೋನ್ಹಾ ಫ್ರಾನ್ಸಿಸ್ ಪೆದ್ರು, ಶ್ರೀ ಶ್ರೀಕಾಂತ ಸುರೇಶ ತಾರಿಬಾಗಿಲ್.

**<u>ಸರ್ಕಾರವು ನಾಮ ನಿರ್ದೇಶನ ಮಾಡಿದ ಸದಸ್ಯರು::</u>**

(1) ಶ್ರೀಮತಿ ಸುಶೀಲಾ ಶಂಕರ ನಾರಾಯಣ ಹೆಗಡೆ (2) ಶ್ರೀ ಸದಾನಂದ ಗಣಪತಿ ಬನವಾಸಿ (3) ಶ್ರೀ ಹರಿಶ ಅಚುತ್ ಪಾಲೇಕರ್ (4) ಶ್ರೀ ಗೋಪಾಲಕೃಷ್ಣ ದತ್ತಾತ್ರೆಯ ನಾಯ್ಕ್.

ಶ್ರೀ ಜಿ. ಜಗದೀಶ, ಸಹಾಯಕ ಕಮೀಷನರ್, ಶಿರಸಿ ಉಪ-ವಿಭಾಗ, ಶಿರಸಿ ಹಾಗೂ ಪ್ರಭಾರ ಪೌರಾಯುಕ್ತರು, ನಗರಸಭೆ, ಶಿರಸಿ ಇವರು ಸಭೆಗೆ ಆಗಮಿಸಿದ ಅಧ್ಯಕ್ಷರು, ಉಪಾಧ್ಯಕ್ಷರು, ಚೇರಮನ್ನರು ಹಾಗೂ ಸದಸ್ಯರು ಮತ್ತು ಸಿಬ್ಬಂದಿಗಳು ಹಾಗೂ ಪತ್ರಿಕಾ ವರದಿಗಾರರನ್ನು ಸಭೆಗೆ ಸ್ವಾಗತ ಮಾಡಿದರು. ಸಭೆಯ ಪ್ರಿಸೈಡಿಂಗ್ ಮಾಡಲು ಅಧ್ಯಕ್ಷರನ್ನು ವಿನಂತಿ ಮಾಡಿದರು. ಸಭೆಯ ಕಾರ್ಯಕಲಾಪ ಪ್ರಾರಂಭಗೊಂಡಿತು.

**<u>ವಿಷಯ ನಂ 14</u>**

ಸರ್ಕಾರದ ಆಶ್ರಯ ಯೋಜನೆಯ ಅಡಿಯಲ್ಲಿ "ನಮ್ಮ ಮನೆ" ಕಾರ್ಯಕ್ರಮ ಅನುಷ್ಠಾನ ಮಾಡಲು ಬೇಕಾಗುವಂತಹ ಜಮೀನು ಖರೀದಿಸುವ ಕುರಿತು ವಿಚಾರ.

**<u>ದಾಖಲೆಗಳು:-</u>**

1) ವ್ಯವಸ್ಥಾಪಕ ನಿರ್ದೇಶಕರು, ರಾಜೀವಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಉದ್ಯಮ), ಇವರ ಪತ್ರ ಸಂಖ್ಯೆ : MD RGRHCL 04 UAS 01 2009/9729 ದಿನಾಂಕ : 26.11.2009.
2) ಸರಕಾರದ ಕಾರ್ಯದರ್ಶಿ, ವಸತಿ ಇಲಾಖೆ, ಸರಕಾರದ ಆದೇಶ ಸಂಖ್ಯೆ : ವಇ 37 ಹೆಚ್‌ಎಹೆಚ್ 2009, ಬೆಂಗಳೂರು, ದಿನಾಂಕ 17 ನವೆಂಬರ 2009/ 9688.
3) ಸರಕಾರದ ಕಾರ್ಯದರ್ಶಿ, ವಸತಿ ಇಲಾಖೆ, ವಿಕಾಸ ಸೌಧ, ಬೆಂಗಳೂರು, ಸುತ್ತೋಲೆ ಸಂಖ್ಯೆ : ವಇ 37 ಹೆಚ್‌ಎಹೆಚ್ 2009/9687 ದಿನಾಂಕ : 17.11.2009.

**ಠರಾವು ನಂ. 301**
**16-12-2009**

ಶ್ರೀ. ಎಸ್.ಎಸ್. ಪಟ್ಟಣಶೆಟ್ಟಿ, ಐ.ಎ.ಎಸ್., ವ್ಯವಸ್ಥಾಪಕ ನಿರ್ದೇಶಕರು, ರಾಜೀವಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಉದ್ಯಮ), ಬೆಂಗಳೂರು ಇವರು ಬರೆದ ಪತ್ರವನ್ನು ಸಭೆಗೆ ಓದಿ

ಹೇಳಲಾಯಿತು. ಸರಕಾರದ "ನಮ್ಮ ಮನೆ" ಯೋಜನೆಯಡಿಯಲ್ಲಿ ಆರ್ಥಿಕವಾಗಿ ಅಶಕ್ತ ಹಾಗೂ ಕಡಿಮೆ ಆದಾಯದ ಗುಂಪಿನ ಫಲಾನುಭವಿಗಳಿಗೆ ವಸತಿ ಸೌಕರ್ಯ ಒದಗಿಸುವ ಬಗ್ಗೆ ಕೇಂದ್ರ ಸರ್ಕಾರದ ವಸತಿ ಮತ್ತು ನಗರ ಬಡತನ ನಿರ್ಮೂಲನಾ ಇಲಾಖೆಯು ನಗರಪ್ರದೇಶಗಳಲ್ಲಿ ಬಡಜನರಿಗೆ ಬೇರೆಯುವರಿಂದ ನಿರ್ಮಿಸಲ್ಪಟ್ಟ ಮನೆಗಳನ್ನು ಖರೀದಿಸಲು ಅಥವಾ ಅವರ ಸ್ವಂತ ನಿವೇಶನದಲ್ಲಿ ಮನೆ ಕಟ್ಟಿಕೊಳ್ಳಲು ರೂ.1.0 ಲಕ್ಷದಿಂದ ರೂ.1.60 ಲಕ್ಷಗಳವರೆಗೆ ಸಾಲ ನೀಡಲು ನಗರದ ಬಡಜನರ ವಸತಿಗಾಗಿ "ಬಡ್ಡಿ ಸಹಾಯಧನ" ಯೋಜನೆಯನ್ನು ಜಾರಿಗೆ ತಂದಿರುತ್ತದೆ. ಈ ಯೋಜನೆಯಲ್ಲಿ ಗರಿಷ್ಠ ರೂ.3,300-00 ಮಾಸಿಕ ಆದಾಯ ಹೊಂದಿರುವ ಕುಟುಂಬಗಳನ್ನು ಆರ್ಥಿಕವಾಗಿ ಅಶಕ್ತರೆಂದು ಮತ್ತು ರೂ.3,301-00 ರಿಂದ ರೂ.7,300-00 ಒಳಗಿನ ಮಾಸಿಕ ಆದಾಯ ಹೊಂದಿರುವ ಕುಟುಂಬಗಳನ್ನು ಕಡಿಮೆ ಆದಾಯದ ಗುಂಪು ಎಂದು ಗೊತ್ತುಪಡಿಸಲಾಗಿರುತ್ತದೆ. ಬಡತನ ರೇಖೆಗಿಂತ ಕೆಳಗಿರುವ ವಸತಿ ರಹಿತರಿಗೆ ವಸತಿ ಕಲ್ಪಿಸುವ ಜವಾಬ್ದಾರಿಯನ್ನು ಸರಕಾರ ಹೊಂದಿರುವುದರಿಂದ ಯೋಜನೆಯನ್ನು ಜಾರಿಗೆ ತಂದಿರುತ್ತದೆ. ನಗರಪ್ರದೇಶಗಳಲ್ಲಿ ಸರಕಾರದ ಜಮೀನು ಲಭ್ಯವಿದ್ದಲ್ಲಿ ಗುರುತಿಸುವುದು. ಸರಕಾರದ ಜಮೀನು ಲಭ್ಯವಿಲ್ಲದೇ ಇದ್ದಲ್ಲಿ, ಖಾಸಗಿ ಜಮೀನನ್ನು ಮಾರ್ಗಸೂಚಿ ಬೆಲೆಗೆ ಅಧಿಕ +100% ಹೆಚ್ಚಿಗೆ ಖರೀದಿಸಲು ಸೂಚನೆ ಮಾಡಿರುತ್ತದೆ. ನಿಗಮಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದಲ್ಲಿ ನಿವೇಶನ ಅಭಿವೃದ್ಧಿಪಡಿಸಲು ನಿವೇಶನ ಒಂದಕ್ಕೆ ರೂ.450-00 ರಂತೆ ನಿಗಮದಿಂದ ಅನುದಾನ ನೀಡಲಾಗುವುದು ಎಂದು ಸುತ್ತೋಲೆಯಲ್ಲಿ ಸೂಚನೆ ಮಾಡಿರುವಂತೆ ಬ್ಯಾಂಕು ಫಲಾನುಭವಿಗೆ ಶೇ.8 ರ ಬಡ್ಡಿ ದರದಲ್ಲಿ ಸಾಲ ನೀಡಿದರೆ, ಕೇಂದ್ರ ಸರ್ಕಾರದ ಶೇ.5 ರ ಬಡ್ಡಿದರ ಧನ ಸಹಾಯದೊಂದಿಗೆ ಫಲಾನುಭವಿಯು ಕೇವಲ ಶೇ.3 ರ ಬಡ್ಡಿದರದಲ್ಲಿ ಸಾಲವನ್ನು ಪಡೆಯಬಹುದಾಗಿದೆ. ಕನಿಷ್ಟ 40 ಚೌರಸ್ ಮೀಟರ್‌ಗಳ ಮನೆ ನಿರ್ಮಾಣಕ್ಕಾಗಿ ಅಥವಾ ಮನೆ ಖರೀದಿಗಾಗಿ "ಬಡ್ಡಿ ಸಹಾಯಧನ" ಯೋಜನೆಯಡಿಯಲ್ಲಿ ಸಾಲ ಪಡೆಯಬಹುದಾಗಿದೆ. ಆದ್ದರಿಂದ ನಗರಸಭೆಯವರು ಈ ವಿಷಯವನ್ನು ಸಾರ್ವಜನಿಕರಿಗೆ ತಿಳಿಯುವಂತೆ ಪ್ರಕಟಪಡಿಸಲು ಸಭೆಯು ತೀರ್ಮಾನಿಸಿತು. ಮತ್ತು ಈಗಾಗಲೇ ಗುಡಿಸಲು ಹೊಂದಿರುವಂತಹ ಫಲಾನುಭವಿಗಳನ್ನು ಆಯ್ಕೆ ಮಾಡಲು ನಗರಸಭೆ ಸಿಬ್ಬಂದಿಗಳು ಕಳೆದ ತಿಂಗಳಲ್ಲಿ ಸರ್ವೇ ಮಾಡಿದ್ದು, ಸರ್ವೇ ಕಾಲಕ್ಕೆ ಗುರುತಿಸಿದ ಫಲಾನುಭವಿಗಳನ್ನು ಆರ್ಥಿಕವಾಗಿ ಹಿಂದುಳಿದ ಮಾಹಿತಿ ಲಭ್ಯವಿದ್ದು ಅದರಂತೆ ಫಲಾನುಭವಿಗಳ ಯಾದಿಯನ್ನು ಪರಿಶೀಲಿಸಿ ಸ್ವಂತ ಆಸ್ತಿಯನ್ನು ಹೊಂದಿರುವಂತಹ ಫಲಾನುಭವಿಗಳಿಗೆ ಬ್ಯಾಂಕ್ ಮೂಲಕ ಸಾಲವನ್ನು ಒದಗಿಸಿಕೊಡುವಲ್ಲಿ ಕ್ರಮ ಜರುಗಿಸಲು ಸಭೆಯು ತೀರ್ಮಾನಿಸಿತು. ಮತ್ತು ನಿವೇಶನ ರಹಿತರಿಗೆ ನಿವೇಶನವನ್ನು ನಿರ್ಮಿಸಲು ಸರ್ಕಾರಿ ಜಮೀನು ಮತ್ತು ಖಾಸಗಿ ಜಮೀನುಗಳನ್ನು ಗುರುತಿಸಿ ಜಮೀನುಗಳನ್ನು ಖರೀದಿ ಮಾಡಲು ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಹಾಗೂ ಛೇರಮನ್‌ರು, ಪೌರಾಯುಕ್ತರು ಇವರಿಗೆ ಅಧಿಕಾರವನ್ನು ನೀಡಿ ಸರ್ವಾನುಮತದಿಂದ ಠರಾಯಿಸಿತು.

**<u>ವಿಷಯ ನಂ 15:</u>**

ಶಿರಸಿ ನಗರಸಭೆಯ ಮಾಲಿಕತ್ವದ ಐ.ಡಿ.ಎಸ್.ಎಮ್.ಟಿ. ಯೋಜನೆಯಡಿ ಕಟ್ಟಿದ ವಾಣಿಜ್ಯ ಕಟ್ಟಡ ಸ್ಟಾಲ್‌ಗಳ ಬಾಡಿಗೆ ಅವಧಿ ಮುಗಿಯುತ್ತಿರುವುದರಿಂದ 20 ವರ್ಷಗಳ ಅವಧಿಗಳಿಗಾಗಿ ಅಂಗಡಿಗಳನ್ನು ಮರು ಹರಾಜು ಪ್ರಕ್ರಿಯೆ ಮಾಡಲು ಪ್ರೀಮಿಯಮ್ ಹಣ ಮತ್ತು ಬಾಡಿಗೆ ನಿಗಧಿಪಡಿಸುವ ಕುರಿತು ವಿಚಾರ.

**ಠರಾವು ನಂ. 302**
**16-12-2009**

ಶಿರಸಿ ನಗರಸಭೆಯ ಮಾಲಿಕತ್ವದ (ಸಿಟಿ. ಸರ್ವೇ ನಂ. 974, 975) ಐ.ಡಿ.ಎಸ್.ಎಮ್.ಟಿ. ಯೋಜನೆಯಡಿ ಕಟ್ಟಿದ ವಾಣಿಜ್ಯ ಸಂಕೀರ್ಣದ ಒಟ್ಟು 27 ಅಂಗಡಿಗಳನ್ನು ಈ ಹಿಂದೆ ನಾಲ್ಕು ವರ್ಷ ಹನ್ನೊಂದು ತಿಂಗಳ ಅವಧಿಗಾಗಿ ಬಾಡಿಗೆಯನ್ನು ಹರಾಜು ಮೂಲಕ ಮತ್ತು ಭದ್ರತಾ ಠೇವಣಿಯನ್ನು ಹಿಂದಿರುಗಿಸುವ ನಿಯಮದಂತೆ ಬಹಿರಂಗ ಹರಾಜು ಮೂಲಕ ನೀಡಿರುವ ಕರಾರು ಮತ್ತು ಅವಧಿ ದಿನಾಂಕ : 31.03.2010 ಕ್ಕೆ ಮುಗಿಯುವುದರಿಂದ ವಾಣಿಜ್ಯ ಸಂಕೀರ್ಣದ ನೆಲಮಳಿಗೆಯ ಅಂಗಡಿಗಳನ್ನು ಮರು ಬಾಡಿಗೆ ನೀಡಲು ಸಭೆಯು ಕೂಲಂಕಷವಾಗಿ ಚರ್ಚಿಸಿತು. ಮುಂದಿನ ದಿನಗಳಲ್ಲಿ ಅಂಗಡಿಗಳನ್ನು ನಿಗಧಿಪಡಿಸಿದ ಬಾಡಿಗೆಯಿಂದ ಮತ್ತು ನಾನ್‌ರಿಫಂಡೇಬಲ್ ಪ್ರೀಮಿಯಮ್ ಹಣವನ್ನು ಹರಾಜು ಮೂಲಕ 20 ವರ್ಷಗಳ ಕಾಲಾವಧಿಗೆ ನಿಯಮಕ್ಕನುಸಾರವಾಗಿ ಬಹಿರಂಗ ಹರಾಜು ಮತ್ತು ಟೆಂಡರ್ ಪ್ರಕ್ರಿಯೆ ಮೂಲಕ ವಿಲೇವಾರಿ ಮಾಡಲು ಸಭೆಯು ತೀರ್ಮಾನಿಸಿತು. ಕಾರ್ಯಾಲಯದ ಟಿಪ್ಪಣೆ ದಿನಾಂಕ : 10.12.2009 ರಂತೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಸೂಚನೆ ಮಾಡಿರುವ ಬಾಡಿಗೆ ಮತ್ತು ಪ್ರೀಮಿಯಮ್ ಹಣ ಸಭೆಗೆ ಓದಿ ಹೇಳಲಾಯಿತು. ನಗರಸಭೆಯ ಕಟ್ಟಡದ ಉತ್ತರ ಬದಿಗೆ ಇರುವಂತಹ 9 ಅಂಗಡಿಗಳು ಮತ್ತು ದಕ್ಷಿಣಾಭಿಮುಖವಾಗಿ ಇರತಕ್ಕಂತಹ 9 ಅಂಗಡಿಗಳು ಮತ್ತು ಶಿವಾಜಿ ಸರ್ಕಲ್‌ದಿಂದ ಐದು ರಸ್ತೆಗೆ ದಕ್ಷಿಣಾಭಿಮುಖವಾಗಿ ಇರುವಂತಹ 4 ಅಂಗಡಿಗಳು ಮತ್ತು ಉತ್ತರಾಭಿಮುಖವಾಗಿ ಇರುವಂತಹ 4 ಅಂಗಡಿಗಳು ಹಾಗೂ ಪೂರ್ವಾಭಿಮುಖವಾಗಿ ಇರುವಂತಹ ಒಂದು ಅಂಗಡಿ, ಒಟ್ಟು 27

ಅಂಗಡಿಗಳಿದ್ದು ಅವುಗಳಿಗೆ ಬಾಡಿಗೆಯನ್ನು ಮತ್ತು ಪ್ರೀಮಿಯಮ್ ಹಣವನ್ನು ನಿರ್ಧರಿಸಿ ಟೆಂಡರ್ ಪ್ರಕ್ರಿಯೆ ಮಾಡಲು ಸರ್ವಾನುಮತದಿಂದ ಮಂಜೂರಿ ನೀಡಿ ಠರಾಯಿಸಿತು.

| ಅ. ನಂ. | ಅಂಗಡಿಯ ನಂ. (ಸಿ.ಟಿ. ಸರ್ವೇ ನಂ. 974-975) | ಅಂಗಡಿಯ ಅಳತೆ | ಬಾಡಿಗೆ (ಪ್ರತಿ ತಿಂಗಳಿಗೆ) | ನಾನ್ ರೀಫಂಡೇಬಲ್ ಪ್ರೀಮಿಯಮ್ ರಖಂ (20 ವರ್ಷಗಳಿಗೆ) |
|---|---|---|---|---|
| 1 | 2 | 3 | 4 | 5 |
| 1. | 1 ರಿಂದ 9 ಉತ್ತರಾಭಿಮುಖವಾಗಿರುವ ಅಂಗಡಿಗಳು. | 10" x 12" | ರೂ.1,600-00 | ರೂ.1,00,000-00 |
| 2. | 10 ರಿಂದ 18 ದಕ್ಷಿಣಾಭಿಮುಖವಾಗಿರುವ ಅಂಗಡಿಗಳು. | 10" x 12" | ರೂ.1,000-00 | ರೂ. 60,000-00 |
| 3. | 19 ರಿಂದ 22 ಉತ್ತರಾಭಿಮುಖವಾಗಿರುವ ಅಂಗಡಿಗಳು. | 10" x 12" | ರೂ.1,000-00 | ರೂ. 60,000-00 |
| 4. | 23 ರಿಂದ 26 ದಕ್ಷಿಣಾಭಿಮುಖವಾಗಿರುವ ಅಂಗಡಿಗಳು. | 10" x 12" | ರೂ.1,600-00 | ರೂ.1,00,000-00 |
| 5. | 27ಪೂರ್ವಾಭಿಮುಖ ಮತ್ತು ಉತ್ತರಾಭಿಮುಖವಾಗಿರುವ ಅಂಗಡಿ | 10" x 25" | ರೂ.2,600-00 | ರೂ.1,50,000-00 |

**ವಿಷಯ ನಂ 16**

ಫಾಗಿಂಗ್ ಯಂತ್ರಗಳನ್ನು ಖರೀದಿಸಲು ಟೆಂಡರು ದರಗಳನ್ನು ಪರಿಶೀಲಿಸಿ ಮಂಜೂರಿ ನೀಡುವುದು.

**ದಾಖಲೆಗಳು:-**

1) ಸಾಮಾನ್ಯ ಸಭೆಯ ಠರಾವ ನಂ.223 (10) ದಿನಾಂಕ : 09.06.2009.
2) ಶಿರಸಿ ನಗರಸಭೆ ಅಲ್ಪಾವಧಿ ಟೆಂಡರ ಪ್ರಕಟಣೆ ಸಂಖ್ಯೆ: ನಸಶಿ/ ಹಾವಿ/ ನಗರಸಭಾ ನಿಧಿ/ ಟೆಂಡರು/ ಫಾ.ಯಂ.ಖ./ ವಿವ- /2009-10 ದಿನಾಂಕ : 11.11.2009
3) ಜನಮಾಧ್ಯಮ ಪತ್ರಿಕೆಯಲ್ಲಿ ದಿನಾಂಕ : 12.11.2009 ರಂದು ಪ್ರಕಟಪಡಿಸಿದ ಪ್ರತಿ.
4) ಉದಯವಾಣಿ ದಿನಪತ್ರಿಕೆಯಲ್ಲಿ ದಿನಾಂಕ : 22.11.2009 ರಂದು ಪ್ರಕಟಪಡಿಸಿದ ಪ್ರತಿ.
5) ಜಿಲ್ಲಾ ಟೆಂಡರ್ ಬುಲೆಟಿನ್ ನಂ.28/2009-10 ದಿನಾಂಕ : 13.11.2009 ರಂದು ಪ್ರಕಟಿಸಿದ ಪ್ರತಿ.
6) ದಿನಾಂಕ : 26.11.2009 ರಂದು ಸ್ವೀಕರಿಸಿದ ದರಗಳ ತುಲನಾತ್ಮಕ ಯಾದಿ.

**ಠರಾವು ನಂ. 303**
**16-12-2009**

ಶಿರಸಿ ನಗರಸಭೆಯ ನಗರದಲ್ಲಿರುವ ಸಾರ್ವಜನಿಕರ ಆರೋಗ್ಯ ಹಿತಸಂರಕ್ಷಣೆ ನಿರ್ವಹಿಸಲು ಸೊಳ್ಳೆಗಳ ನಿಯಂತ್ರಣ ಮಾಡಲು ಧೂಮೀಕರಣ ಯಂತ್ರ ಖರೀದಿಸುವ ಕುರಿತು ನಿರ್ಣಯಿಸಿದ ಮೇರೆಗೆ ಟೆಂಡರ್ ಪ್ರಕ್ರಿಯೆಯನ್ನು ಮಾಡಲಾಗಿತ್ತು. ದಿನಾಂಕ : 26.11.2009 ರಂದು ಸ್ವೀಕರಿಸಿದ ಟೆಂಡರು ದರಗಳನ್ನು ಪರಿಶೀಲಿಸಲಾಯಿತು. 2 ಜನ ಪೂರೈಕೆದಾರರು ದರಗಳನ್ನು ನೀಡಿದ್ದು (1) ವೆಹಿಕಲ್ ಮೂವ್‌ಮೆಂಟೆಬಲ್ ಫಾಗಿಂಗ್ ಮಷೀನ್ ವಿತ್ ರಿಮೋಟ್ ಕಂಟ್ರೋಲ್ ಆಪರೇಷನ್. (2) ಸ್ಪೇಸ್ ಸ್ಪ್ರೇಯಿಂಗ್ ಇಕ್ವಿಪ್‌ಮೆಂಟ್ ಮೇಕ್ ಎಸ್.ಎಸ್.ಫಾಗ್ ಇವುಗಳಲ್ಲಿ ಒಂದನ್ನು ಖರೀದಿಸಲು ಸಭೆಯು ಕೂಲಂಕಷವಾಗಿ ಚರ್ಚಿಸಿತು. ಶಿರಸಿ ನಗರ ಪ್ರದೇಶವು 11 ಸ್ಕ್ವೇರ್ ಕಿ.ಮಿ. ವ್ಯಾಪ್ತಿ ಹೊಂದಿದ್ದು ಮಲೆನಾಡು ಪ್ರದೇಶವಾಗಿರುವುದರಿಂದ ಸೊಳ್ಳೆಗಳು ಹೆಚ್ಚಿನ ಸಂಖ್ಯೆಯಲ್ಲಿ ಹೆಚ್ಚಿನ ಪ್ರದೇಶದಲ್ಲಿ ಇರುವುದರಿಂದ ವಾಹನ ಮೂಲಕ ನಗರದಲ್ಲಿ ಸಂಚರಿಸಿ ಫಾಗಿಂಗ್ ಮಾಡಲು ಅನುಕೂಲವಾಗುತ್ತದೆಂದು ತೀರ್ಮಾನಿಸಿತು. ಸಲ್ಲಿಸಿದ ದರಗಳನ್ನು ಪರಿಶೀಲಿಸಿ ಎಲ್-1 ದರಗಳನ್ನು ಅನುಮೋದಿಸಿ ಮಂಜೂರಿ ನೀಡಿತು. ಒಂದು ಫಾಗಿಂಗ್ ಯಂತ್ರ ಖರೀದಿಸಲು ರೂ.4,75,000-00 ಮಂಜೂರಿ ನೀಡಿ ಸರ್ವಾನುಮತದಿಂದ ಠರಾಯಿಸಿತು.

**ಧೂಮೀಕರಣ ಯಂತ್ರ ಖರೀದಿಸುವ ಕುರಿತು ದಿನಾಂಕ: 26.11.2009 ಸ್ವಿಕರಿಸಿದ ದರಗಳ ತುಲನಾತ್ಮಕ ಯಾದಿ.**

| ಅ. ನಂ. | ವಿವರಗಳು | ದರವಾರು ಸಲ್ಲಿಸಿದವರ ಹೆಸರು ಮತ್ತು ವಿಳಾಸ | |
|---|---|---|---|
| | | ಪ್ರೊಪ್ರೈಟರ್ ಪ್ರೈಮ್ ಎಂಟರ್‌ಪ್ರೈಸಸ್, ಹಲ್ಕೇರಿ ಮಠದ ಹತ್ತಿರ, ಈಶ್ವರ ಬಡಾವಣೆ, ಗದಗ | ವಿ4 ಬ್ಯೂಜಿನೆಸ್ ವೆಂಚರ್ಸ (ಪ್ರೈ) ಲಿಮಿಟೆಡ್, ನಂ.32, ಸಿ.ಐ.ಲೇಔಟ್, ಎ. ಬ್ಲಾಕ್, ಆರ್.ಎಮ್.ವಿ. 2ನೇ ಹಂತ, ಸಂಜಯ್ ನಗರ, ಬೆಂಗಳೂರು. |
| 1. | Vehicle mountable fogging machine with remote control operation. Type- Thermal aerosol-fog. Petroleum based electric start output-3000 m 3. For per minute. Engine performance -44 H.P./ HR. Fuel consumption 2.3 Ltr./Hr. Weight: 18.6 kg. (empty). Fuel tank capacity-12 ltr. Forumulation tank capacity-200 Ltr. Drum attachment Kit. | Rs. 4,75,000-00 (Rs. Four Lakhs Seventy Five Thousand Only) **L-I** | Rs. 5,62,500-00 (Rs. Five Lakhs Sixty Two Thousand Five Only) **L-II** |
| 2. | Space Spraying Equipment Make S. S. FOG. Model: 150 AT. Type: Thermal Fogging. | Rs. 70,000-00 (Rs. Seventy Thousand Only) **L-I** | Rs. 81,562-50 (Rs. Eighty One Thousand Five Hundred Sixty Two & Fifty Paise Only) **L-II** |

**ವಿಷಯ ನಂ 17**

ಶಿರಸಿ ನಗರಸಭೆಯ ಕಚೇರಿ ಕಟ್ಟಡಗಳಿಗೆ ಹಾಗೂ ವಾಣಿಜ್ಯ ಮಳಿಗೆ ಕಟ್ಟಡಗಳಿಗೆ ಉಪಯೋಗಿಸುವಂತ ವಿದ್ಯುತ್ ಸಾಮಗ್ರಿಗಳನ್ನು ಖರೀದಿಸಲು ಮಂಜೂರಿ ನೀಡುವುದು.

**ಠರಾವು ನಂ. 304**
**16-12-2009**

ಶಿರಸಿ ನಗರಸಭೆಯ ಮಾಲಿಕತ್ವದ ಕಚೇರಿ ಕಟ್ಟಡ ಮತ್ತು ಸಾರ್ವಜನಿಕರ ಉಪಯೋಗಕ್ಕಾಗಿ ಇರುವಂತ ಕಟ್ಟಡಗಳಲ್ಲಿ ಮತ್ತು ಪಂಪಹೌಸ್ ವಾಣಿಜ್ಯ ಕಟ್ಟಡಗಳ ಹೊರವಲಯಗಳಲ್ಲಿ ನೀರು ಸರಬರಾಜು ಮಾಡುವಂತಹ ಸ್ಥಾವರಗಳಲ್ಲಿ ವಿದ್ಯುತ್ ದೀಪಗಳನ್ನು ಅಳವಡಿಸಿದ್ದು ಅವುಗಳ ನಿರ್ವಹಣೆಗಾಗಿ ಬೇಕಾಗಬಹುದಾದಂತ ಸಾಮಗ್ರಿಗಳನ್ನು ವಾರ್ಷಿಕ ಟೆಂಡರ್ ಮೂಲಕ ಪೂರೈಸಿಕೊಳ್ಳಲು ಮಂಜೂರಿ ನೀಡಿದಂತೆ ಸಲ್ಲಿಸಿದ ಕಾರ್ಯಾಲಯದ ಟಿಪ್ಪಣೆಯನ್ನು ಪರಿಶೀಲಿಸಲಾಯಿತು. ನಿರ್ವಹಣೆಗೆ ಬೇಕಾದಂತಹ ವಿದ್ಯುತ್ ದೀಪಗಳ ಚೋಕ್, ಟ್ಯೂಬಲೈಟ್, ಸೋಡಿಯಂ ವೇಪರ್ ಲ್ಯಾಂಪ್, ಅಲ್ಯೂಮಿನಿಯಂ ವಾಯರ್ ಇವುಗಳಿಗೆ ಬೇಕಾಗಬಹುದಾದಂತಹ ಇತರೇ ಸಾಮಗ್ರಿಗಳನ್ನು ಖರೀದಿಸಲು ಟೆಂಡರ್ ಪ್ರಕ್ರಿಯೆ ಮಾಡಿ ಮಂಜೂರಿಗಾಗಿ ಸಲ್ಲಿಸುವಂತೆ ತೀರ್ಮಾನಿಸಿ ಸರ್ವಾನುಮತದಿಂದ ಮಂಜೂರಿ ನೀಡಿ ಠರಾಯಿಸಿತು.

**<u>ವಿಷಯ ನಂ 18</u>**

ಶ್ರೀ ಓಂಕಾರ ಆಪ್ ಸೆಟ್ ಪ್ರಿಂಟರ್ಸ್, ಶಿರಸಿ ಇವರ ಬಿಲ್ ಸಂ. 564, ದಿನಾಂಕ : 27.11.2009 ರಂತೆ ಟೆಂಡರು ಫಾರ್ಮ ಪ್ರಿಂಟಿಂಗ್ ಚಾರ್ಜ ರೂ.1,00,800–00 ಬಟವಡೆ ಮಾಡಲು ಮಂಜೂರಿ ನೀಡುವುದು.

**ಠರಾವು ನಂ. 305**
**16-12-2009**

ಶ್ರೀ ಓಂಕಾರ ಆಪ್ ಸೆಟ್ ಪ್ರಿಂಟರ್ಸ್, ಶಿರಸಿ ಇವರ ಬಿಲ್ ಸಂ. 564, ದಿನಾಂಕ : 27.11.2009 ರಂತೆ ಟೆಂಡರು ಫಾರ್ಮ ಪ್ರಿಂಟಿಂಗ್ ಚಾರ್ಜ ರೂ.1,00,800–00 ಬಟವಡೆ ಮಾಡಲು ಮಂಜೂರಿ ನೀಡುವಂತೆ ಸಲ್ಲಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ವಾನುಮತದಿಂದ ಮಂಜೂರಿ ನೀಡಿ ಠರಾಯಿಸಿತು.

**<u>ವಿಷಯ ನಂ 19</u>**

ಶ್ರೀ ಮಾರಿಕಾಂಬಾ ಕ್ರೀಡಾಂಗಣದಲ್ಲಿ ರಾಜ್ಯಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮಕ್ಕೆ ಧನ ಸಹಾಯ ಮಂಜೂರಿ ನೀಡುವುದು.

**ಠರಾವು ನಂ. 306**
**16-12-2009**

ಶ್ರೀ ಮಾರಿಕಾಂಬಾ ಕ್ರೀಡಾಂಗಣದಲ್ಲಿ ರಾಜ್ಯಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮ ಹಮ್ಮಿಕೊಂಡಿದ್ದು ಕಾರ್ಯಕ್ರಮಕ್ಕೆ ಹೆಚ್ಚಿನ ಧನ ಸಹಾಯ ಮತ್ತು ಸಹಕಾರ ನೀಡುವಂತೆ ಶ್ರೀ. ವಿಶ್ವೇಶ್ವರ ಹೆಗಡೆ ಕಾಗೇರಿ ಶಿಕ್ಷಣ ಸಚಿವರು ಸೂಚನೆ ಮಾಡಿದ್ದು ರಾಜ್ಯಮಟ್ಟದ ಕಾರ್ಯಕ್ರಮ ಶಿರಸಿ ನಗರದಲ್ಲಿ ನಡೆಯುತ್ತಿರುವುದರಿಂದ ಬೇರೆ ಬೇರೆ ಜಿಲ್ಲೆಗಳಿಂದ ಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರು ಹಾಗೂ ಪ್ರಮುಖರು ಕಾರ್ಯಕ್ರಮದಲ್ಲಿ ಭಾಗವಹಿಸುವದರಿಂದ ಹೆಚ್ಚಿನ ಖರ್ಚು-ವೆಚ್ಚ ಬರುತ್ತಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಹಣದ ಅವಶ್ಯಕತೆ ಸಭೆಯು ಮನಗಂಡು ರೂ.50,000–00 ದೇಣಿಗೆ ನೀಡಲು ಮಂಜೂರಿ ನೀಡಿ ಸರ್ವಾನುಮತದಿಂದ ಠರಾಯಿಸಿತು.

**<u>ವಿಷಯ ನಂ 20</u>**

ಶ್ರೀ ಲಕ್ಷ್ಮಣ ವಿ. ಪಟಗಾರ, ಕ್ರೀಡಾಪಟು, ಶಿರಸಿ ಇವರ ಅರ್ಜಿ ದಿನಾಂಕ : 28.09.2009 ರಂತೆ ಧನಸಹಾಯ ನೀಡುವ ಕುರಿತು ವಿಚಾರ.

**ಠರಾವು ನಂ. 307**
**16-12-2009**

ಶ್ರೀ ಲಕ್ಷ್ಮಣ ವಿ. ಪಟಗಾರ, ಕ್ರೀಡಾಪಟು, ಶಿರಸಿ ಇವರ ಅರ್ಜಿ ದಿನಾಂಕ : 28.09.2009 ನೇದನ್ನು ಸಭೆಗೆ ಓದಿ ಹೇಳಲಾಯಿತು. ಅಂತರಾಷ್ಟ್ರೀಯ ಮಟ್ಟದಲ್ಲಿ 22-ಜುಲೈ-2008 ರಂದು ಮಲೇಷಿಯಾದಲ್ಲಿ ನಡೆದ ಓಪನ್ ಮಾಸ್ಟರ್ ಅಥ್ಲೇಟಿಕ್ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಿ 1500 ಮೀಟರ್ ಓಟದಲ್ಲಿ ದ್ವಿತೀಯ, 5000 ಮೀಟರ್ ಓಟದಲ್ಲಿ ದ್ವಿತೀಯ ಹಾಗೂ 4x400 ರೀಲೆಯಲ್ಲಿ ತೃತೀಯ ಸ್ಥಾನ ಪಡೆದು ಬೆಳ್ಳಿ ಹಾಗೂ ಕಂಚಿನ ಪದಕ ಪಡೆದಿರುತ್ತಾರೆ. ಇದಕ್ಕಾಗಿ ರೂ.65,000–00 ಖರ್ಚು-ವೆಚ್ಚ ಬಂದಿರುತ್ತದೆ. ಅದೇ ರೀತಿ ಡಿಸೆಂಬರ್-2008ರ ತಿಂಗಳಲ್ಲಿ ಥೈಲ್ಯಾಂಡ್ ದೇಶದಲ್ಲಿ 15ನೇ ಮಾಸ್ಟರ್ ಅಥ್ಲೇಟಿಕ್ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಿ 5000

ಮೀಟರ್ ಓಟದಲ್ಲಿ ತೃತೀಯ, 1500 ಮೀಟರ್ ಓಟದಲ್ಲಿ ತೃತೀಯ ಸ್ಥಾನ ಪಡೆದು ಎರಡು ಕಂಚಿನ ಪದಕ ಪಡೆದಿರುತ್ತಾರೆ. ಈ ಪ್ರವಾಸದಲ್ಲಿ ಅಂದಾಜು ರೂ.50,000–00 ಖರ್ಚು–ವೆಚ್ಚ ಬಂದಿರುತ್ತದೆ. ಮತ್ತು ಅಕ್ಟೋಬರ್–2010ರಲ್ಲಿ ಸಿಂಗಾಪೂರದಲ್ಲಿ ನಡೆಯುವ ಓಪನ್ ಕ್ರಿಡಾಕೂಟಕ್ಕೆ ಆಯ್ಕೆಯಾಗಿರುವುದರಿಂದ ಅಲ್ಲಿಗೆ ಹೋಗಿಬರಲು ರೂ.40,000–00 ಖರ್ಚು–ವೆಚ್ಚ ಬರಬಹುದಾಗಿದೆ. ಅದಕ್ಕಾಗಿ ಧನಸಹಾಯ ನೀಡಲು ಕೇಳಿದ್ದರಿಂದ ರೂ.5,000–00 ಪ್ರೋತ್ಸಾಹಿಕ ಧನವನ್ನು ಮಂಜೂರಿ ನೀಡಿ ಸರ್ವಾನುಮತದಿಂದ ಠರಾಯಿಸಿತು.

**ವಿಷಯ ನಂ 21**

ಕಾರ್ಯದರ್ಶಿ, ಶಿರಸಿ ತಾಲೂಕಾ ಭಾರತ ಸ್ಕೌಟ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆ, ಶಿರಸಿ ಇವರ ಪತ್ರ ದಿನಾಂಕ : 29.10.2009ರ ಪತ್ರ ಪರಿಶೀಲಿಸಿ ಧನ ಸಹಾಯ ನೀಡುವ ಕುರಿತು ವಿಚಾರ.

**ಠರಾವು ನಂ. 308**
**16-12-2009**

ಕಾರ್ಯದರ್ಶಿ, ಶಿರಸಿ ತಾಲೂಕಾ ಭಾರತ ಸ್ಕೌಟ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆ, ಶಿರಸಿ ಇವರ ಪತ್ರ ದಿನಾಂಕ : 29.10.2009 ನೇದನ್ನು ಸಭೆಗೆ ಓದಿ ಹೇಳಲಾಯಿತು. ನವೆಂಬರ್–14 ಮಕ್ಕಳ ದಿನಾಚಾರಣೆ ಅಂಗವಾಗಿ ಎರಡು ದಿನದ ಸ್ಕೌಟ್ ಮತ್ತು ಗೈಡ್ಸ್ ರ್‍ಯಾಲಿಯನ್ನು ಹಾಗೂ ಗಾಳಿಪಟ, ಚಿತ್ರಕಲೆ ಮತ್ತು ಸಂಗೀತ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಎರಡು ದಿನ ವಿದ್ಯಾರ್ಥಿಗಳಿಗೆ ಊಟೋಪಚಾರ, ಕಾರ್ಯಕ್ರಮದ ಬಹುಮಾನ ವಿತರಣೆ ಮುಂತಾದವುಗಳಿಗಾಗಿ ಧನಸಹಾಯ ನೀಡಲು ಕೇಳಿದ್ದರಿಂದ ರೂ.10,000–00 ಮಂಜೂರಿ ನೀಡಿ ಸರ್ವಾನುಮತದಿಂದ ಠರಾಯಿಸಿತು.

**ವಿಷಯ ನಂ 22:**

ಮುಖ್ಯೋಪಾದ್ಯಾಯನಿ, ಆವೇ ಮರಿಯಾ ಹಿರಿಯ ಪ್ರಾಥಮಿಕ ಶಾಲೆ, ಶಿರಸಿ ಇವರ ಪತ್ರ ದಿನಾಂಕ: 04–11–2009 ಪರಿಶೀಲಿಸಿ ರಾಜ್ಯಮಟ್ಟದ ವಾಲಿಬಾಲ್ ಪಂದ್ಯಾವಳಿಗೆ ಆಯ್ಕೆಯಾದ ವಿದ್ಯಾರ್ಥಿ ಕ್ರೀಡಾಪಟುಗಳಿಗೆ ಕ್ರೀಡಾ ಸಮಾವೇಶಕ್ಕೆ ಹೋಗಿ ಬರುವ ಖರ್ಚು ವೆಚ್ಚಕ್ಕೆ ಧನಸಹಾಯ ನೀಡುವ ಕುರಿತು ವಿಚಾರ.

**ಠರಾವು ನಂ. 309**
**16-12-2009**

ಮುಖ್ಯೋಪಾದ್ಯಾಯನಿ, ಆವೇ ಮರಿಯಾ ಹಿರಿಯ ಪ್ರಾಥಮಿಕ ಶಾಲೆ, ಶಿರಸಿ ಇವರ ಪತ್ರ ದಿನಾಂಕ: 04–11–2009 ನೇದನ್ನು ಸಭೆಗೆ ಓದಿ ಹೇಳಲಾಯಿತು. ಸಭೆಯು ಕುಲಂಕುಷವಾಗಿ ಪರಿಶೀಲಿಸಿ ರಾಜ್ಯಮಟ್ಟದ ವಾಲಿಬಾಲ್ ಪಂದ್ಯಾವಳಿಗೆ ಆಯ್ಕೆಯಾದ ವಿದ್ಯಾರ್ಥಿ ಕ್ರೀಡಾಪಟುಗಳಿಗೆ ಕ್ರೀಡಾ ಸಮಾವೇಶಕ್ಕೆ ಹೋಗಿ ಬರುವ ಖರ್ಚು ವೆಚ್ಚಕ್ಕಾಗಿ ರೂ. 15000–00 ಧನಸಹಾಯ ಮಂಜೂರು ಮಾಡಿ ಸರ್ವಾನುಮತದಿಂದ ಠರಾಯಿಸಿತು.

**ವಿಷಯ ನಂ 23**

ಶಿರಸಿ ನಗರಸಭೆಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರುಗಳಿಗೆ ನೆರೆ ರಾಜ್ಯಗಳಲ್ಲಿ ಅಭಿವೃದ್ಧಿ ಮಾಡಿರುವ ಪ್ರದೇಶಗಳಿಗೆ ಭೇಟಿ ನೀಡಿ ಮಾಹಿತಿ ಪಡೆಯಲು ಶೈಕ್ಷಣಿಕ ಪ್ರವಾಸ ಕೈಗೊಳ್ಳುವ ಕುರಿತು ವಿಚಾರ.

**ಠರಾವು ನಂ. 310**
**16-12-2009**

ಶಿರಸಿ ನಗರಸಭೆಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರುಗಳಿಗೆ ನೆರೆ ರಾಜ್ಯಗಳಲ್ಲಿ ಅಭಿವೃದ್ಧಿ ಮಾಡಿರುವ ಪ್ರದೇಶಗಳಿಗೆ ಭೇಟಿ ನೀಡಿ ಮಾಹಿತಿ ಪಡೆಯಲು ಶೈಕ್ಷಣಿಕ ಪ್ರವಾಸ ಕೈಗೊಳ್ಳುವ ಕುರಿತು ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಲಾಯಿತು. ದಕ್ಷಿಣ ಭಾರತದ ಚೆನ್ನೈ, ತಮಿಳುನಾಡು ರಾಜ್ಯದಲ್ಲಿ ಪ್ರವಾಸ ಕೈಕೊಳ್ಳಲು ತೀರ್ಮಾನಿಸಿತು. ಇದಕ್ಕೆ ತಗಲುವ ವೆಚ್ಚವನ್ನು ನಗರಸಭೆ ನಿಧಿಯಿಂದ ಭರಿಸಲು ಮಂಜೂರಿ ನೀಡಿ ಸರ್ವಾನುಮತದಿಂದ ಠರಾಯಿಸಿತು.

**<u>ವಿಷಯ ನಂ 24(1)</u>**

ಮನೆ-ಮನೆಗಳಿಂದ ಕಸ ಸಂಗ್ರಹಿಸಿ ಸಾಗಿಸಲು ರೀಕ್ಷಾಗಳನ್ನು ಖರೀದಿಸಿದ್ದು ಸಿಂಡಿಕೇಟ್ ಬ್ಯಾಂಕ್ ಸಾಲದ ಕಂತು ಮತ್ತು ಬಡ್ಡಿ ಬಾಕಿ ಇರುವ ಹಣ ಏಕ ಗಂಟಿನಲ್ಲಿ ತುಂಬುವುದು.

1) ಕಲ್ಪವೃಕ್ಷ ನಿರ್ಮಲ ಸಂಘದ ಬಾಕಿ ರೂ. 1,17,504-00
2) ಭಾಗ್ಯಲಕ್ಷ್ಮೀ ನಿರ್ಮಲ ಸಂಘದ ಬಾಕಿ ರೂ. 1,27,131-00
3) ಪ್ರತಿಭಾ ನಿರ್ಮಲ ಸಂಘದ ಬಾಕಿ ರೂ. 1,49,760-00 = { ಒಟ್ಟೂ ರೂ. 3,94,395-00 }

**<u>ದಾಖಲೆಗಳು:-</u>**

1) ಸಿಂಡಿಕೇಟ್ ಬ್ಯಾಂಕ್ ಮ್ಯಾನೇಜರ್ ಸಿ.ಎಮ್.ಸಿ. ಬ್ರಾಂಚ್ ಶಿರಸಿ ಇವರ ರಜಿಸ್ಟರ್ಡ ನೋಟಿಸ್ ನಂ. 357/2009/ಏಸಿ/354 ಮತ್ತು 357/2009/ಒಎಸ್ಎಲ್/352, 353, 354, ದಿ: 03-12-2009.
2) ಸದರ ಶಿರಸಿ ನಗರಸಭೆಯಿಂದ ಬರೆದ ಪತ್ರ ನಂ.ನಸಶಿ/ಘನತ್ಯಾಜ್ಯವಸ್ತು/ಪ್ರಾಥಮಿಕ ಹಂತ ಸಂಗ್ರಹಣೆ/ವಿವ-501/2009-10, ದಿ: 10-12-2009.
3) ಸಿಂಡಿಕೇಟ್ ಬ್ಯಾಂಕ್ ಮ್ಯಾನೇಜರ್ ಸಿ.ಎಮ್.ಸಿ. ಬ್ರಾಂಚ್ ಶಿರಸಿ ಇವರ ಪತ್ರ ನಂ. 357/2009/ಏ.ಸಿ/361, ದಿ: 10-12-2009.

**ಠರಾವು ನಂ. 311 (1)**
**16-12-2009**

ಶಿರಸಿ ನಗರಸಭೆಯು ಘನತ್ಯಾಜ್ಯ ವಸ್ತು ನಿರ್ವಹಣೆ ಮಾಡಲು ಸರಕಾರದಿಂದ ಆಯೋಜಿಸಿದ ಕಾರ್ಯಕ್ರಮದಲ್ಲಿ ಮನೆ-ಮನೆಗಳಿಂದ ಪ್ರಾಥಮಿಕ ಹಂತದ ಕಸಗಳನ್ನು ಸಂಗ್ರಹಿಸಲು 3 ಸ್ವಸಹಾಯ ಸಂಘಗಳಿಗೆ ಅಟೋ ರಿಕ್ಷಾಗಳನ್ನು ಕೊಡಿಸಿ ಅಟೋ ರಿಕ್ಷಾಗಳ ಸಾಲದ ಕಂತಿನಲ್ಲಿ ಶೇ 50 ಸಬ್ಸಿಡಿಯನ್ನು ಮಂಜೂರಿಯಿಂದ ನೀಡಲಾಗಿರುತ್ತದೆ. ಉಳಿದ ಹಣವನ್ನು ಸ್ವಸಹಾಯ ಸಂಘಗಳು ಮನೆ-ಮನೆಯಿಂದ ಕಸ ಎತ್ತುವ ಜನರಿಂದ ವಸೂಲು ಮಾಡಿದ ಮಾಸಿಕ ಶುಲ್ಕದಿಂದ ವಾಹನ ನಿರ್ವಹಣೆ ಮತ್ತು ಸಿಬ್ಬಂದಿಗಳ ವೆಚ್ಚ ಸಾಲದ ಕಂತು ಭರಿಸಲು ಕರಾರುಗಳಲ್ಲಿ ಅಳವಡಿಸಲಾಗಿರುತ್ತದೆ. ಆದರೇ ಸಿಂಡಿಕೇಟ್ ಬ್ಯಾಂಕನಿಂದ ಪಡೆದ ಸಾಲದ ಕಂತಗಳನ್ನು ಮತ್ತು ಬಡ್ಡಿಯನ್ನು ಬ್ಯಾಂಕಿಗೆ ಭರಣ ಮಾಡದೇ ಇರುವುದರಿಂದ ಬ್ಯಾಂಕಿನ ಸಾಲದ ಕಟ್‌ಬಾಕಿದಾರರಾಗಿರುತ್ತದೆ. ಇದರಿಂದ ಬ್ಯಾಂಕಿನವರು ಕಟ್‌ಬಾಕಿದಾರರಿಗೆ ವಕೀಲ ಮುಖಾಂತರ ನೋಟಿಸ ನೀಡಿ ಸಾಲದ ಹಣದ ಬಾಕಿ ತುಂಬಲು ತಿಳಿಸಿದ್ದಾಗ್ಯೂ ಕೂಡ ಸಾಲವನ್ನು ತುಂಬದೇ ಇರುವದರಿಂದ ವಾಹನಗಳನ್ನು ಹಿಡಿದು ತಮ್ಮ ತಾಬೆಗೆ ತೆಗೆದುಕೊಂಡಿರುತ್ತಾರೆ. ಮತ್ತು ನಗರಸಭೆಯು ಈ ಸಾಲದ ಬಗ್ಗೆ ಎರಡನೆ ಹೊಣೆಗಾರನಾಗಿರುವದರಿಂದ ನಗರಸಭೆಗೆ ಎಚ್ಚರಿಕೆಯ ನೋಟಿಸನ್ನು ಕೊಟ್ಟು ವಾಹನವನ್ನು ತಮ್ಮ ತಾಬಾದಲ್ಲಿ ಇಟ್ಟುಕೊಂಡಿರುತ್ತಾರೆ. ಇದರಿಂದಾಗಿ ನಗರಸಭೆಗೆ ಜವಾಬ್ದಾರಿಯ ಕಾರ್ಯವನ್ನು ಮಾಡಲು ವ್ಯಥೆಯಾಗಿರುತ್ತದೆ. ಘನತ್ಯಾಜ್ಯ ವಸ್ತು ನಿರ್ವಹಣೆ ಕರ್ತವ್ಯ ಕುಂಠಿತಗೊಂಡಿರುತ್ತದೆ. ಮತ್ತು ಸಾಲದ ಹಣವನ್ನು ನಗರಸಭೆಯಿಂದ ತುಂಬಿ ವಾಹನಗಳನ್ನು ನಗರಸಭೆಯ ತಾಬೆಗೆ ತೆಗೆದುಕೊಂಡು ಘನತ್ಯಾಜ್ಯ ವಸ್ತು ನಿರ್ವಹಣೆ ಮಾಡಲು ಬೇರೆಯವರಿಗೆ ವಹಿಸಿಕೊಡಬೇಕಾಗಿ ಸಭೆಯು ತೀರ್ಮಾನಿಸಿತು. ಬ್ಯಾಂಕಿನ ಸಾಲದ ಸಬ್ಸಿಡಿಯನ್ನು ಹೊರತುಪಡಿಸಿ ಬಾಕಿ ಇರುವ ಸಾಲದ ಕಂತು, ಬಡ್ಡಿ,

ಸುಸ್ತಿ ಬಡ್ಡಿ, ಮುಂತಾದವುಗಳನ್ನು ಒಳಗೊಂಡಿದ್ದು ಬ್ಯಾಂಕ್ ಮ್ಯಾನೇಜರ ಜೊತೆಗೆ ಸಂಧಾನದ ಮೂಲಕ ರಿಯಾಯತಿಯಿಂದ ಏಕ ಕಂತಿನಲ್ಲಿ ಬ್ಯಾಂಕಿಗೆ ಭರಣಾ ಮಾಡಿ ವಾಹನಗಳ ಮೇಲಿರುವ ಸಾಲದ ಭೋಜಾವನ್ನು ಕಡಿಮೆ ಮಾಡಿಸಲು ಅಧ್ಯಕ್ಷರಿಗೆ ಮತ್ತು ಪೌರಾಯುಕ್ತರಿಗೆ ಅಧಿಕಾರ ನೀಡಿ ಸರ್ವಾನುಮತದಿಂದ ಠರಾಯಿಸಿತು.

1) ಕಲ್ಪವೃಕ್ಷ ನಿರ್ಮಲ ಸಂಘದ ಬಾಕಿ ರೂ. 1,17,504–00 ವಾಹನ ಸಂಖ್ಯೆ : ಕೆ.ಎ.31 – 4360.
ಅಕೌಂಟ ನಂ. : 0357.722.40, ಸಾಲದ ಮೊತ್ತ . ರೂ.2,10,000–00

2) ಭಾಗ್ಯಲಕ್ಷ್ಮೀ ನಿರ್ಮಲ ಸಂಘದ ಬಾಕಿ ರೂ. 1,27,131–00 ವಾಹನ ಸಂಖ್ಯೆ : ಕೆ.ಎ.31 – 4359.
ಅಕೌಂಟ ನಂ. : 0357.722.21, ಸಾಲದ ಮೊತ್ತ ರೂ.2,10,000–00

3) ಪ್ರತಿಭಾ ನಿರ್ಮಲ ಸಂಘದ ಬಾಕಿ ರೂ. 1,49,760–00 ವಾಹನ ಸಂಖ್ಯೆ : ಕೆ.ಎ.31 – 4361.
ಅಕೌಂಟ ನಂ. : 0357.722.39, ಸಾಲದ ಮೊತ್ತ . ರೂ.2,10,000–00

**ವಿಷಯ ನಂ 24(2)**

ಬೀದಿ ದೀಪದ ತಂತಿ ಹಾಗೂ ಕಂಬ ಅಳವಡಿಸುವ ಕಾಮಗಾರಿ ಅಂದಾಜು ಪತ್ರಿಕೆಯಂತೆ ರೂ.8,52,777–17 ಟೆಂಡರು ಪ್ರಕ್ರಿಯೆ ಮಾಡಲು ಮಂಜೂರಿ ಮಾಡುವುದು.

**ದಾಖಲೆಗಳು:–**

1) ಹು.ವಿ.ಸ.ಕಂ.ನಿ. ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಶಿರಸಿ ಇವರ ಪತ್ರ ಸಂಖ್ಯೆ : 427/ ಟಿ–2/ ಕ–303/ ಶಿರಸಿ/ 5373–75 ದಿನಾಂಕ : 10.12.2009.
2) ಶಿರಸಿ ನಗರಸಭೆಯ ಪತ್ರ ಸಂಖ್ಯೆ: ನಸಶಿ/ ವಿದ್ಯುತ್/ ಬೀದಿದೀಪ/ ವಿವ/ 2008–09 ದಿನಾಂಕ : 09.04.2009.

**ಠರಾವು ನಂ. 311 (2)**
**16–12–2009**

ಶಿರಸಿ ನಗರ ವ್ಯಾಪ್ತಿಯಲ್ಲಿ ವಿವಿಧ ವಾರ್ಡಗಳಲ್ಲಿ ಬೀದಿದೀಪಗಳಿಗೆ ಹೆಚ್ಚುವರಿ ವಿದ್ಯುತ್ ವಾಯರ್ ಮತ್ತು ಕಂಬಗಳನ್ನು ಅಳವಡಿಸಿಕೊಡುವ ಬಗ್ಗೆ ಅಂದಾಜು ಪತ್ರಿಕೆಯನ್ನು ತಯಾರಿಸಿಕೊಡಲು ಪತ್ರ ಬರೆಯಲಾಗಿತ್ತು. ಅದರಂತೆ ಹೆಸ್ಕಾಂ, ಶಿರಸಿ ಇವರು ತಯಾರಿಸಿದ ಅಂದಾಜು ಪತ್ರಿಕೆ ಸಭೆಗೆ ಓದಿ ಹೇಳಲಾಯಿತು. ಸಭೆಯು ಕೂಲಂಕಷವಾಗಿ ಪರಿಶೀಲಿಸಿತು. 1 ರಿಂದ 9 ಐಟಮ್, 31 ವಾರ್ಡಗಳಲ್ಲಿ ಬೀದಿದೀಪದ ಹೆಚ್ಚುವರಿ ಕಂಬ ಅಳವಡಿಸಿ ವಾಯರ್ ಅಳವಡಿಸಲು ರೂ.8,52,777–17 ಅಂದಾಜು ಪತ್ರಿಕೆ ತಯಾರಿಸಿ ಅದರಲ್ಲಿ ಮೇಲ್ವಿಚಾರಣಾ ಶುಲ್ಕ ರೂ.85,278–00, ಭದ್ರತಾ ಠೇವಣಿ ರೂ.23,400–00 ಒಟ್ಟು ರೂ.1,08,678–00 ಹೆಸ್ಕಾಂ ಇಲಾಖೆಗೆ ಭರಣಾ ಮಾಡಲು ತಿಳಿಸಿರುತ್ತಾರೆ. ಅದರಂತೆ ಕಾಮಗಾರಿ ಅನುಷ್ಠಾನ ಮಾಡಲು ಮತ್ತು ಹೆಸ್ಕಾಂಗೆ ಹಣ ತುಂಬಲು ಸಭೆ ತೀರ್ಮಾನಿಸಿತು. ನಗರಸಭೆ ನಿಧಿಯಿಂದ ಖರ್ಚುವೆಚ್ಚ ಮಾಡಲು ಮತ್ತು ಟೆಂಡರು ಪ್ರಕ್ರಿಯೆ ಮಾಡಲು ಸರ್ವಾನುಮತದಿಂದ ಮಂಜೂರಿ ನೀಡಿ ಠರಾಯಿಸಿತು.

**ವಿಷಯ ನಂ 24 (3ಎ)**

12ನೇ ಹಣಕಾಸು ಯೋಜನೆಯಡಿಯಲ್ಲಿ ಇಂದನ ಉಳಿತಾಯ ಸಾಮಾಗ್ರಿ ಖರೀದಿಸಲು ಕ್ರಿಯಾಯೋಜನೆಗೆ ಮಂಜೂರಿ ದೊರೆತಿದ್ದು ಕೆಲವೊಂದು ಸಾಮಾಗ್ರಿಗಳನ್ನು ಡಿ.ಜಿ.ಎಸ್. & ಡಿ ದರದಲ್ಲಿ ಖರೀದಿಸುವ ಕುರಿತು ಮಂಜೂರಿ ನೀಡುವುದು.

**<u>ದಾಖಲೆಗಳು:-</u>**

1) ಮಾನ್ಯ ಜಿಲ್ಲಾಧಿಕಾರಿಗಳು ಉ.ಕ. ಕಾರವಾರ ಇವರ ಆದೇಶ ನಂ. ಪುರಸಭೆ 1/ವಿವ-182/2009-10, ದಿ: 13-11-2009.
2) ಯೋಜನಾ ನಿರ್ದೇಶಕರು, ಜಿಲ್ಲಾನಗರಾಭಿವೃದ್ಧಿ ಕೋಶ್, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕಾರವಾರ ಇವರ ಪತ್ರ ನಂ. ನಿರ್ಮಲ ನಗರ/ವಿವ/2008-09, ದಿ: 31-10-2009.

**ಠರಾವು ನಂ. 311 (3ಎ)**
**16-12-2009**

ಶಿರಸಿ ನಗರಸಭೆಗೆ 12ನೇ ಹಣಕಾಸು ಯೋಜನೆಯಡಿಯಲ್ಲಿ ಇಂದನ ಉಳಿತಾಯ ಕಾರ್ಯಕ್ರಮದಡಿ ಬಿಡುಗಡೆಯಾದ ಅನುದಾನ ರೂ. 24 ಲಕ್ಷಗಳು ಕ್ರಿಯಾ ಯೋಜನೆಯನ್ನು ತಯಾರಿಸಿ ಮಾನ್ಯ ಜಿಲ್ಲಾಧಿಕಾರಿಗಳಿಂದ ಮಂಜೂರಿ ಪಡೆದಿರುತ್ತದೆ. ತದನಂತರ ದಿನಾಂಕ: 31-11-2009 ರಂದು ಯೋಜನಾ ನಿರ್ದೇಶಕರು ಜಿಲ್ಲಾನಗರಾಭಿವೃದ್ಧಿ ಕೋಶ ಕಾರವಾರ ರವರಲ್ಲಿ ಚರ್ಚಿಸಿರುವಂತೆ ಡಿ.ಜಿ.ಎಸ್. & ಡಿ ದರದಲ್ಲಿ ದೊರೆಯುವ ಸಾಮಗ್ರಿಗಳನ್ನು ಖರೀದಿಸುವುದು ಮತ್ತು ಡಿ.ಜಿ.ಎಸ್. & ಡಿ ರೇಟ್ ಇಲ್ಲದೇ ಇರುವ ಸಾಮಗ್ರಿಗಳನ್ನು ಟೆಂಡರ ಕರೆದು ಖರೀದಿಸಲು ಸೂಚನೆ ಮಾಡಿರುತ್ತಾರೆ. ಅದರಂತೆ ಕ್ರಿಯಾ ಯೋಜನೆಯಲ್ಲಿ ಮಂಜೂರಾದ ಕ್ರಮಸಂಖ್ಯೆ ನಂ. 2 ಇವುಗಳ ಮೊತ್ತ ರೂ. 11.18 ಲಕ್ಷ ಡಿ.ಜಿ.ಎಸ್. & ಡಿ ದರಗಳಲ್ಲಿ ಟಾಟಾ ಬಿಪಿ ಸೋಲಾರ್ ಕಂಪನಿಯ ಸೋಲಾರ್ ಸಿಸ್ಟಮ್ ಬೀದಿದೀಪಗಳನ್ನು ಖರೀದಿಸಲು ಮಂಜೂರಿ ನೀಡಿತು. ಮತ್ತು ಕ್ರಸಂ. ನಂ. 1, 1 ಮತ್ತು 2 ವಿದ್ಯುತ್ ದೀಪಗಳ ಎನರ್ಜಿ ಮಾನೇಜಮೆಂಟ್ ಸಿಸ್ಟಮ್ ಆಟೋ ಪ್ರೋಗ್ರಾಮೇಬಲ್ ಯುನಿಟ್ ಮತ್ತು ಪ್ರವೈಡಿಂಗ್ ಮಿನಿ ವಿಂಡ್ ಸೋಲಾರ್ ಜನರೇಟಿಂಗ್ ಪ್ಲಾಂಟ್ ವಾಟರ್ ಸಪ್ಲೈ ಸೆನ್ಸರ್ ಇವುಗಳಿಗಾಗಿ ಕಾದಿಟ್ಟ ಹಣ ರೂ. 12.80 ಲಕ್ಷಗಳಿಗೆ ಈಗಾಗಲೇ ಟೆಂಡರ ಪ್ರಕ್ರಿಯೆ ಮಾಡಿದ್ದು ಮಂಜೂರಿ ನೀಡಲಾಗಿದೆ. ಸಭೆಯು ಮಂಜೂರಿ ನೀಡಿ ಸರ್ವಾನುಮತದಿಂತ ಠರಾಯಿಸಿತು.

**<u>ವಿಷಯ ನಂ 24 (3ಬಿ)</u>**

12ನೇ ಹಣಕಾಸು ಯೋಜನೆಯಡಿಯಲ್ಲಿ ಡಾಟಾ ಬೇಸ್ ಸಾಮಾಗ್ರಿ ಖರೀದಿಸಲು ಕ್ರಿಯಾಯೋಜನೆಗೆ ಮಂಜೂರಿ ದೊರೆತಿದ್ದು ಕೆಲವೊಂದು ಸಾಮಾಗ್ರಿಗಳನ್ನು ಡಿ.ಜಿ.ಎಸ್. & ಡಿ ದರದಲ್ಲಿ ಮತ್ತು ಟೆಂಡರ ಮೂಲಕ ಖರೀದಿಸುವ ಕುರಿತು ಮಂಜೂರಿ ನೀಡುವುದು.

**<u>ದಾಖಲೆಗಳು:-</u>**

1) ಮಾನ್ಯ ಜಿಲ್ಲಾಧಿಕಾರಿಗಳು ಉ.ಕ. ಕಾರವಾರ ಇವರ ಆದೇಶ ನಂ. ಪುರಸಭೆ 1/ವಿವ-142/2009-10, ದಿ: 29-10-2009.
2) ಯೋಜನಾ ನಿರ್ದೇಶಕರು, ಜಿಲ್ಲಾನಗರಾಭಿವೃದ್ಧಿ ಕೋಶ್, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕಾರವಾರ ಇವರ ಪತ್ರ ನಂ. ನಿರ್ಮಲ ನಗರ/ವಿವ/2008-09, ದಿ: 31-10-2009.
3) ಶಿರಸಿ ನಗರಸಭೆಯ ಅಲ್ಪಾವಧಿ ಟೆಂಡರ ಪ್ರಕಟಣೆ ದಿ: 09-12-2009 ಜನಮಾಧ್ಯಮ ದಿನಪತ್ರಿಕೆಯಲ್ಲಿ ಪ್ರಕಟಿಸಿದ ಪ್ರತಿ.
4) ದಿ: 14-11-2009 ರಂದು ಸ್ವೀಕರಿಸಿದ ಟೆಂಡರ ದರಗಳ ತುಲನಾತ್ಮಕ ಯಾದಿ.

**ಠರಾವು ನಂ. 311 (3ಬಿ)**
**16-12-2009**

ಶಿರಸಿ ನಗರಸಭೆಗೆ 12ನೇ ಹಣಕಾಸು ಯೋಜನೆಯಡಿಯಲ್ಲಿ ರೂ. 7.42 ಲಕ್ಷ ಅನುದಾನ ಮಂಜೂರಾಗಿದ್ದು ಕ್ರಿಯಾ ಯೋಜನೆಯನ್ನು ತಯಾರಿಸಿ ಮಾನ್ಯ ಜಿಲ್ಲಾಧಿಕಾರಿಗಳಿಂದ ಮಂಜೂರಿ ಪಡೆದಿರುತ್ತದೆ. ಜಿಲ್ಲಾಧಿಕಾರಿಗಳು ತಮ್ಮ ಆದೇಶದಲ್ಲಿ ನಿಭಂದನೆ ಅಳವಡಿಸಿ ಡಾಟಾಬೇಸ್ ಅಡಿಯಲ್ಲಿ ಖರೀದಿಸುವ ಸಾಮಗ್ರಿಗಳ ಕುರಿತು ಟೆಂಡರ

ಕರೆದು ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಮಂಜೂರಿ ಪಡೆಯತಕ್ಕದ್ದು ಎಂದು ಸೂಚನೆ ಮಾಡಿರುತ್ತಾರೆ. ತದನಂತರ ಯೋಜನಾ ನಿರ್ದೇಶಕರು ಜಿಲ್ಲಾನಗರಾಭಿವೃದ್ಧಿ ಕೋಶ್, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕಾರವಾರ ರವರ ಪತ್ರ ದಿನಾಂಕ: 31–10–2009 ರಂತೆ ಕಂಪ್ಯೂಟರ್ & ಫೇರಿಪೆರಲ್ಸ್ ಸಾಮಗ್ರಿಗಳನ್ನು ಡಿ.ಜಿ.ಎಸ್. & ಡಿ ದರದಲ್ಲಿ ಖರೀದಿಸಲು ಸೂಚಿಸಿರುತ್ತಾರೆ. ಅದರಂತೆ ಖರೀದಿಸಿರುವ ಸಾಮಗ್ರಿಗಳಿಗೆ ಅನುಮೋದನೆ ನೀಡಿತು. ಮತ್ತು ಇತರೇ ಕ್ರಿಯಾಯೋಜನೆಯಲ್ಲಿ ಮಂಜೂರಾದ ಕಾರ್ಯಗಳನ್ನು ಟೆಂಡರ ಕರೆದು ಖರೀದಿಸಲು ಸೂಚನೆ ಮಾಡಿರುತ್ತಾರೆ. ಅದರಂತೆ ಟೆಂಡರ ಪ್ರಕ್ರಿಯೆ ಮಾಡಿದ್ದು ದಿ: 14–12–2009 ರಂದು ಸ್ವೀಕರಿಸಿದ ಟೆಂಡರ ದರಗಳನ್ನು ಪರೀಶಿಲಿಸಲಾಗಿ ಎಲ್–1 ದರಗಳನ್ನು ಅನುಮೋದಿಸಿ ಮಂಜೂರಿ ನೀಡಲಾಯಿತು.

| ಅ.ನಂ. | ಸಾಮಾಗ್ರಿಗಳ ವಿವರ | ದರವಾರು ಪೂರೈಸಿದವರ ಹೆಸರು | |
|---|---|---|---|
| | | ಪ್ರಭಾಕರ ಇಲೇಕ್ಟ್ರಾನಿಕ್ಸ್, ಶಿರಸಿ | ವಿನಟೆಕ್ ಸಿಸ್ಟಮ್, ಶಿರಸಿ |
| 1 | Digital displaying board (SAMSUNG LCD 32" with accessories). | 66,350.00<br>ಎಲ್–1 | 68,650.00<br>ಎಲ್–2 |

| ಅ.ನಂ. | ಕಾಮಗಾರಿ ಹೆಸರು | ಕಾಮಗಾರಿ ವಿವರ | ಅಂದಾಜು ಪರಿಮಾಣ | ಗುತ್ತಿಗೆದಾರರು ನಮೂದಿಸಿದ ದರ | |
|---|---|---|---|---|---|
| | | | | ಗಣೇಶ ಎಚ್. ದಾವಣಗೇರೆ, ಶಿರಸಿ | ಜಿ.ಎಸ್. ಹಿರೇಮಠ, ಶಿರಸಿ |
| 1 | ಸಿಟಿಜನ್ ಸರ್ವಿಸ್ ಸೆಂಟರ್‌ನಲ್ಲಿ ಕ್ಯಾಬಿನ್ ಮತ್ತು ಡೋರ್ ಲಾಕ್ ಅಳವಡಿಸುವುದು | 1) ಅಲ್ಯೂಮಿನಿಯಮ್ ಪಾರ್ಟಿಶಿಯನ್ ಒದಗಿಸಿದ ಕೂಡಿಸುವುದು | 14 ಚ.ಮೀ. | 2675.00 /ಚ.ಮೀ.<br>**ಎಲ್–2** | 2660.00 / ಚ.ಮೀ.<br>**ಎಲ್–1** |
| | | 2) ಅಲ್ಯೂಮಿನಿಯಮ್ ಉತ್ತಮ ದರ್ಜೆಯ ಬಾಗಿಲು ಕ್ಲೋಸರ್ ಜೊತೆಗೆ ಒಂದಗಿಸಿ ಕೂಡಿಸುವುದು. | 2.60 ಚ.ಮೀ. | 4715.00 / ಚ.ಮೀ.<br>**ಎಲ್–2** | 4685.00 / ಚ.ಮೀ.<br>**ಎಲ್–1** |

III

| ಅ.ನಂ. | ಸಾಮಾಗ್ರಿಗಳ ವಿವರ | ದರವಾರು ಪೂರೈಸಿದವರ ಹೆಸರು | |
|---|---|---|---|
| | | ಎಸ್.ಜಿ. ಹೊಂಕಣ, ಗೋದ್ರೆಜ್ ಹೊಲಸೇಲ್ ಡಿಲರ್, ಶಿರಸಿ | ಸಿ.ಆರ್. ಕರ್ನಲ್ಲಿ & ಕಂ., ಶಿರಸಿ |
| 1 | ಗೋದ್ರೇಜ್ ಕಂಪ್ಯೂಟರ್ ಟೇಬಲ್ ಮೋಡೆಲ್ ಸ್ಟೈಲೊ | 8252-00<br>**L-1** | 8,340-00 |
| 2 | ಗೋದ್ರೇಜ್ ಕಂಪ್ಯೂಟರ್ ಟೇಬಲ್ ಮೋಡೆಲ್ ಕಂಪ್ಯಾನಿಯನ್ 9 | 5562-75<br>**L-1** | 5,681-00 |
| 3 | ಗೋದ್ರೇಜ್ ಕಂಪ್ಯೂಟರ್ ಟೇಬಲ್ ಮೋಡೆಲ್ ಕಂಪ್ಯಾನಿಯನ್ 11 | 7032-00<br>**L-1** | 8,140-00 |
| 4 | ಗೋದ್ರೇಜ್ ರಿವಾಲ್ವಿಂಗ್ ಚೇರ್ ಮೋಡೆಲ್ ಪಿ.ಸಿ.ಎಚ್. 7002 | 12275-00<br>**L-1** | 12,415-00 |

| | | | |
|---|---|---|---|
| 5 | ಗೋದ್ರೇಜ್ ಚೇರ್ ಮೋಡೆಲ್ ನಂ. 4013 I | 5000-00<br>**L-1** | 5,150-00 |

**ವಿಷಯ ನಂ 24(4)**

ನೀರು ಸರಬರಾಜು ಘಟಕಗಳಲ್ಲಿ ಅಳವಡಿಸಿದ ವಿದ್ಯುತ್ ಸಂಪರ್ಕದ ಲೋಡಿಂಗ್ ನಿಗಧಿಪಡಿಸಿದ ಲೋಡಿಗಿಂತ ಹೆಚ್ಚಿಗೆಯಾಗಿರುವಂತಹ ಲೋಡಿಗೆ ಮಂಜೂರಿ ನೀಡುವ ಕುರಿತು ವಿಚಾರ.

**ಠರಾವು ನಂ. 311 (4)**
**16-12-2009**

ಹು.ವಿ.ಸ.ಕಂ.ನಿ. ಶಾಖಾಧಿಕಾರಿ, ಅರ್ಬನ್ ಶಾಖೆ, ಶಿರಸಿ ಇವರ ಪತ್ರ ಸಂಖ್ಯೆ : ಶಾ.ಅ./ಶಿರಸಿ/701 ದಿನಾಂಕ : 01.09.2009 ನೇದರಂತೆ ಶಿರಸಿ ನಗರ ಸಾರ್ವಜನಿಕರಿಗೆ ಕುಡಿಯುವ ನೀರು ಸರಬರಾಜು ಮಾಡುವ ಬೋರವೆಲ್ ಘಟಕಗಳ ವಿದ್ಯುತ್ ಸರಬರಾಜು ಹೆಚ್ಚುವರಿಯಾಗಿ ಇರುವಂತಹ ಲೋಡ್ ಮಂಜೂರಿ ಮಾಡಿರುವುದರಿಂದ ಮಂಜೂರಾದ ಲೋಡಿಂಗ್ 1 ರಿಂದ 21 ಘಟಕಗಳಿಗೆ ಲಭ್ಯವಿದ್ದು ಹೆಚ್ಚುವರಿ ಲೋಡಿಂಗ್ ಮೊತ್ತ ರೂ.2,117-00 ಭರಣಾ ಮಾಡಲು ತಿಳಿಸಿರುತ್ತಾರೆ. ಸದರ ಹಣವನ್ನು ಮಂಜೂರಿಯಿಂದ ತುಂಬಲು ಸಭೆಯು ಸರ್ವಾನುಮತದಿಂದ ಠರಾಯಿಸಿತು.

**ವಿಷಯ ನಂ 24(5)**

ನಗರಸಭೆಯ ಫಿಲ್ಟರ್ ಬ್ರಿಡ್ಜ್ ತಿರುಗಿಸುವ ಮೋಟಾರ್ ಸ್ಲಿಪ್ ರಿಂಗ್ ರಿಪೇರಿಗೆ ಬಂದ ದರವಾರು ಮಂಜೂರಿ ನೀಡುವ ಕುರಿತು ವಿಚಾರ.

**ಠರಾವು ನಂ. 311 (5)**
**16-12-2009**

ಶಿರಸಿ ನಗರ ಸಾರ್ವಜನಿಕರಿಗೆ ನೀರು ಸರಬರಾಜು ಮಾಡುವ ಫೀಲ್ಟರ್ ಹೌಸಿನಲ್ಲಿ ರೌಂಡ್ ಟ್ಯಾಂಕಿನಲ್ಲಿ ಅಳವಡಿಸಿದ ಫೆಕ್ಯೋಲೇಟರ್ ಮೋಟಾರ ಸ್ಲಿಪ್ ರಿಂಗ್ ರಿಪೇರಿ ಮಾಡುವ ಕುರಿತು ದರವಾರುಗಳನ್ನು ಕರೆದಿದ್ದು ಸ್ವೀಕರಿಸಿದ 2 ದರವಾರುಗಳಲ್ಲಿ ಶೃದ್ಧಾ ಇಲೇಕ್ಟ್ರಿಕಲ್ಸ್ ಶಿರಸಿ ಇವರು ನಮೂದಿಸಿದ ದರ ರೂ.11,480-00 ಇದು ಎಲ್.-1 ಇರುತ್ತದೆ. ಮತ್ತು ಜಯಲಕ್ಷ್ಮಿ ಇಲೆಕ್ಟ್ರಿಕಲ್ಸ್ ಶಿರಸಿ ಇವರು ನಮೂದಿಸಿದ ದರ. ರೂ.12,960-00 ಎಲ್-2 ಇರುತ್ತದೆ. ಆದ್ದರಿಂದ ಎಲ್-1 ದರವನ್ನು ಅನುಮೋದಿಸಿ ಮಂಜೂರಿ ನೀಡಲಾಯಿತು.

**ವಿಷಯ ನಂ 24(6)**

ಮಾರಿಗದ್ದೆ ಜಾಕ್ವೆಲ್ ಹಾಗೂ ಅಡಕಳ್ಳಿ ಮಧ್ಯಂತರ ಘಟಕಕ್ಕೆ ಕೆಲಸ ನಿರ್ವಹಿಸಲು ಬಂದ ಮಾನವ ಶಕ್ತಿ ದರವಾರು ಮಂಜೂರಿ ಕುರಿತು ವಿಚಾರ.

**ಠರಾವು ನಂ. 311 (6)**
**16-12-2009**

ಶಿರಸಿ ನಗರಸಭೆಯು ಸಾರ್ವಜನಿಕರಿಗೆ ನೀರು ಸರಬರಾಜು ಮಾಡುವ ಮಾರಿಗದ್ದೆ ಜಾಕ್‌ವೆಲ್ ಹಾಗೂ ಅಡಕಳ್ಳಿ ಮಧ್ಯಂತರ ಘಟಕದಲ್ಲಿ ಕಾರ್ಯನಿರ್ವಹಿಸಲು ಆಪರೇಟರ್ ಮತ್ತು ಹೆಲ್ಪರ್ ಹುದ್ದೆಗಳ ಮಾನವ ಶಕ್ತಿಯನ್ನು ಪೂರೈಸಲು ಟೆಂಡರು ದರವಾರು ಪ್ರಕಟಣೆ ಸಂ. ನಸಶಿ/ಕಾ.ವಿ./ವಿವ-13/2009-10, ದಿನಾಂಕ: 21-10-2009ನೇದರಂತೆ ಪ್ರಕಟಪಡಿಸಲಾಗಿತ್ತು. ದಿನಾಂಕ: 23-11-2009ರಂದು ಸ್ವೀಕರಿಸಿದ ತುಲನಾತ್ಮಕ ಯಾದಿಯನ್ನು ಸಭೆಗೆ ಓದಿ ಹೇಳಲಾಯಿತು. ಎರಡು ಜನ ಗುತ್ತಿಗೆದಾರರು ಭಾಗವಹಿಸಿದ್ದು ಎಲ್-1 ದರವನ್ನು ಅನುಮೋದಿಸಿ

ಮಂಜೂರಿ ನೀಡಲಾಯಿತು. 4 ಜನ ಆಪರೇಟರ್‌ಗೆ ಮಾಸಿಕ ರೂ. 15,600, 4 ಜನ ಹೆಲ್ಪರ್‌ಗೆ ಮಾಸಿಕ ರೂ. 14,400-00 ಒಟ್ಟೂ ರೂ. 30,000-00 ಮಾಸಿಕ ವೆಚ್ಚ ಒಂದು ವರ್ಷಕ್ಕೆ 3,60,000-00 ಖರ್ಚು ವೆಚ್ಚ ಬರಬಹುದಾಗಿದೆ. ಅಡಕಳ್ಳಿ ಮತ್ತು ಮಾರಿಗದ್ದೆಯಲ್ಲಿ ಕೆಲಸ ನಿರ್ವಹಿಸಲು ಆಯಾ ಪ್ರದೇಶದಲ್ಲಿಯ ಕೆಲಸಗಾರರನ್ನು ಆಯ್ದು ಕೆಲಸಕ್ಕೆ ನೇಮಿಸುವ ಕರಾರನ್ನು ಅಳವಡಿಸಿ ಕಾರ್ಯಾದೇಶ ಮಾಡಲು ಸಭೆಯು ತೀರ್ಮಾನಿಸಿತು. ಸಭೆಯು ಸರ್ವಾನುಮತದಿಂದ ಠರಾಯಿಸಿತು.

| ಕ್ರ.ಸಂ. | ವಿವರ | | ಜಾಯ್ ಇಲೆಕ್ಟ್ರಿಕಲ್ಸ್ & ಎಂಜಿನೀಯರಿಂಗ್ಸ್ | ಶೃದ್ಧಾ ಇಲೆಕ್ಟ್ರಿಕಲ್ಸ್ |
|---|---|---|---|---|
| 1 | ಮಾರಿಗದ್ದೆ ಜಾಕ್‌ವೆಲ್ ಹಾಗೂ ಅಡಕಳ್ಳಿ ಮಧ್ಯಂತರ ಘಟಕದಲ್ಲಿ ನಿರ್ವಹಿಸುವುದು. | ಆಪರೇಟರ್ | ರೂ. 3,900-00 ಎಲ್-1 | ರೂ. 3,920-00 |
| | | ಹೆಲ್ಪರ್ | ರೂ. 3,600-00 ಎಲ್-1 | ರೂ. 3,620-00 |

**<u>ವಿಷಯ ನಂ 24(7)</u>**

ಗಣೇಶನಗರ ಹಾಗೂ ಸರಕಾರಿ ದವಾಖಾನೆ ಟ್ಯಾಂಕಿಗೆ ನೀರು ಲಿಫ್ಟ್ ಮಾಡುವ 15 ಹೆಚ್.ಪಿ. ಪಂಪು ರಿಪೇರಿಗೆ ಬಂದ ದರವಾರುಗಳನ್ನು ಮಂಜೂರಿ ಮಾಡುವ ಕುರಿತು ವಿಚಾರ.

**ಠರಾವು ನಂ. 311 (7)**
**16-12-2009**

ಶಿರಸಿ ನಗರಸಭೆಯ ಸಾರ್ವಜನಿಕರಿಗೆ ಕುಡಿಯುವ ನೀರು ಪೂರೈಸುವಂತಹ ಗಣೇಶನಗರ ಹಾಗೂ ಸರಕಾರಿ ದವಾಖಾನೆ ಹತ್ತಿರ ಇರುವ ಟ್ಯಾಂಕಿಗೆ ನೀರು ಲಿಫ್ಟ್ ಮಾಡುವ 15 ಹೆಚ್.ಪಿ. ಪಂಪು ನಾದುರಸ್ಥಿಯಾಗಿದ್ದು ದುರಸ್ಥಿ ಮಾಡಲು ಕೋಟೇಶನ್ ಕರೆಯಲಾಗಿರುತ್ತದೆ. ದಿನಾಂಕ : 11.12.2009 ರಂದು ಸ್ವೀಕರಿಸಿದ ದರಗಳ ತುಲನಾತ್ಮಕ ಯಾದಿಯಂತೆ 2 ದರಗಳು ಸ್ವೀಕರಿತವಾಗಿರುತ್ತದೆ. ಶೃದ್ಧಾ ಇಲೇಕ್ಟ್ರಿಕಲ್ಸ್ ಶಿರಸಿ ಇವರು ನಮೂದಿಸಿದ ದರ ರೂ.28,550-00 ಇದು ಎಲ್.-1 ಇರುತ್ತದೆ. ಮತ್ತು ಓರಿಯಂಟಲ್ ಆಟೋ ರಿಕಂಡಿಷನಲ್ ಶಿರಸಿ ಇವರು ನಮೂದಿಸಿದ ದರ ರೂ.29,700-00 ಎಲ್-2 ಇರುತ್ತದೆ. ಎಲ್-1 ದರವನ್ನು ಅನುಮೋದಿಸಿ ಮಂಜೂರಿ ಮಾಡಿತು.

**<u>ವಿಷಯ ನಂ 24(8)</u>**

ಬೂಸ್ಟರ್ ಪಂಪ್ ಹೌಸ್ ದವಾಖಾನೆ ಟ್ಯಾಂಕಿಗೆ ಲಿಫ್ಟ್ ಮಾಡುವ ಪಂಪಿನ ರಿವೈಂಡಿಂಗ್ ಮಾಡಲು ಬಂದ ದರವಾರು ಮಂಜೂರಿ ಕುರಿತು ವಿಚಾರ.

**ಠರಾವು ನಂ. 311 (8)**
**16-12-2009**

ಶಿರಸಿ ನಗರಸಭೆಯ ಸಾರ್ವಜನಿಕರಿಗೆ ಕುಡಿಯುವ ನೀರು ಪೂರೈಸುವಂತಹ ಘಟಕಕ್ಕೆ ಅಳವಡಿಸಿದ ಬೂಸ್ಟರ್ ಪಂಪ್ ಹೌಸ್‌ನಲ್ಲಿ ಅಳವಡಿಸಿದ ವಿದ್ಯುತ್ ಮೋಟಾರ್ ರಿವೈಂಡಿಂಗ್ ಮಾಡಲು ದರವಾರುಗಳನ್ನು ಕರೆದಿದ್ದು ದಿನಾಂಕ : 11.12.2009 ರಂದು ಸ್ವೀಕರಿಸಿದ ದರಗಳ ತುಲನಾತ್ಮಕ ಯಾದಿಯಂತೆ 2 ದರಗಳು ಸ್ವೀಕೃತವಾಗಿರುತ್ತದೆ. ಶೃದ್ಧಾ ಇಲೇಕ್ಟ್ರಿಕಲ್ಸ್ ಶಿರಸಿ ಇವರು ನಮೂದಿಸಿದ ದರ ರೂ.10,800-00 ಇದು ಎಲ್.-1 ಇರುತ್ತದೆ. ಮತ್ತು ಜೋಯ್ ಇಲೆಕ್ಟ್ರಿಕಲ್ಸ & ಇಂಜಿನಿಯರಿಂಗ್, ರಾಜೀವನಗರ ಶಿರಸಿ ಇವರು ನಮೂದಿಸಿದ ದರ ರೂ.14,500-00 ಎಲ್-2 ಇರುತ್ತದೆ. ಎಲ್-1 ದರವನ್ನು ಅನುಮೋದಿಸಿ ಮಂಜೂರಿ ಮಾಡಿತು.

**<u>ವಿಷಯ ನಂ 24(9)</u>**

ಹೊಸದಾಗಿ ಖರೀದಿ ಮಾಡಿದ ಮೆಟಲ್ ಹೆಲೈಡ್ ಸೆಟ್ಟುಗಳನ್ನು ಪ್ರಮುಖ ಸ್ಥಳಗಳಲ್ಲಿ ಅಳವಡಿಸುವುದು ಮತ್ತು ಪ್ರಥಮದಲ್ಲಿ ಅಳವಡಿಸಿದ ಸೋಡಿಯಂ ಹಾಗೂ ಟ್ಯೂಬ್ ಲೈಟ್ ಸೆಟ್ಟುಗಳನ್ನು ಬೇರೆ ವಾರ್ಡಗಳಲ್ಲಿ ಸಾಗಿಸಿ ಹೊಸ ಕಂಬಗಳಿಗೆ ಅಳವಡಿಸಲು ಖರ್ಚು ವೆಚ್ಚವನ್ನು ಮಂಜೂರಿ ನೀಡುವುದು.

**ಠರಾವು ನಂ. 311 (9)**
**16-12-2009**

ಶಿರಸಿ ನಗರ ವ್ಯಾಪ್ತಿಯಲ್ಲಿ ಹೊಸದಾಗಿ ಖರೀದಿ ಮಾಡಿದ ಮೆಟಲ್ ಹೆಲೈಡ್ ಸೆಟ್ಟುಗಳನ್ನು ಪ್ರಮುಖ ಸ್ಥಳಗಳಲ್ಲಿ ಅಳವಡಿಸುವುದು ಮತ್ತು ಪ್ರಥಮದಲ್ಲಿ ಅಳವಡಿಸಿದ ಸೋಡಿಯಂ ಹಾಗೂ ಟ್ಯೂಬ್ ಲೈಟ್ ಸೆಟ್ಟುಗಳನ್ನು ಬೇರೆ ವಾರ್ಡಗಳಲ್ಲಿ ಸಾಗಿಸಿ ಹೊಸ ಕಂಬಗಳಿಗೆ ಅಳವಡಿಸಲು ಖರ್ಚು ವೆಚ್ಚವನ್ನು ಮಂಜೂರಿ ನೀಡುವ ಕುರಿತು ಸಭೆಯಲ್ಲಿ ಪ್ರಸ್ಥಾವನೆ ಮಾಡಲಾಯಿತು. ಸಭೆಯು ಸರ್ವಾನುಮತದಿಂದ ಠರಾಯಿಸಿತು.

**<u>ವಿಷಯ ನಂ 24(10)</u>**

ಜೆ.ಸಿ.ಬಿ. ವಾಹನ ಚಾಲಕ ಮಾನವ ಶಕ್ತಿ ಪೂರೈಸಲು ಸ್ವೀಕರಿಸಿದ ಟೆಂಡರು ದರ ಪರಿಶೀಲಿಸಿ ಮಂಜೂರಿ ಮಾಡುವುದು.

**ಠರಾವು ನಂ. 311 (10)**
**16-12-2009**

ಶಿರಸಿ ನಗರ ವ್ಯಾಪ್ತಿಯಲ್ಲಿ ಜೆ.ಸಿ.ಬಿ. ವಾಹನ ನಿರ್ವಹಣೆಗಾಗಿ ಚಾಲಕ ಮತ್ತು ಕ್ಲೀನರ್ ಮಾನವ ಶಕ್ತಿಯನ್ನು ಪೂರೈಸಲು ದರವಾರು ಪ್ರಕಟಣೆಯನ್ನು ದಿನಾಂಕ : 12.11.2009 ರಂದು ಜನಮಾಧ್ಯಮ ದಿನಪತ್ರಿಕೆಯಲ್ಲಿ ಪ್ರಕಟಪಡಿಸಲಾಗಿತ್ತು. ದಿನಾಂಕ : 21.11.2009ರಂದು ಸ್ವೀಕರಿಸಿದ ದರವಾರುಗಳ ತುಲನಾತ್ಮಕ ಯಾದಿಯಂತೆ ಶ್ರೀ. ಎಂ.ಬಿ.ಬೈಂದೂರ, ಕ್ಲಾಸ್-1, ಸಿವಿಲ್ ಗುತ್ತಿಗೆದಾರರು ಶಿರಸಿ ಇವರು ಪೂರೈಸಿದ ದರ ಚಾಲಕ ಪ್ರತಿ ದಿನಕ್ಕೆ ರೂ.140/-, ಕ್ಲೀನರ್ ಪ್ರತಿ ದಿನಕ್ಕೆ ರೂ.130/- ಎಲ್-1 ಇರುತ್ತದೆ. ಶ್ರೀ. ಶ್ರೀಧರ ವಾಯ್. ಗೌಳಿ ಗುತ್ತಿಗೆದಾರರು, ಮರಾಠಿಕೊಪ್ಪ ಶಿರಸಿ, ಇವರು ನಮೂದಿಸಿದ ದರ ಚಾಲಕನಿಗೆ ಪ್ರತಿ ದಿನಕ್ಕೆ ರೂ.155/-, ಕ್ಲೀನ್‌ರ್ ಪ್ರತಿ ದಿನಕ್ಕೆ ರೂ.141/- ನಮೂದಿಸಿದ ದರ ಎಲ್-1 & ಎಲ್-2 ಇರುತ್ತದೆ. ಎಲ್-1 ದರವನ್ನು ಅನುಮೋದಿಸಿ ಮಂಜೂರಿ ನೀಡಿತು.

**<u>ವಿಷಯ ನಂ 24(11)</u>**

ಅತಿವೃಷ್ಠಿಯಿಂದ ಮನೆ ಬಿದ್ದಿರುವ ಅರ್ಜಿಗಳನ್ನು ಪರಿಶೀಲಿಸಿ ಪರಿಹಾರ ಧನ ಮಂಜೂರಿ ಮಾಡುವುದು.

**ಠರಾವು ನಂ. 311 (11)**
**16-12-2009**

ಶಿರಸಿ ನಗರ ವ್ಯಾಪ್ತಿಯಲ್ಲಿ ಅತಿವೃಷ್ಠಿಯಿಂದ ಮನೆ ಬಿದ್ದಿರುವ ಸಂಕಷ್ಟಕ್ಕೆ ಒಳಗಾದವರ ಅರ್ಜಿಗಳನ್ನು ಪರಿಶೀಲಿಸಿ ಪರಿಹಾರ ಧನ ನೀಡುವ ಕುರಿತು ಇಂಜಿನೀಯರು ಮಾಡಿರತಕ್ಕಂತಹ ವರದಿಯನ್ನು ಮತ್ತು ಶಿಫಾರಸ್ಸುಗಳನ್ನು ಪರಿಶೀಲಿಸಲಾಯಿತು. ಶಿಫಾರಸ್ಸು ಮಾಡಿರುವಂತೆ ಫಲಾನುಭವಿಗಳಿಗೆ ಧನ ಸಹಾಯ ಮಂಜೂರಿ ಮಾಡಿ ಸರ್ವಾನುಮತದಿಂದ ಠರಾಯಿಸಿತು.

1. ಶ್ರೀಮತಿ ಲತಾ ಮಂಜುನಾಥ ನಿಲೇಕಣಿ, ಇವರ ಅರ್ಜಿ ದಿನಾಂಕ : 23.07.2009. ರೂ.6,000-00
2. ಶ್ರೀ ಸುಬ್ರಾಯ ಸರಸಪ್ಪ ಮಡಿವಾಳ ಅಗಸೆಬಾಗೀಲ,ಇವರ ಅರ್ಜಿ ದಿನಾಂಕ: 10.10.20090. ರೂ.8,000-00

3. ಶ್ರೀಮತಿ ಪದ್ಮಾ ಮಾರುತಿ ಕಾನಡೆ ಕೋಟೆಗಲ್ಲಿ, ಇವರ ಅರ್ಜಿ ದಿನಾಂಕ : 05.10.2009. ರೂ.10,000–00
4. ಶ್ರೀ. ಮಿರ್ಜಾ ಹಮೀದ್ ಬೇಗ್ ಇಂದಿರಾನಗರ, ಇವರ ಅರ್ಜಿ ದಿನಾಂಕ : 15.10.2009. ರೂ.10,000–00
5. ಶ್ರೀ. ಗಂಗಾಧರ ಅನಂತ ಶೇಟ ಗಣೇಶ ನಗರ, ಇವರ ಅರ್ಜಿ ದಿನಾಂಕ : 21.10.2009. ರೂ.15,000–00
6. ಶ್ರೀ. ಭೀಮಪ್ಪ ಯಲ್ಲಪ್ಪ ನಾಯ್ಕ ಗಣೇಶ ನಗರ, ಇವರ ಅರ್ಜಿ ದಿನಾಂಕ : 26.11.2009. ರೂ.10,000–00

ಒಟ್ಟೂ ರೂ.**59,000–00** (ರೂಪಾಯಿ ಐವತ್ತೊಂಬತ್ತು ಸಾವಿರ ಮಾತ್ರ)

**ವಿಷಯ ನಂ 24(12)**

ಬಾಪೂಜಿ ನಗರ ಹಳೆಯ ಸಮುದಾಯ ಭವನ ರಿಪೇರಿ ಮಾಡುವ ಕುರಿತು.

**ಠರಾವು ನಂ. 311 (12)**
**16–12–2009**

ಶಿರಸಿ ನಗರ ವ್ಯಾಪ್ತಿಯಲ್ಲಿರುವ ಬಾಪೂಜಿ ನಗರದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಹಳೆಯ ಸಮುದಾಯ ಭವನ ಗೋಡೆಯ ಪ್ಲಾಸ್ಟರಿಂಗ್ ಮಾಡುವುದು, ಬಾಗಿಲು, ಕಿಡಕಿ ಹಾಗೂ ಇತರೇ ದುರಸ್ಥಿ ಆಗಬೇಕಾಗಿದ್ದರಿಂದ ಆ ವಾರ್ಡಿನ ಸದಸ್ಯರ ಒತ್ತಾಯದ ಮೇರೆಗೆ ಕಾಮಗಾರಿ ಮಾಡಲು ಅಂದಾಜು ಪತ್ರಿಕೆಯನ್ನು ತಯಾರಿಸಿದ್ದು, ಅಂದಾಜು ಪತ್ರಿಕೆಯಂತೆ ರೂ.1,20,000–00 ವೆಚ್ಚ ತಗಲಬಹುದಾಗಿದ್ದು ಸದರಿ ಕಾಮಗಾರಿ ಮಾಡಲು ಸಭೆಯು ಸರ್ವಾನುಮತದಿಂದ ಮಂಜೂರಿ ನೀಡಿತು. ಕಾಮಗಾರಿ ವೆಚ್ಚ ನಗರಸಭೆ ನಿಧಿಯಿಂದ ಅಥವಾ ನಗರಸಭೆಯ 2009–10ನೇ ಸಾಲಿನ ಅಂದಾಜು ಪತ್ರಿಕೆಯಲ್ಲಿ ಕಾದಿಟ್ಟ ಶೇ.22.75 ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಅಭಿವೃದ್ಧಿ ಹಣದಲ್ಲಿ ವಿನಿಯೋಗಿಸದೇ ಬಾಕಿ ಉಳಿಯಬಹುದಾದ ಹಣದಲ್ಲಿ ವೆಚ್ಚ ಭರಿಸಬಹುದಾಗಿದೆ.

**ವಿಷಯ ನಂ 24(13)**

ವಿವೇಕಾನಂದ ಯುವಕ ಸಂಘದವರು ವಾಲಿಬಾಲ್ ಟೂರ್ನಾಮೆಂಟ್ ನಡೆಸಲು ಧನ ಸಹಾಯ ಕೇಳಿದ ಅರ್ಜಿ ಕುರಿತು ವಿಚಾರ.

**ಠರಾವು ನಂ. 311 (13)**
**16–12–2009**

ವಿವೇಕಾನಂದ ಖೊಡ್ಡಾ ವಾಲಿಬಾಲ್ ತಂಡ ಇವರು ಅಮರ ಸೇನಾನಿ ಚಂದ್ರಕಾಂತ ನಾಗೋಜಿ ಇವರ ಸ್ಮರಣಾರ್ಥ ದಿನಾಂಕ : 25.12.2009 ರಿಂದ 27.12.2009 ರವರೆಗೆ ವಾಲಿಬಾಲ್ ಪಂದ್ಯಾವಳಿಯನ್ನು ಏರ್ಪಡಿಸಿದ್ದು ಸ್ಪರ್ಧಾಳುಗಳಿಗಾಗಿ ಬಹುಮಾನ ಅಲ್ಪೋಪಹಾರಗಳನ್ನು ಮುಂತಾದವುಗಳನ್ನು ಪೂರೈಸಬೇಕಾಗಿದ್ದು ನಗರಸಭೆ ನಿಧಿಯಿಂದ ರೂ.35,000–00 ಕೇಳಿದ್ದಾರೆ. ನಗರಸಭೆ ಸದಸ್ಯರ ಒತ್ತಾಯದ ಮೇರೆಗೆ ಸಭೆಯಲ್ಲಿ ಚರ್ಚಿಸಿ ರೂ.5,000–00 ಮಂಜೂರಿ ನೀಡಿ ಸರ್ವಾನುಮತದಿಂದ ಠರಾಯಿಸಿತು.

**ವಿಷಯ ನಂ 24(14)**

ರಾಜ್ಯಮಟ್ಟದ ಕೊಂಕಣಿ ಭಾಷಾ ಮಹಿಳಾ ಸಾಹಿತ್ಯ ಸಾಂಸ್ಕೃತಿಕ ಉತ್ಸವ ಶಿರಸಿಯಲ್ಲಿ ದಿನಾಂಕ : 9 ಹಾಗೂ 10 ಜನವರಿ 2010 ರಂದು ಜರುಗಲಿರುವ ಸಮಾರಂಭಕ್ಕೆ ದೇಣಿಗೆ ನೀಡಲು ಸಲ್ಲಿಸಿದ ಅರ್ಜಿ ದಿನಾಂಕ : 15.12.2009ನ್ನು ಪರಿಶೀಲಿಸುವುದು.

**ಠರಾವು ನಂ. 311 (14)**
**16-12-2009**

ಶಿರಸಿ ನಗರದಲ್ಲಿ ರಾಜ್ಯಮಟ್ಟದ ಕೊಂಕಣಿ ಭಾಷಾ ಮಹಿಳಾ ಸಾಹಿತ್ಯ ಸಾಂಸ್ಕೃತಿಕ ಉತ್ಸವ ದಿನಾಂಕ: 9 ಹಾಗೂ 10 ಜನವರಿ 2010 ರಂದು ಜರುಗಲಿರುವ ಸಮಾರಂಭಕ್ಕೆ ದೇಣಿಗೆ ನೀಡಲು ಸಲ್ಲಿಸಿದ ಅರ್ಜಿ ದಿನಾಂಕ : 15.12.2009ನ್ನು ಸಭೆಗೆ ಓದಿ ಹೇಳಲಾಯಿತು. ಸಭೆಯು ಕೂಲಂಕಷವಾಗಿ ಚರ್ಚಿಸಿತು. ಶಿರಸಿಯಲ್ಲಿರುವ ವಿವಿಧ ಕೊಂಕಣಿ ಭಾಷಿಕ ಸಮುದಾಯದವರಾದ ಗೌಡ ಸಾರಸ್ವತ, ದೈವಜ್ಞ, ಬ್ರಾಹ್ಮಣ, ಭಂಡಾರಿ, ಕ್ರಿಶ್ಚಿನ್, ಗುಡಿಗಾರ, ಮಡಿವಾಳ, ನವಾಯಿತ, ದೇವಡಿಗ, ಆಚಾರಿ, ಖಾರ್ವಿ, ವೈಶ್ಯವಾಣಿ, ಕೋಮಾರಪಂತ, ಸಿದ್ದಿ, ಗೌಳಿ, ರಾಮಕ್ಷತ್ರಿಯ, ನಾಯಕ ಮುಂತಾದವರು ಕೊಂಕಣಿ ಭಾಷಿಕರಾಗಿದ್ದು ಅವರೆಲ್ಲರೂ 2 ದಿನದ ಕಾರ್ಯಕ್ರಮವನ್ನು ಮಾಡುವ ಸಲುವಾಗಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಸಾರ್ವಜನಿಕರಿಗೆ ಊಟೋಪಚಾರ, ವೇದಿಕೆ, ಶೋಭಾಯಾತ್ರೆ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ರೂ.15,000-00 ದೇಣಿಗೆ ರೂಪದಲ್ಲಿ ನೀಡಲು ಸಭೆಯು ತೀರ್ಮಾನಿಸಿ ಮಂಜೂರಿ ನೀಡಿತು. ಸರ್ವಾನುಮತದಿಂದ ಠರಾಯಿಸಿತು.

**ವಿಷಯ ನಂ 24(15)**

ಆರ್ಯನ್ಸ್ ಕ್ರಿಕೆಟ್ ಪಂದ್ಯಾವಳಿಗೆ ಧನ ಸಹಾಯ ನೀಡುವ ಕುರಿತು ವಿಚಾರ.

**ಠರಾವು ನಂ. 311 (15)**
**16-12-2009**

ಆರ್ಯನ್ಸ್ ಕ್ರಿಕೆಟ್ ಕ್ಲಬ್, ಯಲ್ಲಾಪುರ ರಸ್ತೆ ಇವರು ಆರ್ಯನ್ಸ್ ಕ್ರಿಕೆಟ್ ಪಂದ್ಯಾವಳಿಯನ್ನು ಏರ್ಪಡಿಸಿದ್ದು ಸ್ಪರ್ಧಾಳುಗಳಿಗಾಗಿ ಬಹುಮಾನ ಅಲ್ಪೋಪಹಾರಗಳನ್ನು ಮುಂತಾದವುಗಳನ್ನು ಪೂರೈಸಬೇಕಾಗಿದ್ದು ನಗರಸಭೆ ನಿಧಿಯಿಂದ ಸಹಾಯಧನ ಕೇಳಿದ್ದಾರೆ. ನಗರಸಭೆ ಸದಸ್ಯರ ಒತ್ತಾಯದ ಮೇರೆಗೆ ಸಭೆಯಲ್ಲಿ ಚರ್ಚಿಸಿ ರೂ.2,000-00 ಮಂಜೂರಿ ನೀಡಿ ಸರ್ವಾನುಮತದಿಂದ ಠರಾಯಿಸಿತು.

**ವಿಷಯ ನಂ 24(16)**

ರೇಣುಕಾ ಗಂಗಾಧರ ನಾಯ್ಕ, ಅಗಸೇಬಾಗಿಲ ಶಿರಸಿ, ತೆಂಗಿನಮರ ಬಿದ್ದು ಎಡಗೈ ಮುರಿದ ಬಗ್ಗೆ ಸಹಾಯಧನ ಕೇಳಿದ ಅರ್ಜಿ ದಿನಾಂಕ : 27.11.2009 ಪರಿಶೀಲಿಸುವುದು.

**ಠರಾವು ನಂ. 311 (16)**
**16-12-2009**

ರೇಣುಕಾ ಗಂಗಾಧರ ನಾಯ್ಕ, ಅಗಸೇಬಾಗಿಲ ಶಿರಸಿ, ಇವರ ಎಡಗೈ ಮೇಲೆ ತೆಂಗಿನಮರ ಬಿದ್ದು ಪೂರ್ತಿಯಾಗಿ ಎಡಗೈ ಮುರಿದು ಅಂಗವಿಕಲರಾಗಿರುತ್ತಾರೆ. ಇವರು ಅಲ್ಪ ಪ್ರಾಯದವರಿದ್ದು ಅವರ ಜೀವನ ವ್ಯವಸ್ಥೆ ಅಸ್ತವ್ಯಸ್ತವಾಗಿರುತ್ತದೆ. ಪಂಡಿತ ಜನರಲ್ ಹಾಸ್ಪಿಟಲ್ ಶಿರಸಿ ಇವರು ನೀಡಿದ ಸರ್ಟಿಫೀಕೇಟ್

ದಿನಾಂಕ : 08.06.2009 ಪರಿಶೀಲಿಸಲಾಗಿ ಅವರಿಗೆ ರೂ. 2,000–00 ಸಹಾಯಾರ್ಥವಾಗಿ ಮಂಜೂರಿ ನೀಡಿ ಸರ್ವಾನುಮತದಿಂದ ಠರಾಯಿಸಿತು.

**ವಿಷಯ ನಂ 24(17)**

ಅಧ್ಯಕ್ಷರು, ಎಸ್.ಡಿ.ಎಮ್.ಸಿ., ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಶಿರಸಿ ನಂ.1 ಪತ್ರ ಸಂಖ್ಯೆ : 8 ದಿನಾಂಕ : 15.12.2009 ರ ಪತ್ರವನ್ನು ಪರಿಶೀಲಿಸುವುದು.

**ಠರಾವು ನಂ. 311 (17)**
**16-12-2009**

ರಾಯಪ್ಪ ಹುಲೇಕಲ್ ಶಾಲೆಗೆ ಬಿಸಿಯೂಟದ ಕಾರ್ಯಕ್ರಮದಡಿಯಲ್ಲಿ ಸರಕಾರದ ಅನುದಾನದಿಂದ ಕ್ರಿಯಾಯೋಜನೆಯನ್ನು ತಯಾರಿಸಿ ಕೋಣೆಯನ್ನು ಕಟ್ಟಿಸಿ ಕೆಲಸ ಪೂರ್ತಿಗೊಂಡಿದೆ. ಅಂದಾಜು ಪಟ್ಟಿಯ ಕೆಲಸಕ್ಕಿಂತ ಹೆಚ್ಚುವರಿ ಕಾಮಗಾರಿಯನ್ನು ಮಾಡಿಸಿ ನೆಲಕ್ಕೆ ಕಲ್ಲು ಹಾಕುವುದು ಮತ್ತು ತೆರವಿರುವ ಸ್ಥಳದಲ್ಲಿ ಆರ್.ಸಿ.ಸಿ. ತಗಡುಗಳನ್ನು ಅಳವಡಿಸಿ ಛಾವಣಿ ಕೆಲಸ ಹೆಚ್ಚಿನ ಕಾಮಗಾರಿಯನ್ನು ಮಾಡಲು ಅಧ್ಯಕ್ಷರಿಗೆ ವಿನಂತಿಸಿ ಕಾಮಗಾರಿಯನ್ನು ಮಾಡಿಸಲಾಗಿದೆ. ಈ ಕುರಿತು ನಗರಸಭೆ ಅಧ್ಯಕ್ಷರಿಗೆ ಈ ಹಿಂದೆ ಮನವಿ ನೀಡಿದ್ದು ಇರುತ್ತದೆ. ಮನವಿಯನ್ನು ಪರಿಗಣಿಸಿ ಶಾಲಾ ಅಭಿವೃದ್ಧಿಗೆ ಸಹಕರಿಸಿರುವುದರಿಂದ ಸದರಿ ಹೆಚ್ಚುವರಿ ಕೆಲಸದ ಬಿಲ್ ಬಟವಡೆ ಮಾಡಲು ವಿನಂತಿ ಮಾಡಿರುವದನ್ನು ಸಭೆಗೆ ಓದಿ ಹೇಳಲಾಯಿತು. ಸಭೆ ಕೂಲಂಕಷವಾಗಿ ಚರ್ಚಿಸಿ ಮಂಜೂರಿಯಿಂದ ಮಾಡಿದ ಕಾಮಗಾರಿಯ ಶೇ.25 ಹೆಚ್ಚುವರಿಯಾದ ಕಾಮಗಾರಿಯನ್ನು ಮಾಡಲು ಅವಕಾಶವಿದ್ದು ಹೆಚ್ಚುವರಿಯಾಗಿ ನಿರ್ವಹಿಸಿದ ಕಾಮಗಾರಿ ಎಸ್ಟಿಮೇಟ್ ಮಾಡಿ ಬಟವಡೆ ಮಾಡಲು ತೀರ್ಮಾನಿಸಿತು. ಸಭೆಯು ಸರ್ವಾನುಮತದಿಂದ ಮಂಜೂರಿ ನೀಡಿ ಠರಾಯಿಸಿತು.

**ವಿಷಯ ನಂ 24(18)**

ಸ್ಮಾರ್ಟ ನೃತ್ಯ ತಂಡ ಶಿರಸಿ ಇವರು ದಿನಾಂಕ : 09.01.2010 ರಂದು ನೃತ್ಯೋತ್ಸವ ಮಾಡಲು ಕಾರ್ಯಕ್ರಮ ಹಮ್ಮಿದ್ದು ಧನಸಹಾಯ ಕೇಳಿ ಅರ್ಜಿಯನ್ನು ದಿನಾಂಕ : 10.12.2009 ರಂದು ಸಲ್ಲಿಸಿರುವದನ್ನು ಪರಿಶೀಲಿಸುವುದು.

**ಠರಾವು ನಂ. 311 (18)**
**16-12-2009**

ಸ್ಮಾರ್ಟ ನೃತ್ಯ ತಂಡ ಶಿರಸಿ, ಉತ್ತರಕನ್ನಡ ಜಿಲ್ಲೆ, 5ನೇ ವಾರ್ಷಿಕೋತ್ಸವದ ನಿಮಿತ್ತ ರಾಜ್ಯ-ರಾಷ್ಟ್ರಮಟ್ಟದಲ್ಲಿ ಪ್ರಶಂಸೆ, ಪ್ರಶಸ್ತಿ ಪಡೆದ ಜಾದೂಗಾರ ಮತ್ತು ಹಾಸ್ಯಗಾರರು ದಿವಂಗತ ಏಕನಾಥ ಭಟ್ಕಳ, ಇವರ ಸ್ಮರಣಾರ್ಥ ಶಿರಸಿ ನಗರದಲ್ಲಿ ದಿನಾಂಕ : 09.01.2010 ರಂದು ಮತ್ತು 10.01.2010 ರಂದು ವಿದ್ಯಾಧಿರಾಜ ಕಲಾಕ್ಷೇತ್ರದಲ್ಲಿ ರಸಮಂಜರಿ ಕಾರ್ಯಕ್ರಮ ಹಮ್ಮಿಕೊಂಡಿದ್ದು ಈ ಕಾರ್ಯಕ್ರಮಕ್ಕೆ ಜ್ಯೂನಿಯರ್ ಅಂಬರೀಷ ಹಾಗೂ ಜ್ಯೂನಿಯರ್ ಗುರುಕಿರಣ ಮುಂತಾದವರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದರಿಂದ ಹೆಚ್ಚಿನ ಖರ್ಚು-ವೆಚ್ಚ ಬರುತ್ತಿದ್ದು ಧನಸಹಾಯ ಕೇಳಿ ಸಲ್ಲಿಸಿದ ಅರ್ಜಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ರೂ.2,000–00 ಮಂಜೂರಿ ನೀಡಿ ಸರ್ವಾನುಮತದಿಂದ ಠರಾಯಿಸಿತು.

**ವಿಷಯ ನಂ 24(19)**

ಶ್ರೀ. ಉದಯ ಕಳೂರ, ಸದಸ್ಯರು ನಗರಸಭೆ ಶಿರಸಿ, ಇವರ ಅರ್ಜಿ ದಿನಾಂಕ: 15.12.2009 ಪರಿಶೀಲಿಸಿ ಮಂಜೂರು ಮಾಡುವುದು.

**ಠರಾವು ನಂ. 311 (19)**
**16-12-2009**

ಶ್ರೀ. ಉದಯ ಕಳೂರ, ಸದಸ್ಯರು ನಗರಸಭೆ ಶಿರಸಿ, ಇವರ ಅರ್ಜಿ ದಿನಾಂಕ: 15.12.2009 ನೇದನ್ನು ಸಭೆಗೆ ಓದಿ ಹೇಳಲಾಯಿತು. ಟಿ.ಎಸ್.ಎಸ್.ರಸ್ತೆ ಬಲಭಾಗದಲ್ಲಿ ಬಹಳಷ್ಟು ಮನೆಗಳಿದ್ದು ಅಲ್ಲಿಯ ನಿವಾಸಿಗಳಿಗೆ ಕುಡಿಯುವ ನೀರಿನ ಅವಶ್ಯಕತೆ ಇರುತ್ತದೆ. ಆ ವಾರ್ಡಿಗೆ ನೀರಿನ ಪೈಪಲೈನ್ ಇರುವುದಿಲ್ಲ. ಹೊಸದಾಗಿ ನೀರಿನ ಪೈಪಲೈನ್ ಅಳವಡಿಸಿ ಕುಡಿಯುವ ನೀರು ಪೂರೈಕೆ ಮಾಡಲು ವಿನಂತಿ ಮಾಡಿರುತ್ತಾರೆ. ಸಭೆಯು ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಿತು. ಸದರಿ ಕಾಮಗಾರಿಯನ್ನು ಮಾಡಲು ಅಂದಾಜು ರೂ.2,00,000-00 ಬೇಕಾಗುತ್ತದೆ. ಆದ್ದರಿಂದ ಎಸ್ಟಿಮೇಟ್ ಮಾಡಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಸಭೆ ತೀರ್ಮಾನಿಸಿತು. ಸರ್ವಾನುಮತದಿಂದ ಮಂಜೂರಿ ನೀಡಿ ಠರಾಯಿಸಿತು.

**ವಿಷಯ ನಂ 24(20)**

ಶ್ರೀ. ಕುಶಲ್ ಮಾಧವ ರೇವಣಕರ್, "ವೆಂಕಟೇಶ ನಿಲಯ", ಮರಾಠಿಕೊಪ್ಪ, ಶಿರಸಿ ಇವರ ಅರ್ಜಿ ದಿನಾಂಕ : 07.12.2009 ಪರಿಶೀಲಿಸುವುದು.

**ಠರಾವು ನಂ. 311 (20)**
**16-12-2009**

ಶ್ರೀ. ಕುಶಲ್ ಮಾಧವ ರೇವಣಕರ್, "ವೆಂಕಟೇಶ ನಿಲಯ", ಮರಾಠಿಕೊಪ್ಪ, ಶಿರಸಿ ಇವರ ಅರ್ಜಿ ದಿನಾಂಕ : 07.12.2009ನ್ನು ಸಭೆಗೆ ಓದಿ ಹೇಳಲಾಯಿತು. ಶಿರಸಿ ನಗರಸಭೆ ಮಾಲಿಕತ್ವದ ಸುಭಾಷಚಂದ್ರ ಭೋಸ್ ವಾಣಿಜ್ಯ ಮಳಿಗೆ ನಂ.110 ನೇದನ್ನು ದಿನಾಂಕ : 16.11.2009 ರಂದು ನಡೆದ ಬಹಿರಂಗ ಹರಾಜಿನಲ್ಲಿ ಪಡೆದಿರುತ್ತಾರೆ. ಹರಾಜು ಪ್ರಕ್ರಿಯೆ ಕಂಡೀಷನ್ ಪ್ರಕಾರ ಶೇ.10 ರಷ್ಟು ಹಣವನ್ನು ಭರಣಾ ಮಾಡಿರುತ್ತಾರೆ. ಪ್ರಿಮೀಯಂ ಹಣದ ಉಳಿದ ಶೇ.90 ರಷ್ಟು ಹಣವನ್ನು ಭರಣಾ ಮಾಡಲು ಸಮಯವಕಾಶ ನೀಡಬೇಕಾಗಿ 30 ದಿನಗಳ ಕಾಲಾವಕಾಶ ಕೊಡಲು ಕೇಳಿರುತ್ತಾರೆ. ಸಭೆಯು ಕೂಲಂಕಷವಾಗಿ ಪರಿಶೀಲಿಸಿ ಅರ್ಜಿದಾರರ ಮಾಗಣಿಯನ್ನು ಹರಾಜು ಪ್ರಕ್ರಿಯೆ ನಿಯಮವನ್ನು ಉಲ್ಲಂಘಿಸಿ ಮಂಜೂರು ಮಾಡಲು ಬರಲಾರದಾಗಿ ತೀರ್ಮಾನಿಸಿತು. ಕಾರಣ ಅರ್ಜಿಯಲ್ಲಿ ಮಾಡಿದ ಮಾಗಣಿಯನ್ನು ತಿರಸ್ಕರಿಸಲಾಯಿತು. ಸರ್ವಾನುಮತದಿಂದ ಠರಾಯಿಸಿತು.

**ವಿಷಯ ನಂ 24(21)**

ಶಿರಸಿ ನಗರದಲ್ಲಿ ಮಂಗಗಳ ಹಾವಳಿ ಹೆಚ್ಚಾಗಿದ್ದು ಮಂಗಳಗಳನ್ನು ಹಿಡಿದು ಅರಣ್ಯಕ್ಕೆ ಸಾಗಿಸಲು ಟೆಂಡರು ದರವನ್ನು ಮಂಜೂರಿ ನೀಡುವುದು.

**ಠರಾವು ನಂ. 311 (21)**
**16-12-2009**

ಶಿರಸಿ ನಗರದಲ್ಲಿ ಮಂಗಗಳ ಹಾವಳಿ ಹೆಚ್ಚಾಗಿದ್ದು ಮಂಗಗಳನ್ನು ಹಿಡಿದು ಅರಣ್ಯಕ್ಕೆ ಸಾಗಿಸಲು ಸಾರ್ವಜನಿಕರಿಂದ ಬಹಳಷ್ಟು ದೂರುಗಳು ಇದ್ದು ಮಂಗಗಳನ್ನು ಹಿಡಿದು ಸಾಗಿಸುವಂತೆ ನಗರಸಭೆಯ ಸ್ಥಾಯಿ

ಸಮಿತಿ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಗಿತ್ತು. ಅದರಂತೆ, ಟೆಂಡರು ಪ್ರಕಟಣೆಯನ್ನು ಮಾಡಿ ದಿನಾಂಕ: 05-11-2009ರಂದು ಲೋಕಧ್ವನಿ ದಿನಪತ್ರಿಕೆಯಲ್ಲಿ ಪ್ರಕಟಪಡಿಸಲಾಗಿರುತ್ತದೆ. ಪ್ರಕಟಣೆಯನ್ವಯ ದಿನಾಂಕ: 11-11-2009 ರಂದು ಸ್ವೀಕರಿಸಿದ ದರವಾರುಗಳನ್ನು ಪರಿಶೀಲಿಸಲಾಗಿ (1) ರಿಂದ (50) ಮಂಗಗಳನ್ನು ಹಿಡಿದು ಕೊಡಲು ರೂ. 15,000-00 ತದನಂತರ ಪ್ರತಿ ಮಂಗಕ್ಕೆ ರೂ. 50 ರಂತೆ ದರ ನಮೂದು ಮಾಡಿದ್ದು ಇದ್ದು ಎಲ್-1 ದರ ಇರುತ್ತದೆ. ಆದ್ದರಿಂದ ಅನುಮೋದಿಸಿ ದರವನ್ನು ಮಂಜೂರಿ ಮಾಡಲಾಯಿತು.

| ಕ್ರ.ಸಂ. | ವಿವರಗಳು | ದರವಾರು ಸಲ್ಲಿಸಿದವರ ಹೆಸರಸು ವಿಳಾಸ ಮತ್ತು ರಕಂ | |
|---|---|---|---|
| | | ಶಬ್ಬಿರ್ ಹನೀಫ್ ಶೇಖ್, ಬುಧವಾರ ಪೇಟ್, ಮೀರಜ್ | ಕಲಾಮ ಶಬ್ಬಿರ್ ಶೇಖ್, ಮಟನ ಮಾರುಕಟ್ಟೆ ಹತ್ತಿರ, ಮೀರಜ್ |
| 1 | ನಗರ ವ್ಯಾಪ್ತಿಯಲ್ಲಿ ಇರುವ ಮಂಗಗಳನ್ನು (ಮಂಗಗಳಿಗೆ ಯಾವುದೇ ರೀತಿಯ ತೊಂದರೆಯಿಲ್ಲದೆ) ಹಿಡಿದು ನೀಡುವುದು. | 1 ರಿಂದ 50 ಮಂಗಗಳನ್ನು ಹಿಡಿಯುವುದು ರೂ. 15,000 ಅದರ ಮೇಲಿನ ಪ್ರತಿ 1 ಮಂಗ ಹಿಡಿಯುವುದು ರೂ. 250 ಎಲ್-1 | ರೂ. 20,000 ರೂ. 450 ಎಲ್-2 |

**ವಿಷಯ ನಂ 24(22)**

ಶ್ರೀ ಯಶ್ವಂತ ಆಚಾರಿ, ಮರಾಠಿಕೊಪ್ಪ, ಶಿರಸಿ ಇವರ ಅರ್ಜಿ ದಿನಾಂಕ: 15-12-2009.

**ಠರಾವು ನಂ. 311 (22)**
**16-12-2009**

ಶ್ರೀ ಯಶ್ವಂತ ಆಚಾರಿ, ಮರಾಠಿಕೊಪ್ಪ, ಶಿರಸಿ ಇವರ ಮಗನಿಗೆ ತಲೆಯ ಮೇಲೆ ತೆಂಗಿನ ಹೆಡೆ ಬಿದ್ದು ತಲೆಗೆ ರಬಸವಾದ ಹೊಡೆತದಿಂದ ಮೆದುಳಿಗೆ ತೊಂದರೆಯಾಗಿದ್ದು ಅವರ ಚಿಕಿತ್ಸೆಗಾಗಿ ರೂ. 2,000/- ಮಂಜೂರು ಮಾಡಿ ಸರ್ವಾನುಮತದಿಂದ ಠರಾಯಿಸಿತು.

**ವಿಷಯ ನಂ 24 (23)**

ಶಿರಸಿ ನಗರಸಭೆ ಮಾಲಿಕತ್ವದ ವಾಣಿಜ್ಯ ಸಂಕೀರ್ಣದಲ್ಲಿ ಮೀಟರ್ ಪೆನಲ್ ಬೋರ್ಡ ಹಾಗೂ 100 ಕೆ.ವಿ.ಎ. ಪರಿವರ್ತಕದ ಸುತ್ತ ಮೆಷ್ ಪೆನ್ಸಿಂಗ್ (ತಂತಿ ಜಾಳಿಗೆ) ಅಳವಡಿಸುವ ಕಾಮಗಾರಿ ಮಾಡಲು ದರವಾರು ಬಂದಿರುವುದನ್ನು ಮಂಜೂರಾತಿ ನೀಡುವುದು.

**ಠರಾವು ನಂ. 311 (23)**
**16-12-2009**

ಶಿರಸಿ ನಗರಸಭೆ ಮಾಲಿಕತ್ವದ ವಾಣಿಜ್ಯ ಸಂಕೀರ್ಣದಲ್ಲಿ ಮೀಟರ್ ಪೆನಲ್ ಬೋರ್ಡ ಹಾಗೂ 100 ಕೆ.ವಿ.ಎ. ಪರಿವರ್ತಕದ ಸುತ್ತ ಮೆಷ್ ಪೆನ್ಸಿಂಗ್ (ತಂತಿ ಜಾಳಿಗೆ) ಅಳವಡಿಸುವ ಕಾಮಗಾರಿ ಮಾಡಲು ದರವಾರುಗಳನ್ನು ಕರೆದಿದ್ದು ದಿನಾಂಕ : 29.10.2009 ರಂದು ಸ್ವೀಕರಿಸಿದ ದರಗಳ ತುಲನಾತ್ಮಕ ಯಾದಿಯಂತೆ 2 ಜನ ಗುತ್ತಿಗೆದಾರರು ದರ ಕೋಟೇಶನ್ ಸಲ್ಲಿಸಿರುತ್ತಾರೆ. ಕಾಮಗಾರಿಯ ಅಂದಾಜು ಪತ್ರಿಕೆಯ ಮೊತ್ತ ರೂ.20,000-00 ಇರುತ್ತದೆ. (1) ಮಾರಿಕಾಂಬಾ ಇಲೆಕ್ಟ್ರಿಕಲ್ಸ್ ಶಿರಸಿ ಇವರು ಪೂರೈಸಿದ ದರ ರೂ.21,084.75 ಶೇ.5.4 ಹೆಚ್ಚು ಇರುತ್ತದೆ. ಇದು ಎಲ್-1 ದರ. (2) ಅನುಗ್ರಹ ಇಲೆಕ್ಟ್ರಿಕಲ್ಸ್ ಶಿರಸಿ ಇವರು ನಮೂದಿಸಿದ ದರ ರೂ.21,952.09 ಶೇ.9.7 ಹೆಚ್ಚಿಗೆ ಇರುತ್ತದೆ. ಇದು ಎಲ್-2 ದರ. ಇವುಗಳನ್ನು ಪರಿಶೀಲಿಸಲಾಗಿ ಎಲ್-1 ದರವನ್ನು ಅನುಮೋದಿಸಲು ಶಿಫಾರಸ್ಸು ಮಾಡಿರುವುದನ್ನು ಸಭೆಯು ಕೂಲಂಕಷವಾಗಿ ಪರಿಶೀಲಿಸಿ ಮಾರುಕಟ್ಟೆಯಲ್ಲಿ

ವಿದ್ಯುತ್ ಸಾಮಗ್ರಿಗಳ ದರ ಹೆಚ್ಚಿಗೆ ಇರುವದನ್ನು ಅನುಸರಿಸಿ ಅಂದಾಜು ಪತ್ರಿಕೆ ದರಕ್ಕಿಂತ ಶೇ.5.4 ಹೆಚ್ಚಿಗೆ ದರ ನಮೂದಿಸಿರುವ ಎಲ್‌–1 ದರವನ್ನು ಅನುಮೋದಿಸಿ ಸಭೆಯ ಮಂಜೂರಿ ನಿರೀಕ್ಷಣೆಯ ಮೇರೆಗೆ ಕಾರ್ಯಾದೇಶವನ್ನು ಮಾಡಿರುವುದನ್ನು ಅನುಮೋದಿಸಿ ಸರ್ವಾನುಮತದಿಂದ ಮಂಜೂರಿ ನೀಡಿ ಠರಾಯಿಸಿತು.

**ವಿಷಯ ನಂ 24 (24)**

ಆಡಳಿತಾಧಿಕಾರಿಗಳು, ಇಖ್ರಾ ಎಜ್ಯುಕೇಶನ್ ಟ್ರಸ್ಟ್, ಶಿರಸಿ ಇವರ ಪತ್ರ ಸಂಖ್ಯೆ : 56/IQRA/2009-10 ದಿನಾಂಕ : 14.12.2009 ಪರಿಶೀಲಿಸಿ ಮಂಜೂರಿ ನೀಡುವುದು.

**ಠರಾವು ನಂ. 311(24):**
**16-12-2009**

ಆಡಳಿತಾಧಿಕಾರಿಗಳು, ಇಖ್ರಾ ಎಜ್ಯುಕೇಶನ್ ಟ್ರಸ್ಟ್, ಶಿರಸಿ ಇವರ ಪತ್ರವನ್ನು ದಿನಾಂಕ : 14.12.2009 ನೇದನ್ನು ಸಭೆಗೆ ಓದಿ ಹೇಳಲಾಯಿತು. ಇಖ್ರಾ ಸಂಸ್ಥೆಯಲ್ಲಿ ಎಲ್.ಕೆ.ಜಿ. ಯಿಂದ ದ್ವಿತೀಯ ಪಿ.ಯು.ಸಿ.ಯವರೆಗೆ ಸುಮಾರು 600 ಮಕ್ಕಳು ಕಲಿಯುತ್ತಿದ್ದು ನಗರಸಭೆಯಿಂದ ಅಲ್ಪಸಂಖ್ಯಾತ ಅಭಿವೃದ್ಧಿಗಾಗಿ ಮೀಸಲಿಟ್ಟಿರುವ ಕಾರ್ಯಕ್ರಮದ ಯೋಜನೆಯಲ್ಲಿ 3 ಕಂಪ್ಯೂಟರ್ ಹಾಗೂ ಪ್ರಿಂಟರ್‌ಗಳನ್ನು ಒದಗಿಸಬೇಕೆಂದು ವಿನಂತಿಸಿರುತ್ತಾರೆ. ಸಭೆಯು ಕೂಲಂಕಷವಾಗಿ ಚರ್ಚಿಸಿತು. ಖಾಸಗಿ ಉರ್ದು ಭಾಷಾ ಶಿಕ್ಷಣ ಸಂಸ್ಥೆಯಾಗಿದ್ದು 600 ಮಕ್ಕಳಿಗೆ ಶಿಕ್ಷಣವನ್ನು ನೀಡುವ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮಾಡಿರುತ್ತಾರೆ. ಮಕ್ಕಳಿಗಾಗಿ ಒಳ್ಳೆಯ ಕಟ್ಟಡವನ್ನು ಕಟ್ಟಿ ಸುಸಜ್ಜಿತವಾದ ಶಾಲೆಯನ್ನು ನಿರ್ಮಾಣ ಮಾಡಿರುತ್ತಾರೆ. ಅಲ್ಲಿ ಕಲಿಯುವ ಮಕ್ಕಳಿಗಾಗಿ ಕಂಪ್ಯೂಟರ್ ಅವಶ್ಯಕತೆ ಇರುತ್ತದೆ. 2 ಕಂಪ್ಯೂಟರ್ ಮತ್ತು 1 ಪ್ರಿಂಟರನ್ನು ನಗರಸಭೆ ನಿಧಿಯಿಂದ ಖರೀದಿಸಿ ಪೂರೈಸಲು ಸಭೆಯು ಮಂಜೂರಿ ನೀಡಿ ಸರ್ವಾನುಮತದಿಂದ ಠರಾಯಿಸಿತು.

**ವಿಷಯ ನಂ 24 (25)**

ಶ್ರೀ ಭೂತೇಶ್ವರ ಅಭಿವೃದ್ಧಿ ಸಮಿತಿ, ರಾಜೀವ ನಗರ, ಶಿರಸಿ ಇವರ ಅರ್ಜಿ ದಿನಾಂಕ : 14.12.2009 ಪರಿಶೀಲಿಸಿ ಮಂಜೂರಿ ನೀಡುವುದು.

**ಠರಾವು ನಂ. 311(25):**
**16-12-2009**

ಆಯೋಜಕರು, ನ್ಯೂ ಇಯರ್ ಟ್ರೋಫಿ 2009-10 ರಾಜೀವನಗರ ಶಿರಸಿ ಇವರ ಅರ್ಜಿಯನ್ನು ಸಭೆಗೆ ಓದಿ ಹೇಳಲಾಯಿತು. ದಿನಾಂಕ : 19.12.2009 ಮತ್ತು 20.12.2009 ಶಿರಸಿಯಲ್ಲಿ ಮುಕ್ತ ವಾಲಿಬಾಲ ಹೊನಲು ಬೆಳಕಿನ ಪಂದ್ಯಾವಳಿಯನ್ನು ನಿಯೋಜಿಸಲಾಗಿದೆ. ಕ್ರೀಡಾಪಟುಗಳಿಗೆ ಬಹುಮಾನ ವಿತರಣೆ ಮತ್ತು ಅಲ್ಪೋಪಹಾರ ವ್ಯವಸ್ಥೆ ಮಾಡಲು ಧನಸಹಾಯ ಕೇಳಿರುತ್ತಾರೆ. ಸಭೆಯು ಪರಿಶೀಲಿಸಿ ರೂ.2,000-00 ಮಂಜೂರಿ ನೀಡಿ ಸರ್ವಾನುಮತದಿಂದ ಠರಾಯಿಸಿತು.

ಸಹಿ ಇದೆ/-
ಅಧ್ಯಕ್ಷರು,
ನಗರಸಭೆ, ಶಿರಸಿ.

--ನಕಲು—

ಪೌರಾಯುಕ್ತರು,
ನಗರಸಭೆ, ಶಿರಸಿ.